ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ
ಡಿಸೆಂಬರ್ 4 ಗುರುವಾರ 2025
ಸಂಪುಟ: 46 | ಸಂಚಿಕೆ: 226 | ಪುಟಗಳು: 12
₹4
ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಒಂದೆಡೆ ಡಿಕೆ... ಡಿಕೆ... ಮತ್ತೊಂದೆಡೆ ಸಿದ್ದು... ಸಿದ್ದು...

ಮಂಗಳೂರಲ್ಲಿ ಪೈಪೋಟಿ ಜೈಕಾರ

ಮಂಗಳೂರು,ಡಿ.3– ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನಡುವಿನ ಅಧಿಕಾರ ಹಂಚಿಕೆ ಒಪ್ಪಂದದ ಬಗ್ಗೆ ಕರ್ನಾಟಕ ಕಾಂಗ್ರೆಸ್‌ನಲ್ಲಿ ಅಸಮಾಧಾನ, ಬಣ ರಾಜಕೀಯ ಇನ್ನೂ ಶಮನಗೊಂಡಿಲ್ಲ. ಬುಧವಾರ ಮಂಗಳೂರು ವಿಮಾನ ನಿಲ್ದಾಣದಲ್ಲಿ ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಅವರನ್ನು ಡಿ.ಕೆ.ಶಿವಕುಮಾರ್ ಪರ ಘೋಷಣೆಗಳೊಂದಿಗೆ ಸ್ವಾಗತಿಸಲಾಯಿತು.

ಮಂಗಳೂರು ವಿವಿ ಆಯೋಜಿಸಿದ್ದ ಐತಿಹಾಸಿಕ ನಾರಾಯಣ ಗುರು–ಮಹಾತ್ಮ ಗಾಂಧಿ ಸಂವಾದದ ಶತಮಾನೋತ್ಸವ ಸ್ಮರಣಾರ್ಥ ಕಾರ್ಯಕ್ರಮದಲ್ಲಿ ಭಾಗವಹಿಸಲು ವೇಣುಗೋಪಾಲ್ ಮಂಗಳೂರಿಗೆ ಆಗಮಿಸಿ ಟರ್ಮಿನಲ್‌ನಿಂದ ನಿರ್ಗಮಿಸುತ್ತಿದ್ದಂತೆ ಕಾರ್ಯಕರ್ತರ ಗುಂಪೊಂದು ಮಿಥುನ್ ರೈ ನೇತೃತ್ವದಲ್ಲಿ ಶಿವಕುಮಾರ್‌ಗೆ ಬೆಂಬಲ ವ್ಯಕ್ತಪಡಿಸಿ ಡಿಕೆ.. ಡಿಕೆ.. ಘೋಷಣೆಗಳನ್ನು ಕೂಗಿತು. ಸಿದ್ದರಾಮಯ್ಯ ಅವರು ಅಲ್ಲಿಗೆ ಬಂದ ನಂತರ ಅವರ ಬೆಂಬಲಿಗರು ಎಂಎಲ್‌ಸಿ ಐವಾನ್ ಡಿಸೋಜಾ ನೇತೃತ್ವದಲ್ಲಿ 'ಸಿದ್ದು... ಸಿದ್ದು... ಪೂರ್ಣಾವಧಿ ಸಿದ್ದು' (ಪೂರ್ಣಾವಧಿ ಸಿಎಂ ಸಿದ್ದರಾಮಯ್ಯ) ಘೋಷಣೆಗಳೊಂದಿಗೆ ಪ್ರತಿ ಘೋಷಣೆ ಕೂಗಿದರು. ಸಿದ್ದರಾಮಯ್ಯ ಮತ್ತು ಡಿ.ಕೆ.ಶಿವಕುಮಾರ್ ಇಬ್ಬರೂ ನಾವು ಒಗ್ಗಟ್ಟಾಗಿದ್ದೇವೆ ಎಂದು ಸಾರ್ವಜನಿಕವಾಗಿ ಸಮರ್ಥಿಸಿಕೊಂಡಿದ್ದರೂ, ಶಿವಕುಮಾರ್ ಅವರಿಗೆ ಸಿಎಂ ಹುದ್ದೆ ನೀಡಬೇಕೆಂದು ಬಹಿರಂಗವಾಗಿ ಬೆಂಬಲ ನೀಡುವ ಶಾಸಕರು ಸೇರಿದಂತೆ ಅವರ ಬೆಂಬಲಿಗರ ಇತ್ತೀಚಿನ ಹೇಳಿಕೆಗಳು ಸಿಎಂ ಹುದ್ದೆ ಬದಲಾವಣೆ ಚರ್ಚೆ ಜೀವಂತವಾಗಿರಿಸಿದೆ.

ಡಿಕೆಶಿ ಹೋಗಲಿ ಬಿಡಿ, ಆಹ್ವಾನ ಇಲ್ಲದೆ ನಾನು ದೆಹಲಿಗೆ ಹೋಗಲ್ಲ



ಬೆಂಗಳೂರು: ಆಹ್ವಾನ ನೀಡದ ಹೊರತು ನವದೆಹಲಿಗೆ ಹೋಗುವುದಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ. ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಬುಧವಾರ ಮದುವೆಯಲ್ಲಿ ಭಾಗವಹಿಸಲು ಮತ್ತು ಪಕ್ಷದ ಕಾರ್ಯಕ್ರಮವನ್ನು ಯೋಜಿಸಲು ಎಂದು ಹೇಳಿಕೊಂಡು ನವದೆಹಲಿಗೆ ತೆರಳಿದ್ದಾರೆ. ಅತ್ತ ಡಿಸಿಎಂ ದೆಹಲಿಗೆ ತೆರಳಿದರೆ, ಸಿದ್ದರಾಮಯ್ಯ ಅವರು ಸಮಾಜ ಸುಧಾರಕ ಶ್ರೀ ನಾರಾಯಣ ▶ 6ನೇ ಪುಟಕ್ಕೆ

ಅಂಗನವಾಡಿ, ಅಕ್ಷರ ದಾಸೋಹ, ಆಶಾ ಕಾರ್ಯಕರ್ತರ ಬಹುತೇಕ ಬೇಡಿಕೆ ಈಡೇರಿಕೆಗೆ ಕೇಂದ್ರ ಸಮ್ಮತಿ

- ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಅನ್ನಪೂರ್ಣದೇವಿ ಭರವಸೆ
- ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್‌ರನ್ನು ನೌಕರರ ಪ್ರಮುಖರ ಜತೆ ಭೇಟಿಯಾಗಿ ಚರ್ಚಿಸಿದ ಹೆಚ್‌ಡಿಕೆ



ನವದೆಹಲಿಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವಾಲಯದ ಕಚೇರಿಯಲ್ಲಿ ಸಚಿವೆ ಅನ್ನಪೂರ್ಣದೇವಿ ಅವರನ್ನು ಭೇಟಿಯಾದ ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ, ಕರ್ನಾಟಕದ ಅಂಗನವಾಡಿ, ಅಕ್ಷರ ದಾಸೋಹ, ಆಶಾ ನೌಕರರ ಪ್ರಮುಖರ ಸಮ್ಮುಖದಲ್ಲಿ ಅವರ ಸಮಸ್ಯೆಗಳು, ಬೇಡಿಕೆಗಳ ಬಗ್ಗೆ ಚರ್ಚಿಸಿದರು.

> "ನನ್ನ ಮನವಿಗೆ ಓಗೊಟ್ಟು ಪ್ರತಿಭಟನೆ ನಿಲ್ಲಿಸಿ ದೆಹಲಿಗೆ ಬಂದ ಅಂಗನವಾಡಿ, ಅಕ್ಷರ ದಾಸೋಹ ಹಾಗೂ ಆಶಾ ಕಾರ್ಯಕರ್ತೆಯರ ಪ್ರಮುಖರ ಜತೆಗಿನ ಮಾತುಕತೆ ಉತ್ತಮವಾಗಿತ್ತು. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಖಾತೆ ಸಚಿವರೊಂದಿಗೆ ನಡೆದ ಸಭೆಯಲ್ಲಿ ಎಲ್ಲಾ ಅಂಶಗಳ ಬಗ್ಗೆ ಚರ್ಚಿಸಲಾಗಿದೆ. ಅವರ ಸಮಸ್ಯೆಗಳನ್ನು ಬಗೆಹರಿಸುವ ನಿಟ್ಟಿನಲ್ಲಿ ಕ್ರಮ ವಹಿಸುವುದಾಗಿ ಭರವಸೆ ನೀಡಿದ್ದಾರೆ.
> –ಹೆಚ್.ಡಿ.ಕುಮಾರಸ್ವಾಮಿ
> ಕೇಂದ್ರದ ಬೃಹತ್ ಕೈಗಾರಿಕೆ ಮತ್ತು ಉಕ್ಕು ಖಾತೆ ಸಚಿವರು

ನವದೆಹಲಿ,ಡಿ.3–ಅಂಗನವಾಡಿ, ಅಕ್ಷರ ದಾಸೋಹ ಹಾಗೂ ಆಶಾ ಕಾರ್ಯಕರ್ತೆಯರ ಬಹುತೇಕ ಬೇಡಿಕೆಗಳ ಈಡೇರಿಕೆಗೆ ಕೇಂದ್ರ ಸರ್ಕಾರ ಸಮ್ಮತಿ ಸೂಚಿಸಿದೆ.

ತಮ್ಮ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಪ್ರತಿಭಟನಾ ಚಳವಳಿ ನಡೆಸುತ್ತಿದ್ದ ಕರ್ನಾಟಕ ಅಂಗನವಾಡಿ, ಅಕ್ಷರ ದಾಸೋಹ, ಆಶಾ ನೌಕರರ ಪ್ರಮುಖರನ್ನು ಬುಧವಾರ ನವದೆಹಲಿಗೆ ಕರೆಸಿಕೊಂಡ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ, ಈ ಎಲ್ಲಾ ಪ್ರಮುಖರ ಜತೆ ಸಂಜೆ ನವದೆಹಲಿಯ ಶಾಸ್ತ್ರೀ ಭವನದಲ್ಲಿರುವ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವಾಲಯದ ಕಚೇರಿಯಲ್ಲಿ ಸಚಿವೆ ಅನ್ನಪೂರ್ಣದೇವಿ ಅವರನ್ನು ಭೇಟಿಯಾಗಿ, ನೌಕರರ ಪರವಾಗಿ ಸಚಿವರಿಗೆ ಅವರ ಸಮಸ್ಯೆಗಳು, ಬೇಡಿಕೆಗಳ ಬಗ್ಗೆ ಮಾಹಿತಿ ನೀಡಿದರು.

ಎಫ್‌ಆರ್‌ಎಸ್ ನೀತಿಯಲ್ಲಿ ಸುಧಾರಣೆ, ಅಂಗನವಾಡಿ ಕಾರ್ಯಕರ್ತೆಯರನ್ನು ಚುನಾವಣೆ ಕೆಲಸಗಳಿಂದ ಮುಕ್ತಿಗೊಳಿಸುವುದು, ವಿಮಾ ಸೌಲಭ್ಯ, ಎಲ್ಲಾ ನೌಕರರ ವೇತನ ಹೆಚ್ಚಳ ಸೇರಿದಂತೆ ಅನೇಕ ವಿಷಯಗಳ ಬಗ್ಗೆ ಸಚಿವರು ಚರ್ಚಿಸಿದರು.

ಅಂಗನವಾಡಿ ಕಾರ್ಯಕರ್ತೆಯರನ್ನು ಚುನಾವಣೆ ಕೆಲಸಗಳಿಗೆ ನಿಯೋಜಿಸದಿರುವ ಬಗ್ಗೆ ಚುನಾವಣೆ ಆಯೋಗದ ಜತೆ ಚರ್ಚೆ ನಡೆಸಲಾಗುವುದು ಹಾಗೂ ಎಲ್ಲಾ ನೌಕರರಿಗೂ ಕೆಲಸದ ಒತ್ತಡ ಕಡಿಮೆ ಮಾಡುವ ಬಗ್ಗೆ ಕ್ರಮ ವಹಿಸಲಾಗುವುದು ಎಂದು ಸಚಿವೆ ಅನ್ನಪೂರ್ಣದೇವಿ ಭರವಸೆ ನೀಡಿದರು. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವಾಲಯದ ವ್ಯಾಪ್ತಿಗೆ ಬರುವ ಎಲ್ಲಾ ಬೇಡಿಕೆಗಳ ▶ 6ನೇ ಪುಟಕ್ಕೆ

ಅಧಿಕಾರ ಹಸ್ತಾಂತರ ವಿಚಾರ

ಸೋನಿಯಾ ಮೊರೆ ಹೋದ ಡಿಕೆಶಿ!

ಮಂಗಳೂರಲ್ಲಿ ಕೆ.ಸಿ.ವೇಣುಗೋಪಾಲ್ ಜೊತೆ ಸಿಎಂ ಸಿದ್ದರಾಮಯ್ಯ ಮೀಟಿಂಗ್!

ಬೆಂಗಳೂರು, ಡಿ.3(ಕೆಎಂಶಿ)–ಅಧಿಕಾರ ಹಸ್ತಾಂತರ ವಿಚಾರದಲ್ಲಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಪಕ್ಷದ ಅಧಿನಾಯಕಿ ಸೋನಿಯಾ ಗಾಂಧಿ ಮೊರೆ ಹೋಗಿದ್ದಾರೆ.





ಕಳೆದ ಎರಡು ದಿನಗಳಿಂದ ತಮ್ಮ ದಿನಚರಿಯಲ್ಲಿ ಯಾವುದೇ ಕಾರ್ಯಕ್ರಮ ನಮೂದಿಸದೆ, ಸೋನಿಯಾ ಗಾಂಧಿ ಭೇಟಿ ಸಮಯಕ್ಕಾಗಿ ಶಿವಕುಮಾರ್ ಕಾದಿದ್ದರು.

ದೆಹಲಿಯಿಂದ ಮಾಹಿತಿ ಬರುತ್ತಿದ್ದಂತೆ ಮದುವೆ ನೆಪ ಮುಂದೊಡ್ಡಿ ಬುಧವಾರ ಮಧ್ಯಾಹ್ನ ದೆಹಲಿಗೆ ತೆರಳಿ, ಅಲ್ಲಿಯೇ ವಾಸ್ತವ್ಯ ಹೂಡಿದ್ದು, ನಾಳೆ ಹಿಂತಿರುಗುವ ಸಾಧ್ಯತೆ ಇದೆ. ಇದರ ಮಧ್ಯೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಮಂಗಳೂರು ಪ್ರವಾಸ ಸಂದರ್ಭದಲ್ಲೇ ಎಐಸಿಸಿ ರಾಜಕೀಯ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಅವರನ್ನು ಅಲ್ಲಿನ ಕಾವೇರಿ ಅತಿಥಿ ಗೃಹದಲ್ಲಿ ಭೇಟಿ ಮಾಡಿ ಸುಮಾರು ▶ 6ನೇ ಪುಟಕ್ಕೆ

ಸಿಎಂ ಗಾದಿ ಹಸ್ತಾಂತರ ಪ್ರಕ್ರಿಯೆ ಆರಂಭವಾಗಿದೆ



ಬಾಬಾ ಸಾಹೇಬ್ ಪಾಟೀಲ್

ಬೆಂಗಳೂರು,ಡಿ.3(ಕೆಎಂಶಿ)–ಸಿದ್ದರಾಮಯ್ಯ ಅವರಿಂದ ಮುಖ್ಯಮಂತ್ರಿ ಗಾದಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ಹಸ್ತಾಂತರ ಪ್ರಕ್ರಿಯೆ ಪ್ರಾರಂಭವಾಗಿದೆ ಎಂದು ಕಾಂಗ್ರೆಸ್‌ನ ಹಿರಿಯ ಶಾಸಕ ಬಾಬಾ ಸಾಹೇಬ್ ಪಾಟೀಲ್ ಸ್ಫೋಟಕ ಹೇಳಿಕೆ ನೀಡಿದ್ದಾರೆ. ಶಿವಕುಮಾರ್ ಬೆಂಬಲಿಗರಷ್ಟೇ ಅಲ್ಲದೆ, ಪಕ್ಷದ ವರಿಷ್ಠರ ಭೇಟಿಗೆ ದೆಹಲಿಗೆ ತೆರಳಿದ್ದ ಶಾಸಕರ ನಿಯೋಗದಲ್ಲಿ ಪಾಟೀಲ್ ಇದ್ದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಇನ್ನೊಂದು ವಾರದಲ್ಲಿ ▶ 6ನೇ ಪುಟಕ್ಕೆ

ಸಿದ್ದರಾಮಯ್ಯ ಸಿಎಂ ಗಾದಿಯಿಂದ ಇಳಿಯುವುದು ಖಚಿತ



ಸತೀಶ್ ಜಾರಕಿಹೊಳಿ

ಬೆಂಗಳೂರು,ಡಿ.3(ಕೆಎಂಶಿ)–ಸಿದ್ದರಾಮಯ್ಯ ಮುಖ್ಯಮಂತ್ರಿ ಗಾದಿಯಿಂದ ಇಳಿಯುವುದು ಖಚಿತ ಎಂದು ಆಪ್ತ ಸಚಿವರಲ್ಲೊಬ್ಬರಾದ ಸತೀಶ್ ಜಾರಕಿಹೊಳಿ ತಿಳಿಸಿದ್ದಾರೆ. ಗೃಹ ಸಚಿವ ಡಾ.ಜಿ.ಪರಮೇಶ್ವರ್ ನಿವಾಸದಲ್ಲಿ ನಿನ್ನೆ ರಾತ್ರಿ ನಡೆದ ಭೋಜನಕೂಟದ ಸಭೆ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ▶ 6ನೇ ಪುಟಕ್ಕೆ

ರೇಣುಕಾಸ್ವಾಮಿ ಹತ್ಯೆ ಕೇಸ್: ಡಿ.17ರಿಂದ ಸಾಕ್ಷ್ಯ ವಿಚಾರಣೆ

ಬೆಂಗಳೂರು, ಡಿ.3– ರೇಣುಕಾಸ್ವಾಮಿ ಕೊಲೆ ಪ್ರಕರಣದ ವಿಚಾರಣೆ ಈಗ ಪ್ರಮುಖ ಘಟ್ಟಕ್ಕೆ ಬಂದಿದೆ. ನಟ ದರ್ಶನ್, ನಟಿ ಪವಿತ್ರಾಗೌಡ ಸೇರಿದಂತೆ ಹಲವರು ಈ ಪ್ರಕರಣದಲ್ಲಿ ಆರೋಪಿಗಳಾಗಿದ್ದಾರೆ. ಈಗಾಗಲೇ ದೋಷಾರೋಪಣೆ ನಿಗದಿ ಪ್ರಕ್ರಿಯೆ ಮುಗಿದಿದೆ. ಎಲ್ಲಾ ಆರೋಪಿಗಳು ತಮ್ಮ ಮೇಲಿನ ಆರೋಪ ತಳ್ಳಿ ಹಾಕಿದ್ದಾರೆ. ಈ ಹಿನ್ನೆಲೆಯಲ್ಲಿ ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಡಿ.17ರಿಂದ ಸಾಕ್ಷ್ಯ ವಿಚಾರಣೆ ಆರಂಭಿಸಲು ನ್ಯಾಯಾಲಯ ನಿರ್ಧರಿಸಿದೆ. ▶ 6ನೇ ಪುಟಕ್ಕೆ

ಪ್ರಜ್ವಲ್ ರೇವಣ್ಣ ಜೀವಾವಧಿ ಶಿಕ್ಷೆ ತಡೆಗೆ ಹೈಕೋರ್ಟ್ ನಕಾರ



ಬೆಂಗಳೂರು: ಮನೆಗೆಲಸದ ಮಹಿಳೆ ಮೇಲೆ ಅತ್ಯಾಚಾರ ಎಸಗಿದ ಪ್ರಕರಣದಲ್ಲಿ ಜೀವಾವಧಿ ಶಿಕ್ಷೆಗೆ ಗುರಿಯಾಗಿರುವ ಹಾಸನದ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಅವರಿಗೆ ಕರ್ನಾಟಕ ಹೈಕೋರ್ಟ್ ಬುಧವಾರ ಮತ್ತೊಂದು ಶಾಕ್ ನೀಡಿದೆ. ಅತ್ಯಾಚಾರ ಪ್ರಕರಣಕ್ಕೆ ಸಂಬಂಧಿಸಿದಂತೆ ತಮಗೆ ವಿಧಿಸಲಾಗಿರುವ ಜೀವಾವಧಿ ಶಿಕ್ಷೆ ಅಮಾನತ್ತಿನಲ್ಲಿಟ್ಟು ▶ 6ನೇ ಪುಟಕ್ಕೆ

'ಪ್ರಸಾದ'ದಡಿ ಚಾಮುಂಡಿಬೆಟ್ಟದಲ್ಲಿ ಜನವರಿಗೆ ಅಭಿವೃದ್ಧಿ ಕಾಮಗಾರಿ ಆರಂಭ



- ಎಸ್‌ಕೆಎಸ್ ಕಾರ್ಕಳ ಸಂಸ್ಥೆಗೆ 45 ಕೋಟಿಗೆ ಗುತ್ತಿಗೆ
- ಕೇಂದ್ರ ಸರ್ಕಾರದ ಪ್ರಾಯೋಜಿತ ಯೋಜನೆ ಇದು
- ಕಾಮಗಾರಿ ಪೂರ್ಣಗೊಳಿಸಲು 90 ದಿನ ಗಡುವು
- ಮುಜರಾಯಿ ಇಲಾಖೆ ಎನ್‌ಓಸಿ ನೀಡದೇ ಕಾಮಗಾರಿ ವಿಳಂಬ
- ನೀಲಿ ನಕ್ಷೆ, ತ್ರಿಡಿ ಡೈಮೆನ್ಷನ್ ಸಿದ್ಧ

ಮೈಸೂರು, ಡಿ.3(ಬಿಎಲ್‌ಯು)–ಸಾಂಸ್ಕೃತಿಕ ನಗರಿ ಮೈಸೂರಿನ ಮುಕುಟವಾಗಿರುವ ಚಾಮುಂಡಿಬೆಟ್ಟವನ್ನು ಪ್ರಸಿದ್ಧ ಯಾತ್ರಾ ಸ್ಥಳವಾಗಿ, ಸಮಗ್ರ ರೀತಿ ಅಭಿವೃದ್ಧಿ ಮಾಡುವ ಕೇಂದ್ರ ಸರ್ಕಾರದ 'ಪ್ರಸಾದ' ಯೋಜನೆಯ ಕಾಮಗಾರಿ ಜನವರಿ ಮೊದಲ ವಾರದಲ್ಲಿ ಆರಂಭವಾಗಲಿದೆ. ಪಾರಂಪರಿಕ ತಾಣಗಳನ್ನು ಅಭಿವೃದ್ಧಿ ಮಾಡುವ ಅನುಭವ ಹೊಂದಿರುವ ಎಸ್‌ಕೆಎಸ್ ಕಾರ್ಕಳ ಪ್ರೈವೇಟ್ ಲಿ.ಗೆ 45 ಕೋಟಿ ರೂ. ವೆಚ್ಚದ ಈ ಅಭಿವೃದ್ಧಿ ಕಾಮಗಾರಿಗಳ ಗುತ್ತಿಗೆ ನೀಡಲಾಗಿದೆ.

ಚಾಮುಂಡಿಬೆಟ್ಟಕ್ಕೆ, ನಾಡದೇವಿ ಚಾಮುಂಡೇಶ್ವರಿಗೆ ಪೌರಾಣಿಕ ಹಿನ್ನೆಲೆ ಇದೆ. ಉತ್ತರ ಭಾರತದ ಜನರು ಚಾಮುಂಡೇಶ್ವರಿಯನ್ನು ದುರ್ಗಾ ಮಾತೆ ಹೆಸರಿನಿಂದ ಪೂಜಿಸುತ್ತಾರೆ. ಚಾಮುಂಡಿಬೆಟ್ಟದಲ್ಲಿ ಮಹಿಷಾಸುರನನ್ನು ಮರ್ಧನ ಮಾಡಿದ ತಾಯಿ ಚಾಮುಂಡೇಶ್ವರಿ ದೇವಿ ಅಲ್ಲೇ ನೆಲೆಗೊಂಡಿರುವ ಹಿನ್ನೆಲೆಯಲ್ಲಿ ಇದು ಪವಿತ್ರ ಕ್ಷೇತ್ರವಾಗಿದೆ. ಈ ಹಿನ್ನೆಲೆಯಲ್ಲಿ ಉತ್ತರ ಭಾರತೀಯರು ಸೇರಿದಂತೆ ವಿದೇಶಿಯರು ಚಾಮುಂಡಿಬೆಟ್ಟಕ್ಕೆ ಭೇಟಿ ನೀಡಿ ಭಕ್ತಿ ಭಾವದಿಂದ ನಾಡದೇವಿ ಚಾಮುಂಡೇಶ್ವರಿ ದೇವಿ ದರ್ಶನ ಪಡೆಯುತ್ತಾರೆ. ▶ 6ನೇ ಪುಟಕ್ಕೆ

ಪಾರಂಪರಿಕ ಕಟ್ಟಡಗಳ ತಂಟೆಗೆ ಹೋಗುತ್ತಿಲ್ಲ

ಚಾಮುಂಡಿಬೆಟ್ಟಕ್ಕೆ ಪೌರಾಣಿಕ ಹಿನ್ನೆಲೆ ಇದ್ದು, ಚಾಮುಂಡೇಶ್ವರಿ ದೇವಸ್ಥಾನ, ಗೋಪುರ ಸೇರಿದಂತೆ ಸುತ್ತಮುತ್ತಲಿನ ಎಲ್ಲಾ ದೇವಾಲಯಗಳನ್ನು ರಾಜರ ಕಾಲದಲ್ಲೇ ಪಾರಂಪರಿಕ ಶೈಲಿಯಲ್ಲಿ ನಿರ್ಮಾಣ ಮಾಡಲಾಗಿದೆ. ಈ ಹಿನ್ನೆಲೆಯಲ್ಲಿ 'ಪ್ರಸಾದ' ಯೋಜನೆಯಡಿ ಕೈಗೊಳ್ಳುವ ಕಾಮಗಾರಿಗಳು ಚಾಮುಂಡಿಬೆಟ್ಟದ ಪಾರಂಪರಿಕತೆಗೆ ಧಕ್ಕೆ ತರದಂತೆ ಎಚ್ಚರ ವಹಿಸಲಾಗುತ್ತಿದೆ. ಕಾಮಗಾರಿ ವೇಳೆ ಪಾರಂಪರಿಕ ಕಟ್ಟಡಗಳ ತಂಟೆಗೆ ಹೋಗುತ್ತಿಲ್ಲ. ಈ ಮೂಲಕ ಚಾಮುಂಡಿಬೆಟ್ಟದ ನೈಸರ್ಗಿಕ ಸೌಂದರ್ಯಕ್ಕೆ ಧಕ್ಕೆ ಆಗದಂತೆ ಎಚ್ಚರ ವಹಿಸಲಾಗಿದೆ. ಅಲ್ಲದೆ, ಅಭಿವೃದ್ಧಿ ಕಾಮಗಾರಿಗಳನ್ನು ಪಾರಂಪರಿಕ ಶೈಲಿ ಗಮನದಲ್ಲಿಟ್ಟುಕೊಂಡೇ ನಿರ್ವಹಿಸಲಾಗುತ್ತಿದೆ.

ಕಡೆ ಘಳಿಗೆಯಲ್ಲಿ ಕೆಲವೊಂದು ಮಾರ್ಪಾಡು



> "'ಪ್ರಸಾದ' ಯೋಜನೆಯಡಿ ಚಾಮುಂಡಿಬೆಟ್ಟ ಅಭಿವೃದ್ಧಿ ಯೋಜನೆಯಲ್ಲಿ ಕಡೇ ಘಳಿಗೆಯಲ್ಲಿ ಕೆಲವೊಂದು ಮಾರ್ಪಾಡನ್ನು ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತ ರೆಡ್ಡಿ ಅವರ ನಿರ್ದೇಶನದ ಮೇರೆಗೆ ಮಾಡಲಾಗಿದೆ. ರಥೋತ್ಸವ ಸಂದರ್ಭದಲ್ಲಿ ತಾಯಿ ಚಾಮುಂಡೇಶ್ವರಿ ಉತ್ಸವ ಮೂರ್ತಿಯ ರಥ ದೇವಸ್ಥಾನದ ಪ್ರವೇಶ ದ್ವಾರದಿಂದ ಮಹಾಬಲೇಶ್ವರ ಸ್ವಾಮಿ ದೇವಸ್ಥಾನ, ಸತ್ಯನಾರಾಯಣಸ್ವಾಮಿ ದೇವಸ್ಥಾನದ ಮೂಲಕ ಮತ್ತೆ ಚಾಮುಂಡೇಶ್ವರಿ ದೇವಸ್ಥಾನದ ಪ್ರವೇಶ ದ್ವಾರ ತಲುಪಲಿದೆ. ರಥೋತ್ಸವ ದೇವಸ್ಥಾನದ ಒಂದು ಸುತ್ತು ಹಾಕುವಾಗ ಜನರು ರಥವನ್ನು ಹಿಂಬಾಲಿಸುತ್ತಾರೆ. ಭಕ್ತರು ಸಹ ದೇವಸ್ಥಾನ ಸುತ್ತು ಹಾಕುತ್ತಾರೆ. ಸಾವಿರಾರು ಜನರು ಒಂದೆಡೆ ಸೇರುವ ಹಿನ್ನೆಲೆಯಲ್ಲಿ ನೂಕು ನುಗ್ಗಲು ಉಂಟಾಗುತ್ತದೆ. ಆ ವೇಳೆ ಅವಘಡಗಳು ಸಂಭವಿಸುವ ಸಾಧ್ಯತೆಯೂ ಇರುತ್ತದೆ. ಇದನ್ನು ತಪ್ಪಿಸುವ ಸಲುವಾಗಿ 'ಪ್ರಸಾದ' ಯೋಜನೆಯಡಿ ನಿರ್ಮಾಣವಾಗುತ್ತಿರುವ ಮಂಟಪ ಚಾಮುಂಡೇಶ್ವರಿ ದೇವಸ್ಥಾನ ಹಾಗೂ ಶ್ರೀ ಮಹಾಬಲೇಶ್ವರ ದೇವಸ್ಥಾನದ ಮಧ್ಯೆ ಭಕ್ತರು ಸುಗಮವಾಗಿ ಸಾಗಲು ಅವಕಾಶ ಮಾಡಿಕೊಡುವಂತೆ ಮಾರ್ಪಾಡು ಮಾಡಲು ಡಿಸಿ ಸಲಹೆ ನೀಡಿದ್ದಾರೆ. ಈ ಹಿನ್ನೆಲೆಯಲ್ಲಿ ಪ್ರವಾಸೋದ್ಯಮ ಇಲಾಖೆ ಇಂಜಿನಿಯರಿಂಗ್ ವಿಭಾಗದವರು ಡಿಸಿ ಅವರು ನೀಡಿರುವ ಸಲಹೆಯಂತೆ ಕೆಲವು ಮಾರ್ಪಾಡು ಮಾಡಿದ್ದಾರೆ.
> **–ಪ್ರಭುಸ್ವಾಮಿ, ಸಹಾಯಕ ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆ, ಮೈಸೂರು.**

ನಿಯಮಬಾಹಿರ ಕೌನ್ಸಿಲಿಂಗ್ ಪ್ರಕ್ರಿಯೆ ತಡೆ ಕೋರಿ ಮೈಸೂರಿನ ಕಾಲೇಜು ಶಿಕ್ಷಣ ಇಲಾಖೆ ಮುಂದೆ

ಅತಿಥಿ ಉಪನ್ಯಾಸಕರ ಪ್ರತಿಭಟನೆ



ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ಅತಿಥಿ ಉಪನ್ಯಾಸಕರ ನೇಮಕಾತಿಯಲ್ಲಿ ನಿಯಮಬಾಹಿರ ಕೌನ್ಸಿಲಿಂಗ್ ಪ್ರಕ್ರಿಯೆಗೆ ತಡೆ ನೀಡಬೇಕೆಂದು ಒತ್ತಾಯಿಸಿ ಸರ್ಕಾರಿ ಪದವಿ ಕಾಲೇಜುಗಳ ಅತಿಥಿ ಉಪನ್ಯಾಸಕರ ರಾಜ್ಯ ಸಮನ್ವಯ ಸಮಿತಿ ವತಿಯಿಂದ ಕಾಲೇಜು ಶಿಕ್ಷಣ ಇಲಾಖೆ ಮುಂಭಾಗ ಪ್ರತಿಭಟನೆ ನಡೆಸಲಾಯಿತು.

ಮೈಸೂರು,ಡಿ.3(ಜಿಎ)–ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ 2025–26ನೇ ಸಾಲಿನ ಅತಿಥಿ ಉಪನ್ಯಾಸಕರ ನೇಮಕಾತಿಯಲ್ಲಿ ಸಾಮಾಜಿಕ ನ್ಯಾಯದ ನೀತಿಗೆ ವಿರುದ್ಧವಾಗಿರುವ ನಿಯಮಬಾಹಿರ ಕೌನ್ಸಿಲಿಂಗ್ ಪ್ರಕ್ರಿಯೆಗೆ ತಡೆ ನೀಡಬೇಕೆಂದು ಒತ್ತಾಯಿಸಿ ಸರ್ಕಾರಿ ಪದವಿ ಕಾಲೇಜುಗಳ ಅತಿಥಿ ಉಪನ್ಯಾಸಕರ ರಾಜ್ಯ ಸಮನ್ವಯ ಸಮಿತಿ ವತಿಯಿಂದ ಕಾಲೇಜು ಶಿಕ್ಷಣ ಇಲಾಖೆ ಮುಂಭಾಗ ಪ್ರತಿಭಟನೆ ನಡೆಸಲಾಯಿತು.

ರಾಜ್ಯದ 430 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ 2024–25ನೇ ಸಾಲಿನಲ್ಲಿ 10972 ಅತಿಥಿ ಉಪನ್ಯಾಸಕರು ಕಾರ್ಯನಿರ್ವಹಿಸುತ್ತಿದ್ದು, ಹತ್ತು, ಇಪ್ಪತ್ತು ವರ್ಷಗಳಿಂದಲೂ ಕನಿಷ್ಠ ಗೌರವ ಧನಕ್ಕೆ ಕಾರ್ಯನಿರ್ವಹಿಸುತ್ತಿದ್ದೇವೆ. ಪ್ರಸಕ್ತ ಸಾಲಿನಲ್ಲಿ ಯುಜಿಸಿ ಅರ್ಹತೆ ಪಡೆಯದ ಸುಮಾರು 6,904 ಅತಿಥಿ ಉಪನ್ಯಾಸಕರನ್ನು ಶಾಶ್ವತವಾಗಿ ಸೇವೆಯಿಂದ ಕೈಬಿಟ್ಟು, ಯುಜಿಸಿ ಅರ್ಹತೆ ಪಡೆದವರ ನೇಮಕಾತಿಗೆ ಕೌನ್ಸಿಲಿಂಗ್ ನಡೆಸುತ್ತಿರುವುದು ಆಘಾತಕಾರಿ ಸಂಗತಿ. ಇದರಿಂದ ಸಾವಿರಾರು ಅತಿಥಿ ಉಪನ್ಯಾಸಕರ ಕುಟುಂಬಗಳು ಬೀದಿಗೆ ಬೀಳಲಿವೆ ಎಂದು ಅತಿಥಿ ಉಪನ್ಯಾಸಕರು ಆತಂಕ ವ್ಯಕ್ತಪಡಿಸಿದರು.

ಈ ಸಂದರ್ಭವನ್ನು ಸರ್ಕಾರ ಅತ್ಯಂತ ಮಾನವೀಯ ದೃಷ್ಟಿಯಿಂದ ಪರಿಶೀಲಿಸಬೇಕು. ಪೂರ್ಣಕಾಲಿಕ ಉಪನ್ಯಾಸಕರಿಗೆ ಹಂಚಿಕೆ ಮಾಡಿ ಹೆಚ್ಚುವರಿ ಕಾರ್ಯಭಾರ ನಿರ್ವಹಿಸಲು ಅತಿಥಿ ಉಪನ್ಯಾಸಕರನ್ನು ನೇಮಿಸಿಕೊಳ್ಳುವ ತಾತ್ಕಾಲಿಕ ವ್ಯವಸ್ಥೆಯಾಗಿದೆ. ಹೀಗಾಗಿ ನ್ಯಾಯಾಲಯದ ಮಧ್ಯಂತರ ಆದೇಶ, ವಿದ್ಯಾರ್ಥಿಗಳ ಶೈಕ್ಷಣಿಕ ಭವಿಷ್ಯದ ಹಿತದೃಷ್ಟಿಯಿಂದ 2025–26ನೇ ಸಾಲಿನ ಹಾಲಿ ಸೆಮಿಸ್ಟರ್ ಪೂರ್ಣಗೊಳ್ಳುವವರೆಗೆ ಹಾಲಿ ಇರುವವರನ್ನೇ ಮುಂದುವರಿಸಬೇಕು. ಉಳಿಕೆ ಕಾರ್ಯಭಾರಕ್ಕೆ ಪ್ರಸ್ತುತ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳನ್ನು ಯುಜಿಸಿ ವಿದ್ಯಾರ್ಹತೆ ಅನುಸಾರ ನೇಮಕ ಮಾಡಿಕೊಳ್ಳಬೇಕು ಎಂದು ನ್ಯಾಯಾಲಯ ಮಧ್ಯಂತರ ಆದೇಶ ನೀಡಿದೆ. ಸರ್ಕಾರ ಒಂದು ಐತಿಹಾಸಿಕ ನಿರ್ಧಾರ ಕೈಗೊಂಡು ಹತ್ತಾರು ವರ್ಷಗಳಿಂದ ಕಾರ್ಯನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರನ್ನು ಮಾನವೀಯ ದೃಷ್ಟಿಯಿಂದ ಸೇವೆಯಲ್ಲಿ ಮುಂದುವರಿಸಬೇಕೆಂದು ಆಗ್ರಹಿಸಿದರು. ಪ್ರತಿಭಟನೆಯಲ್ಲಿ ಸಮಿತಿ ಜಿಲ್ಲಾಧ್ಯಕ್ಷ ಹನುಮಂತೇಶ್, ರವೀಂದ್ರ, ಶಿವಣ್ಣ, ನಾಗಾರ್ಜುನ್, ಸುರೇಶ್, ನಂದೀಶ್, ಆಶಾ, ಸಂತೋಷ್ ಜಯಂತ್, ನಾಗರಾಜೇಗೌಡ ಸೇರಿದಂತೆ ಹಲವರು ಭಾಗವಹಿಸಿದ್ದರು.

> “ಪ್ರಸ್ತುತ ಅತಿಥಿ ಉಪನ್ಯಾಸಕರ ನೇಮಕಾತಿಯಲ್ಲಿ ಯಾವುದೇ ರೋಸ್ಟರ್ ನಿಯಮಗಳನ್ನು ಅನುಸರಿಸಿಲ್ಲ. ಹಾಗೆ ಮಹಿಳಾ, ಹಿಂದುಳಿದ, ದಲಿತ, ಅಲ್ಪಸಂಖ್ಯಾತರ ಕೋಟಾದಡಿ ಆಯ್ಕೆ ಪ್ರಕ್ರಿಯೆ ನಡೆದಿಲ್ಲ. ಕಾಲೇಜು ಶಿಕ್ಷಣ ಇಲಾಖೆ ನಿಯಮಾವಳಿಗಳನ್ನು ಕೈಬಿಟ್ಟು, ಬೇಕಾಬಿಟ್ಟಿ ನಿಯಮ ರೂಪಿಸಿಕೊಂಡು ಕೌನ್ಸಲಿಂಗ್ ನಡೆಸುತ್ತಿದೆ. ಜತೆಗೆ ಯಾವುದೇ ತಾತ್ಕಾಲಿಕ ನೌಕರರು ಕನಿಷ್ಠ ಹತ್ತು ವರ್ಷಗಳ ಸೇವೆ ಸಲ್ಲಿಸಿದ್ದರೆ, ಸುಪ್ರೀಂ ಕೋರ್ಟ್ ನಿರ್ದೇಶನದಂತೆ ಕಾಯಂಗೊಳಿಸಬೇಕು. ಯಾವುದೇ ಸರ್ಕಾರಿ, ಅರೆ ಸರ್ಕಾರಿ, ಖಾಸಗಿ ಸಂಸ್ಥೆಗಳಲ್ಲಿ 20ಕ್ಕೂ ಹೆಚ್ಚು ಜನರು ಕಾರ್ಯನಿರ್ವಹಿಸುತ್ತಿದ್ದರೆ ಇಎಸ್‌ಐ, ಪಿಎಫ್ ಸೌಲಭ್ಯ ನೀಡಬೇಕು ಎಂಬ ಆದೇಶವಿದ್ದು, ಅದನ್ನು ಪಾಲಿಸಬೇಕು. ತಾತ್ಕಾಲಿಕ ಅತಿಥಿ ಉಪನ್ಯಾಸಕರ ಆಯ್ಕೆಯಲ್ಲಿ ಯುಜಿಸಿ, ನಾನ್ ಯುಜಿಸಿ ಎಂಬ ತಾರತಮ್ಯ ಮಾಡಬಾರದು. ಸೇವಾ ಜೇಷ್ಠತೆಯ ಆಧಾರದ ಮೇಲೆ ಸೇವೆಯಿಂದ ಒಳಗಿರುವ, ಹೊರಗುಳಿದ ಅತಿಥಿ ಉಪನ್ಯಾಸಕರನ್ನು ಆಯ್ಕೆ ಮಾಡಿಕೊಳ್ಳಬೇಕು. ನಿಯಮಬಾಹಿರ ಸಾಮಾಜಿಕ ನ್ಯಾಯದ ನೀತಿಗೆ ವಿರುದ್ಧವಾಗಿ ನಡೆದಿರುವ ಅತಿಥಿ ಉಪನ್ಯಾಸಕರ ಕೌನ್ಸಿಲಿಂಗ್ ಪ್ರಕ್ರಿಯೆ ರದ್ದುಪಡಿಸಬೇಕು.
> –ಪ್ರತಿಭಟನಾಕಾರರು

ವಿಕಲಚೇತನರ ವಿಕಲತೆ ಸಾಧನೆಗೆ ತೊಡಕಾಗದು

ಮೈಸೂರಲ್ಲಿ ವಿಶ್ವ ವಿಕಲಚೇತನರ ದಿನಾಚರಣೆಯಲ್ಲಿ ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜು ಅಭಿಮತ



ವಸ್ತುಪ್ರದರ್ಶನ ಪ್ರಾಧಿಕಾರದ ಪಿ.ಕಾಳಿಂಗರಾವ್ ಸಭಾಂಗಣದಲ್ಲಿ 'ವಿಶ್ವ ವಿಕಲಚೇತನರ ದಿನಾಚರಣೆ ಕಾರ್ಯಕ್ರಮ ನಡೆಯಿತು.

ಮೈಸೂರು, ಡಿ.3(ಎಂಕೆ)– ವಿಕಲಚೇತನರು ದೇಶದ ಸಂಪತ್ತು. ಅವರಲ್ಲಿನ ವಿಕಲತೆ ಸಾಧನೆಗೆ ಎಂದಿಗೂ ತೊಡಕಾಗದು ಎಂದು ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜು ಹೇಳಿದರು.

ಮೈಸೂರು ದಸರಾ ವಸ್ತುಪ್ರದರ್ಶನ ಆವರಣದಲ್ಲಿರುವ ಪಿ.ಕಾಳಿಂಗರಾವ್ ಸಭಾಂಗಣದಲ್ಲಿ ಜಿಲ್ಲಾಡಳಿತ, ಜಿಪಂ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಸೇರಿದಂತೆ ವಿವಿಧ ಸಂಸ್ಥೆಗಳ ಸಂಯುಕ್ತಾಶ್ರದಲ್ಲಿ ಆಯೋಜಿಸಿದ್ದ 'ವಿಶ್ವ ವಿಕಲಚೇತನರ ದಿನಾಚರಣೆ ಉದ್ಘಾಟಿಸಿ ಮಾತನಾಡಿದ ಅವರು, ಪ್ರತಿಭೆ ಯಾರೊಬ್ಬರ ಸ್ವತ್ತಲ್ಲ, ಅದು ಸಾಧಕರ ಸ್ವತ್ತು. ಈ ನಿಟ್ಟಿನಲ್ಲಿ ವಿಕಲಚೇತನರು ಸಾಧಕರಾಗಿ ಇತರರಿಗೆ ಮಾದರಿಯಾಗಬೇಕು ಎಂದು ಹೇಳಿದರು.

ವಿಕಲಚೇತನರಲ್ಲಿನ ವಿಕಲತೆ ಅವರ ಸಾಧನೆಗೆ ತೊಡಕಾಗಬಹುದು ಎಂಬುದು ಸತ್ಯಕ್ಕೆ ದೂರವಾದ ಮಾತು. ಅಂಗವೈಕಲ್ಯತೆ ಇದ್ದರೂ ಸಾಧನೆ ಮಾಡಿರುವ ಸಾವಿರಾರು ಉದಾಹರಣೆಗಳು ನಮ್ಮ ಕಣ್ಣ ಮುಂದಿವೆ. ವಿಕಲಚೇತನರು ಕುಗ್ಗದೆ ತಮ್ಮಲ್ಲಿನ ಸಾಮರ್ಥ್ಯಕ್ಕೆ ಅನುಗುಣವಾಗಿ ಸಮಾಜಕ್ಕೆ ಕೊಡುಗೆ ನೀಡುವ ಮೂಲಕ ಇತರರಿಗೂ ಮಾದರಿಯಾಗಬೇಕು ಎಂದು ತಿಳಿಹೇಳಿದರು.

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕ ಭಾಸ್ಕರ್ ನಾಯಕ್ ಮಾತನಾಡಿ, ಪ್ರಕೃತಿಯಲ್ಲಿರುವ ಪ್ರತಿಯೊಂದು ಜೀವಿಗಳು ಸಹಬಾಳ್ವೆಯಿಂದ ಜೀವನ ನಡೆಸಬೇಕು. ಪ್ರತಿಯೊಂದು ಜೀವಿಯೂ ಗೌರವಯುತವಾಗಿ ಬದುಕಲು ಅವಕಾಶ ನೀಡಲಾಗಿದೆ. ಆದ್ದರಿಂದ ಮಾನವೀಯ ನೆಲೆಗಟ್ಟಿನಲ್ಲಿ ಎಲ್ಲರೂ ಸಮಾನತೆಯಿಂದ ಜೀವನ ನಡೆಸಬೇಕಿದೆ. ಯಾರೂ ಯಾರನ್ನು ದುರ್ಬಲ ಎಂದು ಹೀಯ್ಯಾಳಿಸಬಾರದು ಎಂದು ತಿಳಿಸಿದರು.

ಜಿಲ್ಲಾಡಳಿತ ಮತ್ತು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಸದಾ ವಿಕಲಚೇತನರ ಏಳಿಗೆಗಾಗಿ ಜೊತೆಗಿರಲಿದೆ. ಆದ್ದರಿಂದ ತಮ್ಮಲ್ಲಿ ಯಾವುದೇ ಕುಂದು–ಕೊರತೆಗಳಿದ್ದರೂ ನೇರವಾಗಿ ತಿಳಿಸಿ. ಅಂಕವೈಕಲ್ಯತೆಯನ್ನು ದೌರ್ಬಲ್ಯ ಎಂದುಕೊಳ್ಳದಿರಿ. ದೇವರು ನಿಮಗೆ ಮತ್ತೊಂದು ರೀತಿಯಲ್ಲಿ ಶಕ್ತಿಯನ್ನು ಕೊಟ್ಟಿರುತ್ತಾನೆ. ನಿಮ್ಮಲ್ಲಿನ ಪ್ರತಿಭೆಗಳನ್ನು ಹೊರ ಹಾಕಬೇಕು ಎಂದು ಕಿವಿಮಾತು ಹೇಳಿದರು.

ಟೀ ಶರ್ಟ್ ವಿತರಣೆ: ಇದೇ ವೇಳೆ ಸ್ವಾಭಿಮಾನಿ ವಿಕಲಚೇತನರ ಒಕ್ಕೂಟದ ವತಿಯಿಂದ ಬನ್ನಿಮಂಟಪ ಹುಡ್ಕೋ ಬಡಾವಣೆಯಲ್ಲಿರುವ ಸರ್ಕಾರಿ ಶಾಲೆ ಮಕ್ಕಳಿಗೆ ಟೀ ಶರ್ಟ್ ವಿತರಣೆ ಮಾಡಲಾಯಿತು. ಮಹಿಳಾ–ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕ ಬಿ.ಬಸವರಾಜು, ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ಕೆ.ಎಸ್.ರಾಘವೇಂದ್ರ ಕ್ರೀಡಾ ವಿಕಲಚೇತನ ಒಕ್ಕೂಟದ ಅಧ್ಯಕ್ಷ ಎನ್.ಶ್ರೀಧರ್ ದೀಕ್ಷಿತ್, ಸರ್ಕಾರಿ ಬ್ರೈಲ್ ಮುದ್ರಾಲಯದ ವ್ಯವಸ್ಥಾಪಕ ಮೋಹನ್, ಸರ್ಕಾರಿ ಕಿವುಡ ಮಕ್ಕಳ ಪಾಠ ಶಾಲೆ ಅಧೀಕ್ಷಕ ನೀರಜ್ ಅಹಮದ್, ಸರ್ಕಾರಿ ಅಂಧ ಮಕ್ಕಳ ಪಾಠ ಶಾಲೆ ಅಧೀಕ್ಷಕ ಸತೀಶ್, ಎಸ್‌ಟಿಎಸ್ ಗೆಳೆಯರ ಬಳಗದ ಅಧ್ಯಕ್ಷ ರಾಘವೇಂದ್ರ, ಎಂ.ಮುರಳೀಧರ ಮತ್ತಿತರರಿದ್ದರು.

ವಿಶೇಷಚೇತನ ಮಕ್ಕಳ ಆಕರ್ಷಕ ನೃತ್ಯ ಪ್ರದರ್ಶನ...

ವೇದಿಕೆ ಕಾರ್ಯಕ್ರಮದ ಬಳಿಕ ಸರ್ಕಾರಿ ಕಿವುಡ ಮಕ್ಕಳ ಪಾಠ ಶಾಲೆ, ಸರ್ಕಾರಿ ಅಂಧ ಮಕ್ಕಳ ಪಾಠ ಶಾಲೆ, ಸಮರ್ಥನಂ ವಿಶೇಷ ಮಕ್ಕಳ ಶಾಲೆ, ಮೈತ್ರಿ ಬುದ್ಧಿ ಮಾಂದ್ಯ ಮಕ್ಕಳ ಸಂಸ್ಥೆ, ಸಾಯಿರಂಗ ಕಿವುಡ ಮಕ್ಕಳ ಶಾಲೆ, ಶ್ರೀಮತಿ ಪುಟ್ಟವೀರಮ್ಮ ಕಿವುಡ ಮಕ್ಕಳ ಶಾಲೆ, ಎಂಜಿ ಸೂಫಿ ಬುದ್ಧಿಮಾಂದ್ಯ ಮಕ್ಕಳ ಶಾಲೆ, ರಂಗರಾವ್ ಅಂಧ ಹೆಣ್ಣು ಮಕ್ಕಳ ಶಾಲೆ ಮಕ್ಕಳು ಆಕರ್ಷಕ ನೃತ್ಯ ಪ್ರದರ್ಶನ ನೀಡುವ ಮೂಲಕ ನೆರೆದಿದ್ದವರ ಗಮನ ಸೆಳೆದರು.

ವಿಕಲಚೇತನರೆಂದರೆ ಜನಪ್ರತಿನಿಧಿಗಳಿಗೆ ಅಸಡ್ಡೆಯೇ...!

ವಿಶ್ವ ವಿಕಲಚೇನತರ ದಿನಾಚರಣೆ ಸರ್ಕಾರಿ ಕಾರ್ಯಕ್ರಮದಲ್ಲಿ ಯಾರೊಬ್ಬರು ಜನಪ್ರತಿನಿಧಿಗಳು ಭಾಗಿಯಾಗದಿರುವುದು ಖಂಡನೀಯ. ನಮ್ಮ ಕಾರ್ಯಕ್ರಮದಲ್ಲೇಕೆ ಜನಪ್ರತಿನಿಧಿಗಳು ಭಾಗವಹಿಸುವುದಿಲ್ಲ ಎಂದು ಸ್ವಾಭಿಮಾನಿ ವಿಕಲಚೇತನರ ಒಕ್ಕೂಟದ ದಿಲೀಪ್ ವೇದಿಕೆ ಮೇಲೆ ಪ್ರಶ್ನಿಸಿದರಲ್ಲದೆ, ವಿಕಲಚೇತನರಾದ ನಾವು ಕೂಡ ಸಮಾಜದಲ್ಲಿರುವ ಪ್ರಜೆಗಳಲ್ಲವೇ. ಹಿಗಾದರೆ ವಿಕಲಚೇತನರ ಸಮಸ್ಯೆಗಳು ಸರ್ಕಾರಕ್ಕೆ ತಿಳಿಸು ವುದಾದರೂ ಹೇಗೆ ಎಂದು ಬೇಸರ ವ್ಯಕ್ತಪಡಿಸಿದರು.



ಮೈಸೂರಿನ ಲಕ್ಕು ಫೌಂಡೇಷನ್ ಟ್ರಸ್ಟ್‌ನಲ್ಲಿ ವಿಶ್ವ ವಿಕಲಚೇತನರ ದಿನ ಆಚರಿಸಲಾಯಿತು. ಈ ವೇಳೆ ವಿಕಲಚೇತನ ಮಕ್ಕಳಿಗೆ ವಿವಿಧ ಆಟೋಟ ಸ್ಪರ್ಧೆಗಳನ್ನು ಏರ್ಪಡಿಸಿ, ವಿಜೇತರಿಗೆ ಬಹುಮಾನ ವಿತರಿಸಲಾಯಿತು. ಸುನಂದಮ್ಮ ಲಕ್ಕಣ್ಣ, ವಂದನ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷರಾದ ಗೀತಾ, ಪ್ರೇಮಾವತಿ, ನರಸು ರಾಮಚಂದ್ರ, ಚಂದ್ರಮ್ಮ, ಜಯಮ್ಮ ಮತ್ತಿತರರಿದ್ದರು.

ಕರಾಟೆ ವಿಜೇತ ಮಕ್ಕಳಿಗೆ ಅಭಿನಂದನೆ...




ಮೈಸೂರಲ್ಲಿ ನಡೆದ 8ನೇ ಜಿ.ಕೆ.ಎ ಮುಕ್ತ ರಾಷ್ಟ್ರಮಟ್ಟದ ಕರಾಟೆ ಪಂದ್ಯಾವಳಿಯಲ್ಲಿ ಚಾಂಪಿಯನ್‌ಶಿಪ್ ವಿನ್ನರ್ ಕಪ್ ಮುಡಿಗೇರಿಸಿಕೊಂಡ ಮೈಸೂರಿನ ಗೋಜು–ರಿಯೂ ಕರಾಟೆ–ಡು ಸಂಸ್ಥೆಯ ಮಕ್ಕಳನ್ನು ಸಂಸ್ಥೆಯ ಮುಖ್ಯ ಶಿಕ್ಷಕ ಆರ್.ಮಹೇಶ್, ಕಾರ್ಯದರ್ಶಿ ಗುರುಪ್ರಸಾದ್, ಉಪಾಧ್ಯಕ್ಷ ನಂದೀಶ್, ತರಬೇತುದಾರರಾದ ಸುಧಾ, ನಾಗೇಂದ್ರ, ಸೂರ್ಯ, ತನ್ಮಯ್, ಗುಣಶೇಖರ್, ಸ್ಯಾಮಿಲ್, ಚೇತನ್, ಭಾಸ್ಕರ್, ರಾಹುಲ್ ಅಭಿನಂದಿಸಿದರು.

ತೃಪ್ತಿಗೆ ಪಿಹೆಚ್.ಡಿ ಪದವಿ



ಮೈಸೂರು,ಡಿ.3– ತೃಪ್ತಿ ಜಿ.ಎನ್. ಅವರು ಡಾ. ದೇವಿ ಪ್ರಸಾದ್ ಎ.ಜಿ ಅವರ ಮಾರ್ಗದರ್ಶನದಲ್ಲಿ ಸಾದರಪಡಿಸಿದ ಸಸ್ಯ ಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿದ ಮಹಾ ಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಯದ ಪಿ.ಹೆಚ್.ಡಿ ನಿಯಮಾವಳಿಯಲ್ಲಿ ಅಂಗೀಕರಿಸಲಾಗಿದೆ ಎಂದು ಮೈಸೂರು ವಿವಿ ಪ್ರಕಟಣೆ ತಿಳಿಸಿದೆ.

ಸ್ನೇಕ್ ಶ್ಯಾಮ್‌ಗೆ ಸನ್ಮಾನ...



ಮೈಸೂರು ಮಾಜಿ ಕಾರ್ಪೊರೇಟರ್, ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರೂ ಆದ ಸ್ನೇಕ್ ಶ್ಯಾಮ್ ಅವರನ್ನು ಮಾಜಿ ಸಂಸದ ಪ್ರತಾಪ್ ಸಿಂಹ ಸನ್ಮಾನಿಸಿದರು. ಈ ಸಂದರ್ಭದಲ್ಲಿ ಚಾಮರಾಜ ಕ್ಷೇತ್ರದ ಅಧ್ಯಕ್ಷ ದಿನೇಶ್‌ಗೌಡ, ಮುಖಂಡರಾದ ಟೆನ್ನಿಸ್ ಗೋಪಿ, ಪೇಪರ್ ಪ್ರಕಾಶ್, ಅಶೋಕ, ಮಹೇಶ, ಸುರೇಶ ಇದ್ದರು.

ಆಟೋ ನಿಲ್ದಾಣ ಉದ್ಘಾಟನೆ...




ಮೈಸೂರು ವಾರ್ಡ್ ನಂ.49ರ ಬಲ್ಲಾಳ್ ವೃತ್ತ ಬಳಿ ನೂತನ ಮೇಲ್ಛಾವಣಿ ನಿರ್ಮಿತ ಆಟೋ ನಿಲ್ದಾಣವನ್ನು ಶಾಸಕ ಟಿ.ಎಸ್.ಶ್ರೀವತ್ಸ ಉದ್ಘಾಟಿಸಿದರು. ಈ ವೇಳೆ ಆಟೋ ಚಾಲಕರಾದ ಪರಮೇಶ್, ಯೋಗೇಶ್, ಲೋಕೇಶ್, ದೀಪು, ಶ್ರೀನಿವಾಸ್, ಚಂದ್ರ, ಕೇಶವ್, ಕೆ.ಆರ್ ಕ್ಷೇತ್ರದ ಬಿಜೆಪಿ ಅಧ್ಯಕ್ಷ ಗೋಪಾಲ್‌ರಾಜೇ ಅರಸ್, ಬಿಜೆಪಿ ಮುಖಂಡರಾದ ವಿಶ್ವೇಶ್ವರಯ್ಯ, ಮಹೇಂದ್ರ, ನಾಗರಾಜ್, ಬಿಲ್ಲಯ್ಯ, ಮಧು, ಜಿತೇಂದ್ರ, ದೀಪು ಇನ್ನಿತರರು ಉಪಸ್ಥಿತರಿದ್ದರು

ಇಂದು ಸಮಷ್ಟಿ ವಾರ್ಷಿಕ ಕ್ರೀಡಾಕೂಟ

ಮೈಸೂರು,ಡಿ.3–ಮೈಸೂರಿನ ಶಾರದಾವಿಲಾಸ್ ಪದವಿಪೂರ್ವ ಕಾಲೇಜಿನ ಕ್ರೀಡಾಂಗಣದಲ್ಲಿ ಡಿ.4ರಂದು ಬೆಳಗ್ಗೆ 9 ಗಂಟೆಗೆ ಸಮಷ್ಟಿ ವಾರ್ಷಿಕ ಕ್ರೀಡಾಕೂಟವನ್ನು ಏರ್ಪಡಿಸಲಾಗಿದೆ. ಮುಖ್ಯ ಅತಿಥಿಗಳಾಗಿ ಭಾರತ ಸರ್ಕಾರ ಸೆಂಟ್ರಲ್ ಟ್ಯಾಕ್ಸ್ & ಕಸ್ಟಮ್ಸ್‌ನ ನಿವೃತ್ತ ಅಧಿಕಾರಿ ಹಾಗೂ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಎಂ.ಯೋಗೇಂದ್ರ ಚಾಲನೆ ನೀಡಲಿದ್ದಾರೆ. ವಿಶೇಷ ಆಹ್ವಾನಿತರಾಗಿ ಶಾರದಾವಿಲಾಸ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಡಾ.ಬಿ.ಎಂ.ಸುಬ್ರಾಯ, ಗೌರವ ಕಾರ್ಯದರ್ಶಿ ದಿನೇಶ್.ಆರ್ ಭಾಗವಹಿಸಲಿದ್ದಾರೆ. ಕಾಲೇಜಿನ ಪ್ರಾಂಶುಪಾಲ ಸಿ.ಕೆ.ಅಶೋಕ್‌ಕುಮಾರ್ ಅಧ್ಯಕ್ಷತೆ ವಹಿಸಲಿದ್ದಾರೆ.


ನಿಧನ

ಡಾ. ಕೆ.ಯಶೋಧರ



ಮೈಸೂರು, ಡಿ. 3– ಮೈಸೂರು ವಿಶ್ವವಿದ್ಯಾನಿಲಯದ ವಿಶ್ರಾಂತ ಶಿಕ್ಷಣ ಪ್ರಾಧ್ಯಾಪಕಿ ಡಾ.ಕೆ.ಯಶೋಧರ (73) ಮಂಗಳವಾರ ರಾತ್ರಿ 9 ಗಂಟೆಗೆ ಅನಾರೋಗ್ಯದ ಕಾರಣದಿಂದ ಮೈಸೂರಿನ ನಾರಾಯಣ ಆಸ್ಪತ್ರೆಯಲ್ಲಿ ನಿಧನರಾದರು. ಮೈಸೂರು ವಿಶ್ವವಿದ್ಯಾನಿಲಯದ ಶಿಕ್ಷಣ ಶಾಸ್ತ್ರ ಅಧ್ಯಯನ ವಿಭಾಗದ ಅಧ್ಯಕ್ಷರಾಗಿ, ಡೀನ್ ಆಗಿ, ಶಿಕ್ಷಣ ಪ್ರಾಧ್ಯಾಪಕಿಯಾಗಿ ಶಿಕ್ಷಣ ಕ್ಷೇತ್ರದಲ್ಲಿ ಒಟ್ಟು 40 ವರ್ಷಗಳ ಸುದೀರ್ಘ ಸೇವೆ ಸಲ್ಲಿಸಿದ್ದರು. ಉತ್ತಮ ವಾಗ್ಮಿಯಾಗಿ, ಭಾಷಾಂತರ ಕಾರ್ತಿಯಾಗಿ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಓರ್ವ ಶೈಕ್ಷಣಿಕ ಚಿಂತಕರಾಗಿ ಗುರುತಿಸಿಕೊಂಡವರು. ಇತ್ತೀಚೆಗೆ ಇವರ ಕೃತಿ "ವಿಚಾರಧಾರೆ" ಮೈಸೂರಿನಲ್ಲಿ ಲೋಕಾರ್ಪಣೆಗೊಂಡಿತ್ತು. ಕೆ.ಟಿ.ಕಾಳಾಚಾರ್ ಮತ್ತು ಬಸವರಾಜಮ್ಮ ದಂಪತಿ ಪುತ್ರಿಯಾದ ಇವರು ಕಿರಿಯ ಸಹೋದರಿಯರು, ಇಬ್ಬರು ಸಹೋದರರು ಸೇರಿದಂತೆ ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ಬುಧವಾರ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸಾದತ್ ಉಲ್ಲಾ ಬೇಗ್



ಮೈಸೂರಿನ ಬಿಟಿ ಮಿಲ್ ಲೇಔಟ್ ನಿವಾಸಿ ಹಾಗೂ ನಿವೃತ್ತ ರೈಲ್ವೆ ನೌಕರ ಸಾದತ್ ಉಲ್ಲಾ ಬೇಗ್ (82) ಮಂಗಳವಾರ ಮಧ್ಯಾಹ್ನ ತಮ್ಮ ನಿವಾಸದಲ್ಲಿ ವಯೋಸಹಜ ಅನಾರೋಗ್ಯದಿಂದ ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರಿ, ಮೂವರು ಪುತ್ರರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಸಂಸ್ಕಾರ ಮೈಸೂರು–ಬೆಂಗಳೂರು ರಸ್ತೆಯಲ್ಲಿರುವ ಮುಸ್ಲಿಮರ ರುದ್ರಭೂಮಿ ಗೇಟ್ ನಂ.2ರಲ್ಲಿ ಮೃತರ ಅಂತ್ಯ ಸಂಸ್ಕಾರ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

4.12.2025 ಗುರುವಾರ, ಮಳೆ ನಕ್ಷತ್ರ: ಜ್ಯೇಷ್ಠ 03.12.2025 ರಿಂದ 15.12.2025 ವಿಶ್ವಾವಸು ನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಮಾರ್ಗಶಿರ ಮಾಸ, ಶುಕ್ಲ ಪಕ್ಷ, ತಿಥಿ: ಚತುರ್ದಶಿ, ನಕ್ಷತ್ರ: ಕೃತ್ತಿಕ, ರಾಹುಕಾಲ: ಮಧ್ಯಾಹ್ನ 1.30 ರಿಂದ 3 ಗಂಟೆಯವರೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ –ನಿತಿನ್ ರಾಜಾರಾಂ ಶಾಸ್ತ್ರೀ, ವ್ಯಾಖ್ಯಾನ–ಪದ್ಮಿನಿ ಹೆಗಡೆ, 6.50 ರೈತರಿಗೆ ಸಲಹೆ, 7.15 ಹಸಿರು ಹೊನ್ನು, 8.30 ಕನ್ನಡ ಚಿತ್ರಗೀತೆಗಳು, 9.00 ಕನ್ನಡದ ಕಸ್ತೂರಿ–ನಾ ಕಸ್ತೂರಿ ನೆನಪುಗಳ ಮಾಲಿಕೆ, ಕಸ್ತೂರಿ ಮಾತ್ರೆ ಮಾತನಾಡುವವರು ಪ್ರೊ. ಎಂ. ಕೃಷ್ಣೇಗೌಡ ನಂತರ ಹಾಸ್ಯಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ–ಕಾಡಿನಲ್ಲಿನ ಕಥೆಗಳು.

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಚಿತ್ರಗೀತೆಗಳು, 1.00 ಪ್ರಗತಿ ಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ಕನ್ನಡ ಚಿತ್ರಗೀತೆಗಳು, 4.00 ಜನಪದ ಸಂಗೀತ, 4.30 ಸಂಧ್ಯಾರಾಗ, 6.50 ಕೃಷಿರಂಗ, ಕಿಸಾನ್‌ವಾಣಿ, ಪ್ರಾಯೋಜಕರು ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಅರಿಸಿಣ ಬೇಸಾಯದಲ್ಲಿ ಯಾಂತ್ರೀಕರಣ ಕುರಿತು ಸಂವಾದ ಭಾಗವಹಿಸುತ್ತಾರೆ–ಚಾಮರಾಜನಗರ ತಾಲೂಕು ಹರದನಹಳ್ಳಿಯ ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿ ಡಾ. ಎ.ಬಿ. ಮೋಹನ್ ಕುಮಾರ್ ಮತ್ತು ಕೃಷಿಕ ಎನ್. ಮಂಜುನಾಥ್, ಪ್ರಸ್ತುತಿ –ಎನ್. ಕೇಶವ ಮೂರ್ತಿ, 7.45 ಕನ್ನಡ ಚಿತ್ರಗೀತೆಗಳು, 8.00 ಯುವವಾಣಿ, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ, 10.00 ರಾಷ್ಟ್ರೀಯ ಪ್ರಾದೇಶಿಕ ಲಘು ಸಂಗೀತ ಕಾರ್ಯಕ್ರಮ, ಡಾ. ಸುರಭಿ. ಪಿ – ಹಾಡುಗಾರಿಕೆ

- **ಶ್ರೀ ಗೀತಾ ಪ್ರಚಾರಿಣಿ ಸಭಾ ಟ್ರಸ್ಟ್ (ಬ್ರಹ್ಮೀಭೂತ ಶ್ರೀ ಶಂಕರಾನಂದ ಭಾರತೀ ಸ್ವಾಮಿಗಳಿಂದ ಸ್ಥಾಪಿತ ಗೀತಾಮಂದಿರ, ಮೈಸೂರು:** 91ನೇ ವರ್ಷದ ಶ್ರೀ ಗೀತಾ ಜಯಂತಿ ಮಹೋತ್ಸವ, ಬೆಳಗ್ಗೆ 8ಕ್ಕೆ ಸಾಮೂಹಿಕ ಭಗವದ್ಗೀತೆ ಪಾರಾಯಣ, 8.30ಕ್ಕೆ ಮಹಾಮಂಗಳಾರತಿ, ಪ್ರಸಾದ ವಿನಿಯೋಗ. ಸಂಜೆ 5.45ಕ್ಕೆ ಶ್ರೀ ವಿದ್ಯಾವಿಷ್ಣು ಸಭಾ ಟ್ರಸ್ಟ್ ಇವರಿಂದ ವಿಷ್ಣು ಸಹಸ್ರನಾಮ ಪಾರಾಯಣ, ಸಂಜೆ 6.30ರಿಂದ ಬಿ.ಎನ್.ಮಾಧವಾಚಾರ್ ಅವರಿಂದ ಶ್ರೀ ರಾಮಚಾರಿತ್ರ ಮಂಜರೀ. ಸ್ಥಳ: ಗೀತಾ ಮಂದಿರ, ಅಶೋಕ ರಸ್ತೆ
- **ಶಾರದಾವಿಲಾಸ ಪದವಿಪೂರ್ವ ಕಾಲೇಜು:** ವಾರ್ಷಿಕ ಕ್ರೀಡಾಕೂಟ ಸಮಷ್ಟಿ–2025, ಮುಖ್ಯ ಅತಿಥಿಗಳು: ಭಾರತ ಸರ್ಕಾರ ಸೆಂಟ್ರಲ್ ಟ್ಯಾಕ್ಸ್ & ಕಸ್ಟಮ್ಸ್‌ನ ನಿವೃತ್ತ ಅಧಿಕಾರಿ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಎಂ.ಯೋಗೇಂದ್ರ, ವಿಶೇಷ ಆಹ್ವಾನಿತರು: ಶಾರದಾವಿಲಾಸ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಡಾ.ಬಿ.ಎಂ.ಸುಬ್ರಾಯ, ಗೌರವ ಕಾರ್ಯದರ್ಶಿ ಆರ್.ದಿನೇಶ್, ಅಧ್ಯಕ್ಷತೆ: ಕಾಲೇಜು ಪ್ರಾಂಶುಪಾಲ ಸಿ.ಕೆ.ಅಶೋಕ್‌ಕುಮಾರ್, ಉಪಸ್ಥಿತರು : ದೈಹಿಕ ಶಿಕ್ಷಣ ವಿಭಾಗದ ಉಪನ್ಯಾಸಕ ಡಿ. ಶಿವಶಂಕರ್, ಸ್ಥಳ: ಶಾರದಾವಿಲಾಸ ಪದವಿಪೂರ್ವ ಕಾಲೇಜಿನ ಕ್ರೀಡಾಂಗಣ, ಕೃಷ್ಣಮೂರ್ತಿಪುರಂ, ಬೆಳಗ್ಗೆ 9ಕ್ಕೆ.
- **ರಾಮ್‌ಸನ್ಸ್ ಬೊಂಬೆ ಮನೆ:** ದಸರೆಯ ಬೊಂಬೆ ಪ್ರದರ್ಶನದ 21ನೇ ಅವತರಣಿಕೆ. ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ. ಬೆಳಗ್ಗೆ 10 ರಿಂದ.
- **ಪ್ರೀತಿ ಕ್ಯಾನ್ಸರ್ ಸೆಂಟರ್ :** ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ, ಸ್ಥಳ: ಲಕ್ಷ್ಮೀಪುರಂನ ಪ್ರೀತಿ ಕ್ಯಾನ್ಸರ್ ಸೆಂಟರ್, ಬೆಳಗ್ಗೆ 10 ರಿಂದ ರಾತ್ರಿ 8 ಗಂಟೆಯವರೆಗೆ
- **ನೈಪುಣ್ಯ ಸ್ಕೂಲ್ ಆಫ್ ಎಕ್ಸಲೆನ್ಸ್ :** ನೈಪುಣ್ಯ ವಾರ್ಷಿಕ ಸಂಭ್ರಮ, ಜನಪದ ತೇರು ಕಾರ್ಯಕ್ರಮ, ಉದ್ಘಾಟನೆ : ಮೈಸೂರು ವಿವಿ ಕುಲಸಚಿವೆ ಶ್ರೀಮತಿ ಎಂ.ಕೆ. ಸವಿತಾ, ಮುಖ್ಯ ಅತಿಥಿಗಳು : ಶಿಕ್ಷಣ ತಜ್ಞೆ ಡಾ. ಎಲ್. ಸವಿತಾ, ಪದ್ಮಶ್ರೀ ಪುರಸ್ಕೃತ ಚಲನಚಿತ್ರ ಸಾಹಸ ನಿರ್ದೇಶಕ ಡಾ. ಹಾಸನ್ ರಘು ಅವರಿಗೆ ನೈಪುಣ್ಯ ಗೌರವ ಪ್ರಶಸ್ತಿ ಪ್ರದಾನ, ಅಧ್ಯಕ್ಷತೆ : ನೈಪುಣ್ಯ ಶಿಕ್ಷಣ ಸಂಸ್ಥೆ ಅಧ್ಯಕ್ಷ ಆರ್. ರಘು, ಸ್ಥಳ: ನೈಪುಣ್ಯ ಸ್ಕೂಲ್ ಆಫ್ ಎಕ್ಸಲೆನ್ಸ್, ಕನಕದಾಸನಗರ, ಬೆಳಗ್ಗೆ 10 ರಿಂದ.
- **ಕಾವೇರಿ ಆಯುರ್ವೇದ ಆಸ್ಪತ್ರೆ:** ತಲೆ ಕೂದಲು, ಗಂಟಲು, ದಂತ ಮತ್ತು ಆಮವಾತಕ್ಕೆ ಚಿಕಿತ್ಸಾ ಶಿಬಿರ. ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್. ಬೆಳಗ್ಗೆ 10 ರಿಂದ.
- **ಜೆಎಸ್‌ಎಸ್ ಸಂಗೀತ ಸಭಾ ಟ್ರಸ್ಟ್ :** ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಸಂಸ್ಮರಣಾ 30ನೇ ಸಂಗೀತ ಸಮ್ಮೇಳನ, ಬೆಳಗ್ಗೆ 10ಕ್ಕೆ ವಿದ್ವಾನ್ ತುಮಕೂರು ಬಿ. ರವಿಶಂಕರ್ ಶಿಷ್ಯ ವೃಂದದವರಿಂದ ಸಂಗೀತಾಂಜಲಿ, ಬೆಳಗ್ಗೆ 10.30ಕ್ಕೆ ವಿದ್ವತ್ ಗೋಷ್ಠಿ, ವಿದ್ವಾನ್ ಸಂಪಗೋಡು ವಿಘ್ನರಾಜ ಅವರಿಂದ ಗಾಯನ ಹಾಗೂ ಸುಮುಖ ವೀಣಾವಾದನದ ತುಲನಾತ್ಮಕ ವಿಶ್ಲೇಷಣೆ, ಬೆಳಗ್ಗೆ 11.30ಕ್ಕೆ ವಿದುಷಿ ಡಾ. ಟಿ.ಎಸ್. ಸತ್ಯವತಿ ಅವರಿಂದ ದೀಕ್ಷಿತರ ಕೃತಿಗಳ ಸೌಂದರ್ಯ ಮೀಮಾಂಸೆ, ಸಂಜೆ 5.30ಕ್ಕೆ ವಿದುಷಿ ಮೇಧಾ ಮಂಜುನಾಥ್ ಅವರಿಂದ ಗಾಯನ, ವಿದುಷಿ ಎಸ್.ಎ. ದಿವ್ಯಶ್ರೀ–ಪಿಟೀಲು, ವಿದ್ವಾನ್ ಎಸ್.ಪಿ. ನಾಗೇಂದ್ರಪ್ರಸಾದ್–ಮೃದಂಗ, ಸಂಜೆ 6.30 ರಿಂದ ವಿದ್ವಾನ್ ಸಂಪಗೋಡು ವಿಘ್ನರಾಜ ಅವರಿಂದ ಗಾಯನ, ವಿದ್ವಾನ್ ಮತ್ತೂರು ಶ್ರೀನಿಧಿ–ಪಿಟೀಲು, ವಿದ್ವಾನ್ ಅನಿರುದ್ಧ್ ಭಟ್–ಮೃದಂಗ, ವಿದ್ವಾನ್ ಶರತ್ ಕೌಶಿಕ್–ಘಟಂ, ಸ್ಥಳ: ನವಜ್ಯೋತಿ ಸಭಾಂಗಣ, ಜೆಎಸ್‌ಎಸ್ ಮಹಿಳಾ ಕಾಲೇಜು, ಸರಸ್ವತಿಪುರಂ.
- **ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ :** ಹುಣ್ಣಿಮೆ – ಶ್ರೀ ದತ್ತಾತ್ರೇಯ ಜಯಂತಿ, ಬೆಳಗ್ಗೆ 9 ಗಂಟೆಗೆ ಶ್ರೀ ಕಾಲಾಗ್ನಿ ಶಮನ ದತ್ತಾತ್ರೇಯ ಸ್ವಾಮಿಗೆ ತೈಲಾಭಿಷೇಕ, ಬೆಳಿಗ್ಗೆ 10 ಗಂಟೆಗೆ ಭಕ್ತಾದಿಗಳಿಂದ ಸಹಸ್ರ ಕಳಶ ತೈಲಾಭಿಷೇಕ, ಸಂಜೆ 6 ಗಂಟೆಗೆ ಸಪ್ತರ್ಷಿ ಸರೋವರದಲ್ಲಿ ಶ್ರೀ ದತ್ತಾತ್ರೇಯ ಸ್ವಾಮಿಯ ಪಲ್ಲಕ್ಕಿ ಉತ್ಸವ ಮತ್ತು ತೆಪ್ಪೋತ್ಸವ, ರಾತ್ರಿ 8 ಗಂಟೆಗೆ ಕಾಕಡಾರತಿ ಹಾಗೂ ಡೋಲೋತ್ಸವ, ಸ್ಥಳ: ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ.
- **ಶ್ರೀ ಪಂಚಮುಖಿ ಆಂಜನೇಯಸ್ವಾಮಿ ದೇವಸ್ಥಾನ :** 25ನೇ ವರ್ಷದ ಹನುಮಜಯಂತಿ ಮಹೋತ್ಸವ, ವಿಶೇಷ ಪೂಜೆ, ಅಲಂಕಾರ, ಅಭಿಷೇಕ, ಪ್ರಸಾದ ಸೇವೆ, ಧಾರ್ಮಿಕ ಪೂಜಾ ಕಾರ್ಯಕ್ರಮ, ಸ್ಥಳ: ಶ್ರೀ ಪಂಚಮುಖಿ ಆಂಜನೇಯಸ್ವಾಮಿ ದೇವಸ್ಥಾನ, ಇರ್ವಿನ್ ರಸ್ತೆ.
- **ಸದ್ವಿದ್ಯಾ ಶಿಕ್ಷಣ ಸಂಸ್ಥೆಗಳು, ಸದ್ವಿದ್ಯಾ ಆಂಗ್ಲೋ ಸಂಸ್ಕೃತ ಪಾಠಶಾಲೆ :** ಸಾತ್ವಿಕ ಸದ್ವಿದ್ಯಾ, ಶಾಲಾ ವಾರ್ಷಿಕೋತ್ಸವ, ಅಧ್ಯಕ್ಷತೆ : ಸದ್ವಿದ್ಯಾ ಶಿಕ್ಷಣ ಸಂಸ್ಥೆ ಗೌರವ ಅಧ್ಯಕ್ಷ ಪ್ರೊ. ಎಂ.ಎಸ್.ಕೆ. ನರಹರಿಬಾಬು, ಮುಖ್ಯ ಅತಿಥಿಗಳು : ಬರಹಗಾರ ಯದುಶ್ರೇಷ್ಠ ಶ್ರೀನಿಧಿ, ಕಾರ್ಯದರ್ಶಿ ಎಂ.ಡಿ. ಗೋಪಿನಾಥ್, ಸ್ಥಳ: ಜಗನ್ಮೋಹನ ಅರಮನೆ, ಸಂಜೆ 4.30 ರಿಂದ.
- **ಶ್ರೀ ರಾಘವೇಂದ್ರಸ್ವಾಮಿ ಸೇವಾ ಸಮಿತಿ :** ಪಂಡಿತ್ ವ್ಯಾಸತೀರ್ಥಾಚಾರ್ಯ ಅವರಿಂದ ಮಹಾಭಾರತ ತಾತ್ಪರ್ಯ ನಿರ್ಣಯ ಕುರಿತು ಪ್ರವಚನ, ಸ್ಥಳ: ಶ್ರೀ ರಾಘವೇಂದ್ರಸ್ವಾಮಿ ಮಠ, ಜಯಲಕ್ಷ್ಮಿಪುರಂ, ಸಂಜೆ 5ರಿಂದ.
- **ಶ್ರೀ ವೀರಾಂಜನೇಯಸ್ವಾಮಿ ದೇವಸ್ಥಾನ ಟ್ರಸ್ಟ್ :** ಶ್ರೀ ಸತ್ಯನಾರಾಯಣ ಪೂಜೆ, ಮ. 12ಕ್ಕೆ ಮಹಾಮಂಗಳಾರತಿ, ಅನ್ನಸಂತರ್ಪಣೆ, ಸ್ಥಳ: ಶ್ರೀ ವೀರಾಂಜನೇಯಸ್ವಾಮಿ ದೇವಸ್ಥಾನ, ಹನುಮಂತನಗರ, ಬನ್ನಿಮಂಟಪ ಸಿ ಬಡಾವಣೆ.
- **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಶ್ರೀಮದ್ಭಗವದ್ಗೀತಾ ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.
- **ಶ್ರೀ ಸುತ್ತೂರು ಮಠ :** ಬೆಳದಿಂಗಳ ಸಂಗೀತ–286, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ವಿದುಷಿ ಬಿ.ಎನ್. ಗಾಯತ್ರಿದೇವಿ ಅವರಿಂದ ಗಾಯನ, ವಿದ್ವಾನ್ ತುಮಕೂರು ಯಶಸ್ವಿ–ಪಿಟೀಲು, ವಿದ್ವಾನ್ ವೈ.ಪಿ. ವಿಕ್ರಮ್ ಭಾರದ್ವಾಜ್–ಮೃದಂಗ, ವಿದ್ವಾನ್ ಆರ್. ದಾಸಪ್ಪ –ಮೋರ್ಸಿಂಗ್, ಸ್ಥಳ: ಶ್ರೀಸುತ್ತೂರು ಮಠ, ಚಾಮುಂಡಿಬೆಟ್ಟದ ತಪ್ಪಲು, ಸಂಜೆ 6ಕ್ಕೆ.
- **ದೀಕ್ಷಿತ್ ಆರೋಗ್ಯ ಧಾಮ :** ಆನಂದ ಆರೋಗ್ಯ ಮಾರ್ಗಶಿರ ಹುಣ್ಣಿಮೆಯ ಮಾಸದ ಕಾರ್ಯಕ್ರಮ, ಚಿ. ಆದಿತ್ಯ ಜೊನ್ನಾಲಗಡ್ಡ ಅವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ, ವಿದುಷಿ ಪ್ರೇರಣಾ ಪ್ರವೀಣ್ –ಪಿಟೀಲು, ವಿದ್ವಾನ್ ಕುಮಾರಸ್ವಾಮಿ–ಮೃದಂಗ, ಡಾ. ವಿದ್ಯಾಸಾಗರ್ ಅವರಿಂದ ಬಾಲ್ಯದ ಮಾನಸಿಕ ಬೆಳವಣಿಗೆ ಸಮಸ್ಯೆಗಳು ಕುರಿತು ಉಪನ್ಯಾಸ, ಸ್ಥಳ: ದೀಕ್ಷಿತ್ ಆರೋಗ್ಯ ಧಾಮ, ವಿಜಯನಗರ 3ನೇ ಹಂತ, ಸಂಜೆ 6 ರಿಂದ.

ಚಾಮುಂಡಿಬೆಟ್ಟದ ಸಮೂಹ ದೇವಾಲಯಗಳಲ್ಲಿ ವಿಶೇಷ ಸೇವೆಗೆ ತಕ್ಕಂತೆ ದರ ನಿಗದಿ

ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಜಿಲ್ಲಾ ಮಟ್ಟದ ಪ್ರಗತಿ ಪರಿಶೀಲನಾ ಸಭೆಯಲ್ಲಿ ತೀರ್ಮಾನ



ದೇವಸ್ಥಾನಗಳ ಆದಾಯ ಸೋರಿಕೆ ತಡೆಗೂ ನಿರ್ಧಾರ



ಮೈಸೂರಿನ ಜಿಪಂ ಸಭಾಂಗಣದಲ್ಲಿ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ್ ರೆಡ್ಡಿ ಅಧ್ಯಕ್ಷತೆಯಲ್ಲಿ ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಜಿಲ್ಲಾ ಮಟ್ಟದ ಪ್ರಗತಿ ಪರಿಶೀಲನಾ ಸಭೆ ನಡೆಯಿತು.

ಮೈಸೂರು, ಡಿ.3(ಎಂಟಿವೈ)– ಚಾಮುಂಡಿ ಬೆಟ್ಟದ ಸಮೂಹ ದೇವಾಲಯಗಳಲ್ಲಿ ಭಕ್ತರು ನಡೆಸುವ ವಿವಿಧ ಸೇವೆಗಳಿಂದ ಬರುವ ಆದಾಯ ಸೋರಿಕೆ ತಡೆಗಟ್ಟುವುದು ಹಾಗೂ ವಿಶೇಷ ಸೇವೆಗೆ ತಕ್ಕಂತೆ ಪ್ರತ್ಯೇಕ ದರ ನಿಗದಿ ಮಾಡಲು ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಜಿಲ್ಲಾ ಮಟ್ಟದ ಪ್ರಗತಿ ಪರಿಶೀಲನಾ ಸಭೆಯಲ್ಲಿ ತೀರ್ಮಾನಿಸಲಾಯಿತು.

ಮೈಸೂರಿನ ಜಿಪಂ ಸಭಾಂಗಣದಲ್ಲಿ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ್ ರೆಡ್ಡಿ ಅಧ್ಯಕ್ಷತೆಯಲ್ಲಿ ನಡೆದ ಶ್ರೀಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಜಿಲ್ಲಾ ಮಟ್ಟದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಚಾಮುಂಡಿಬೆಟ್ಟದ ಸಮೂಹ ದೇವಾಲಯಗಳಲ್ಲಿ ಭಕ್ತರು ನಡೆಸುವ ವಿವಿಧ ಸೇವೆಗಳಿಂದ ದೇವಾಲಯಕ್ಕೆ ಬರುವ ಆದಾಯ ಸೋರಿಕೆಯಾಗಬಾರದು. ಒಂದೊಂದು ದೇವಾಲಯದಲ್ಲೂ ಒಂದೊಂದು ಸೇವೆಗೆ ಅಧಿಕ ದರ ಪಡೆಯಲಾಗುತ್ತಿದೆ ಎಂಬ ಆರೋಪವಿದೆ. ಈ ಹಿನ್ನೆಲೆಯಲ್ಲಿ ಮುಂದಿನ ದಿನಗಳಲ್ಲಿ ಪೂಜೆ, ವಿವಿಧ ಸೇವೆಗಳಿಗೆ ದರ ನಿಗದಿ ಮಾಡಿ, ಭಕ್ತರಿಗೆ ಕಾಣುವಂತೆ ದೇವಾಲಯಗಳಲ್ಲಿ ಪ್ರದರ್ಶನ ಮಾಡಲು ನಿರ್ಧರಿಸಲಾಯಿತು.

ಸಭೆಯಲ್ಲಿ ಶ್ರೀಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಎಂ.ಜೆ.ರೂಪ ಮಾತನಾಡಿ, ಚಾಮುಂಡಿ ಬೆಟ್ಟದಲ್ಲಿನ ಸಮೂಹ ದೇವಾಲಯಗಳಲ್ಲಿ ಪ್ರತಿದಿನ ವಿಶೇಷ ಪೂಜೆ ನಡೆಯುತ್ತವೆ. ಇದರಲ್ಲಿ ಕೆಲವು ಸೇವೆಗಳ ಶುಲ್ಕ ಲೆಕ್ಕಕ್ಕೆ ಬಾರದ ಕಾರಣ ಏಕರೂಪದ ಶುಲ್ಕ ವಿಧಿಸಿದರೆ ಅನುಕೂಲವಾಗುತ್ತದೆ. ಚಾಮುಂಡೇಶ್ವರಿ ದೇವಾಲಯದಲ್ಲಿ ನಡೆಯುವ ಸೇವೆಗಳಿಗೆ ಈಗಾಗಲೇ ದರ ನಿಗದಿಯಾಗಿದೆ. ಬೆಣ್ಣೆ ಅಲಂಕಾರಕ್ಕೆ ಸೇವೆಗೆ ನೂರು ರೂ. ನಿಗದಿಪಡಿಸಿದ್ದರೆ, ಭಕ್ತಾದಿಗಳಿಂದ ಎರಡರಿಂದ ಮೂರು ಸಾವಿರ ರೂ. ಪಡೆಯಲಾಗುತ್ತದೆ. ಕೆಲವು ಕಡೆಗಳಲ್ಲಿ ಅನುಕೂಲಕ್ಕೆ ತಕ್ಕಂತೆ ಸೇವಾ ಶುಲ್ಕ ಪಡೆಯಲಾಗುತ್ತಿದೆ ಎಂದು ಭಕ್ತರು ದೂರಿದ್ದಾರೆ. ಹಾಗಾಗಿ ಏಕರೂಪದ ದರ ನಿಗದಿಪಡಿಸಿದರೆ ಸೂಕ್ತ ಎಂದು ಸಭೆಯ ಗಮನಕ್ಕೆ ತಂದರು.

ಇದಕ್ಕೆ ಪ್ರತಿಕ್ರಿಯಿಸಿದ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ, ಎಲ್ಲಾ ದೇವಾಲಯಗಳಿಗೂ ಒಂದೇ ರೀತಿ ಸೇವಾ ಶುಲ್ಕ ವಿಧಿಸುವುದು ಸರಿಯಲ್ಲ. ಪ್ರಸ್ತುತ ಯಾವ ದೇವಾಲಯದಲ್ಲಿ ಎಷ್ಟು ಶುಲ್ಕ ಪಡೆಯಲಾಗುತ್ತಿದೆ. ಮುಂದೆ ಎಷ್ಟು ಹೆಚ್ಚಿಸಬಹುದು. ಯಾವ ರೀತಿ ನಿರ್ವಹಣೆ ಮಾಡಬೇಕು ಎಂಬುದರ ವರದಿ ಕೊಡಿ, ನಂತರ ಪರಿಶೀಲನೆ ನಡೆಸಿ ನೂತನ ಸೇವಾ ದರವನ್ನು ಜಾರಿಗೆ ತರುವಂತೆ ಸೂಚಿಸಿದರು.

ಆದಾಯ ಹೆಚ್ಚಾಗಿದೆ: ದೇವಾಲಯದಿಂದ ಪ್ರಸಾದದ ರೂಪದಲ್ಲಿ ನೀಡಲಾಗುವ ಲಡ್ಡು ದರವನ್ನು 15 ರೂ.ನಿಂದ 25 ರೂ.ಗೆ, ಪ್ರವೇಶ ದರ 30ರಿಂದ 50 ರೂ, ಹಾಗೂ 100ರಿಂದ 200 ರೂ.ಗೆ ಹೆಚ್ಚಳ ಮಾಡಿರುವುದರಿಂದ ಆದಾಯ ಹೆಚ್ಚಾಗಿದೆ. 2025–26ರ ಅವಧಿಯಲ್ಲಿ 13 ಕೋಟಿ ಆದಾಯವಿತ್ತು. ಮುಂದಿನ ವರ್ಷ ಮತ್ತಷ್ಟು ಆದಾಯ ಹೆಚ್ಚಳವಾಗುವ ನಿರೀಕ್ಷೆ ಇದೆ ಎಂದರು.

ಚಾಮುಂಡೇಶ್ವರಿ ಅಮ್ಮನವರ ದೇವಾಲಯಕ್ಕೆ ಸೇರಿದ ಆಸ್ತಿಗಳಿಗೆ ಸಂಬಂಧಿಸಿದಂತೆ ಪರಿಷ್ಕೃತ ಮಾಸ್ಟರ್ ಪ್ಲಾನ್ ರೂಪಿಸಲಾಗಿದ್ದು, ಕೆಲವು ಬದಲಾವಣೆ, ಮಾರ್ಪಾಡು ಮಾಡಿ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಮುಂದೆ ನಡೆಯುವ ಸಭೆಯಲ್ಲಿ ಮಂಡಿಸುವಂತೆ ಸೂಚಿಸಿದರು.

ಬೀದಿಬದಿ ವ್ಯಾಪಾರಿಗಳನ್ನು ತೆರವುಗೊಳಿಸಿ: ಕಾರ್ಯದರ್ಶಿ ರೂಪ ಮುಂದುವರೆದು ಮಾತನಾಡಿ, ಚಾಮುಂಡೇಶ್ವರಿ ದೇವಾಲಯಕ್ಕೆ ಹೋಗುವ ಮಾರ್ಗ, ಪಾರ್ಕಿಂಗ್ ಕಟ್ಟಡದ ಮಾರ್ಗ, ಮಹಿಷಾಸುರ ಪ್ರತಿಮೆ ಮಾರ್ಗದಲ್ಲಿರುವ ಬೀದಿಬದಿ ವ್ಯಾಪಾರಿಗಳನ್ನು ಏಕಕಾಲದಲ್ಲಿ ತೆರವುಗೊಳಿಸಬೇಕಾಗಿದೆ. ಹತ್ತು ವ್ಯಾಪಾರಿಗಳನ್ನು ತೆರವುಗೊಳಿಸಿದರೆ, ಮರು ದಿನ ಮತ್ತೆ ಹತ್ತು ವ್ಯಾಪಾರಿಗಳು ಬಂದು ವ್ಯಾಪಾರ ಆರಂಭಿಸುತ್ತಾರೆ. ಆದ್ದರಿಂದ ಒಂದೇ ಬಾರಿಗೆ ತೆರವುಗೊಳಿಸಿ ವಾಣಿಜ್ಯ ಸಂಕೀರ್ಣ ಮಳಿಗೆಯಲ್ಲಿ ವ್ಯಾಪಾರ ಮಾಡುವಂತೆ ಕ್ರಮ ಕೈಗೊಳ್ಳಬೇಕಾಗಿದೆ.

ಚಾಮುಂಡಿಬೆಟ್ಟದಲ್ಲಿ 454 ವ್ಯಾಪಾರಿಗಳಿದ್ದು, ವಾಣಿಜ್ಯ ಸಂಕೀರ್ಣ ಕಟ್ಟಡದಲ್ಲಿ ಈಗಾಗಲೇ 97 ಮಳಿಗೆಗಳನ್ನು ಹಂಚಿಕೆ ಮಾಡಲಾಗಿದೆ. ಇನ್ನು 116 ಮಳಿಗೆ ಖಾಲಿ ಇವೆ. ಫುಡ್‌ಕೋರ್ಟ್‌ನಲ್ಲಿ 156 ಮಳಿಗೆ ಖಾಲಿಯಿದ್ದು, ಬೆಟ್ಟದಲ್ಲಿ ಒಟ್ಟು 272 ಮಳಿಗೆಗಳು ಖಾಲಿ ಇವೆ. ಈ ಹಿಂದೆ ಮಳಿಗೆ ಪಡೆದಿದ್ದವರಲ್ಲಿ ಕೆಲವರು ವ್ಯಾಪಾರ ಮಾಡುತ್ತಿಲ್ಲ. ಹಾಗಾಗಿ, ಮರು ಹಂಚಿಕೆ ಮಾಡುವುದು ಸೂಕ್ತವೆಂದರು.

ಇದಕ್ಕೆ ಪ್ರತಿಕ್ರಿಯಿಸಿದ ಜಿಲ್ಲಾಧಿಕಾರಿಗಳು, ಈ ಬಗ್ಗೆ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ನಡೆಯುವ ಸಭೆಯಲ್ಲಿ ವಿಷಯ ಮಂಡಿಸೋಣ. ಅವರ ಸಲಹೆಯಂತೆ ಮುಂದೆ ತೀರ್ಮಾನಿಸೋಣ ಎಂದು ಹೇಳಿದರು.

ಲಗ್ಗೇಜ್ ಕೌಂಟರ್: ಬೆಟ್ಟಕ್ಕೆ ಬರುವ ಭಕ್ತಾದಿಗಳ ಅನುಕೂಲಕ್ಕಾಗಿ ಲಗೇಜ್ ಕೌಂಟರ್ ನಿರ್ಮಾಣಕ್ಕೆ ಒಪ್ಪಿಗೆ, ಸರ್ಕಾರಿ ಉತ್ತನಹಳ್ಳಿಯಲ್ಲಿ ಶುದ್ಧ ಕುಡಿಯುವ ನೀರಿನ ಘಟಕ ಸ್ಥಾಪನೆಗೆ ಸಭೆಯಲ್ಲಿ ಒಪ್ಪಿಗೆ ನೀಡಲಾಯಿತು. ಚಾಮುಂಡಿಬೆಟ್ಟದ ಸರ್ವೆ ನಂ.27ರಲ್ಲಿನ ಉಳಿಕೆ ಜಮೀನು 3.17ಎಕರೆ ಹಾಗೂ ಸರ್ವೆ ನಂ.39ರಲ್ಲಿನ 0.36, ಮೈಸೂರು ತಾಲೂಕಿನ ಬಂಡೀಪಾಳ್ಯ ಸರ್ವೆ ನಂ.19ರಲ್ಲಿ ಒಟ್ಟು 58.03 ಎಕರೆ ಜಮೀನಿನಲ್ಲಿ ಐದು ಎಕರೆಯನ್ನು ದೇವಸ್ಥಾನದ ಮೂಲ ಸೌಕರ್ಯಕ್ಕೆ ನಿಗದಿಪಡಿಸುವ ಕುರಿತು ಚರ್ಚೆಯಾಗಿ, ಅಂತಿಮವಾಗಿ ಎಸಿ ಅವರು ಪರಿಶೀಲಿಸಿ ಅಗತ್ಯ ಕ್ರಮಕೈಗೊಳ್ಳುವಂತೆ ಸೂಚಿಸಲಾಯಿತು.

ಸಭೆಯಲ್ಲಿ ಜಿಪಂ ಸಿಎಓ ಎಸ್.ಯುಕೇಶ್ ಕುಮಾರ್, ಉಪವಿಭಾಗಾಧಿಕಾರಿ ಆಶಪ್ಪ, ಡಿಸಿಪಿ ಆರ್.ಎನ್.ಬಿಂದುಮಣಿ, ಲೋಕೋಪಯೋಗಿ ಇಲಾಖೆ ಕಾರ್ಯಪಾಲಕ ಅಭಿಯಂತರರು, ಪ್ರಾಧಿಕಾರದ ಉಪಕಾರ್ಯದರ್ಶಿ, ವ್ಯವಸ್ಥಾಪಕರು ಸೇರಿದಂತೆ ಮತ್ತಿತರರು ಪಾಲ್ಗೊಂಡಿದ್ದರು.

ಚಾಮುಂಡಿಬೆಟ್ಟದಲ್ಲಿ ಶಿಷ್ಟಾಚಾರ ಕೊಠಡಿ

• ಪ್ರಮುಖ ದಿನಗಳಲ್ಲಿ ಗಣ್ಯರ ದರ್ಶನಕ್ಕೆ ಶಿಷ್ಟಾಚಾರ ಪಾಲನೆ • ವಿಶೇಷ ದರ್ಶನಕ್ಕೆ ಸಾವಿರ ರೂ. ಟಿಕೆಟ್

ಮೈಸೂರು, ಡಿ.3(ಎಂಟಿವೈ)– ತಿರುಪತಿ, ಕಾಶಿ ಮಾದರಿಯಲ್ಲಿ ದಸರಾ ಹಾಗೂ ಆಷಾಢಮಾಸ ಸೇರಿದಂತೆ ಪ್ರಮುಖ ಸಂದರ್ಭಗಳಲ್ಲಿ ಚಾಮುಂಡಿ ಬೆಟ್ಟದಲ್ಲಿ ಗಣ್ಯರು ಹಾಗೂ ಅತಿ ಗಣ್ಯರಿಗಾಗಿ ಶಿಷ್ಟಾಚಾರ ಪಾಲಿಸಲು ಪ್ರತ್ಯೇಕ ಶಿಷ್ಟಾಚಾರದ ಕೊಠಡಿ ತೆರೆಯಲು ನಿರ್ಧರಿಸಲಾಗಿದೆ.

ಮೈಸೂರಿನ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ್ ರೆಡ್ಡಿ ಅಧ್ಯಕ್ಷತೆಯಲ್ಲಿ ನಡೆದ ಶ್ರೀಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಜಿಲ್ಲಾ ಮಟ್ಟದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಈ ಕುರಿತು ಸಮ್ಮತಿ ಸೂಚಿಸಲಾಯಿತು.

ಸಭೆಯಲ್ಲಿ ಶ್ರೀಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಎಂ.ಜೆ.ರೂಪಾ ಮಾತನಾಡಿ, ಆಷಾಢಮಾಸ, ದಸರಾ ಮಹೋತ್ಸವದ ಸೇರಿದಂತೆ ವಿಶೇಷ ಸಂದರ್ಭದಲ್ಲಿ ಚಾಮುಂಡಿಬೆಟ್ಟಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ವಿಐಪಿ, ವಿವಿಐಪಿಗಳು ಬರುತ್ತಾರೆ. ಈ ವೇಳೆ ಶಿಷ್ಟಾಚಾರ ಇಲ್ಲದಿದ್ದರೂ ಕೆಲವರು ವಿಐಪಿಗಳಿಗೆ ನೀಡುವ ಶಿಷ್ಟಾಚಾರದ ನೀರೀಕ್ಷೆಯಲ್ಲಿ ಬರುತ್ತಾರೆ. ಆ ಕಾರಣದಿಂದ ತಿರುಪತಿ ಮತ್ತು ಕಾಶಿಯಲ್ಲಿ ತೆರೆದಿರುವಂತೆ ಚಾಮುಂಡಿಬೆಟ್ಟದಲ್ಲೂ ಶಿಷ್ಟಾಚಾರದ ಕೌಂಟರ್ ತೆರೆಯುವ ಅಗತ್ಯವಿದೆ ಎಂದರು.

ಇದಕ್ಕೆ ಪ್ರತಿಕ್ರಿಯಿಸಿ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ್ ರೆಡ್ಡಿ ಮಾತನಾಡಿ, ಇತ್ತೀಚೆಗೆ ಕಾಶಿಗೆ ಹೋಗಿದ್ದಾಗ ಶಿಷ್ಟಾಚಾರದ ಕೊಠಡಿಗೆ ಭೇಟಿ ನೀಡಿದ್ದೆ. ಆ ಕೊಠಡಿಗೆ ಹೋಗಿ ಹೇಳಿದ ಮೇಲೆ ದರ್ಶನ ಮುಗಿಸಿ ವಾಪಸ್ ಬರುವವರೆಗೂ ಉತ್ತಮ ವ್ಯವಸ್ಥೆ ಮಾಡಿದ್ದರು. ತಿರುಮಲ ತಿರುಪತಿಯಲ್ಲಿಯೂ ಶಿಷ್ಟಾಚಾರದ ಕೊಠಡಿಯ ವ್ಯವಸ್ಥೆ ಇದೆ. ಅದೇ ಮಾದರಿಯಲ್ಲಿ ಚಾಮುಂಡಿ ಬೆಟ್ಟದಲ್ಲೂ ಶಿಷ್ಟಾಚಾರದ ವ್ಯವಸ್ಥೆ ಅಳವಡಿಸಿಕೊಂಡು ಜನವರಿ ತಿಂಗಳಲ್ಲೇ ಜಾರಿಗೆ ತರಲು ಅಗತ್ಯ ಸಿದ್ಧತೆ ಮಾಡಿಕೊಳ್ಳುವಂತೆ ಸೂಚಿಸಿದರು.

ಶಿಷ್ಟಾಚಾರ ಕೊಠಡಿಯನ್ನು ತೆರೆಯುವುದರಿಂದ ಯಾರೇ ವಿವಿಐಪಿ, ವಿಐಪಿಗಳು ದರ್ಶನಕ್ಕೆ ಬರುವ ದಿನಾಂಕ, ಸಮಯ ನಿಗದಿಪಡಿಸಿಕೊಳ್ಳಬೇಕಾಗುತ್ತದೆ. ಗಣ್ಯರು ಬಂದಾಗ ಅವರನ್ನು ಶಿಷ್ಟಾಚಾರದ ಸಿಬ್ಬಂದಿ ಕರೆದೊಯ್ದು ನೇರವಾಗಿ ದರ್ಶನ ಮಾಡಿಸಿ ವಾಪಸ್ ಕಳುಹಿಸುತ್ತಾರೆ. ಇದರಿಂದಾಗಿ, ಯಾವುದೇ ಗೊಂದಲ, ಅನಾನುಕೂಲಕ್ಕೆ ಅವಕಾಶ ಇರುವುದಿಲ್ಲ. ಜನವರಿಯಿಂದ ಈ ಹೊಸ ವ್ಯವಸ್ಥೆ ಜಾರಿಗೊಳಿಸಲಾಗುವುದು ಎಂದರು.

1 ಸಾವಿರ ರೂ. ಟಿಕೆಟ್ ಪಡೆದರೆ 15 ನಿಮಿಷದಲ್ಲೇ ದರ್ಶನ: ಚಾಮುಂಡಿಬೆಟ್ಟದಲ್ಲಿ ಸಾರ್ವಜನಿಕರ ಉಚಿತ ಪ್ರವೇಶ ಅಲ್ಲದೆ ಗೇಟ್–2 ಪ್ರವೇಶ ದರವನ್ನು 30ರೂ.ನಿಂದ 50 ರೂ., ಗೇಟ್–1 ಪ್ರವೇಶ ದರವನ್ನು 100ರೂ.ನಿಂದ 200ರೂ.ಗೆ ಹೆಚ್ಚಿಸಲಾಗಿತ್ತು. ಇದೀಗ ಒಂದು ಸಾವಿರ ರೂ. ದರದ ವಿಶೇಷ ಪ್ರವೇಶದ ಟಿಕೆಟ್‌ಗಳನ್ನು ಜ.1ರಿಂದ ಜಾರಿಗೆ ತರಲಾಗುತ್ತದೆ. ಒಂದು ಸಾವಿರ ರೂ. ಟಿಕೆಟ್ ಪಡೆದ ಭಕ್ತರಿಗೆ ಯಾವುದೇ ಅಡಚಣೆಯಾಗದಂತೆ ಹದಿನೈದು ನಿಮಿಷಗಳಲ್ಲಿ ನೇರ ದರ್ಶನ ಮುಗಿಸಿ ವಾಪಸ್ ಹೋಗುವಂತೆ ಮಾಡಲಾಗುತ್ತದೆ. ದೇವಸ್ಥಾನದ ಹಿಂಬದಿಯ ಪ್ರವೇಶ ದ್ವಾರದ ಬಳಿ 50ರೂ, 200ರೂ. ಟಿಕೆಟ್ ಪಡೆದವರಿಗೆ ಅವಕಾಶ ಇದ್ದರೆ, ಒಂದು ಸಾವಿರ ರೂ.ಟಿಕೆಟ್ ಪಡೆದವರಿಗೆ ಮುಂಬಾಗಿಲಿನಿಂದ ಕಳುಹಿಸಲಾಗುತ್ತದೆ. ಇದರಿಂದಾಗಿ ಯಾವುದೇ ದೂರು, ಅಪಸ್ವರಗಳಿಗೆ ಅವಕಾಶ ಇಲ್ಲದಂತೆ ನಿರ್ವಹಣೆ ಮಾಡಲು ನೋಡಿಕೊಳ್ಳಲಾಗುವುದು ಎಂದು ಕಾರ್ಯದರ್ಶಿ ಎಂ.ಜೆ.ರೂಪ ಸಭೆಯಲ್ಲಿ ವಿಷಯ ಮಂಡಿಸಿದರು.

'ಲಾ–ಗೈಡ್' ಕ್ಯಾಲೆಂಡರ್‌ಗೆ ಒರಿಸ್ಸಾ ಹೈಕೋರ್ಟ್ ನ್ಯಾ. ಕೃಷ್ಣದೀಕ್ಷಿತ್ ಮೆಚ್ಚುಗೆ



ಒರಿಸ್ಸಾ ಹೈಕೋರ್ಟ್ ನ್ಯಾಯಮೂರ್ತಿ ಕೃಷ್ಣ ದೀಕ್ಷಿತ್ (ಮಧ್ಯದಲ್ಲಿರುವವರು) ಅವರಿಗೆ ಲಾ–ಗೈಡ್ ಕ್ಯಾಲೆಂಡರ್ ಅನ್ನು ಹಿರಿಯ ವಕೀಲ ಹೆಚ್.ಎನ್.ವೆಂಕಟೇಶ್ ನೀಡಿದರು. ಚಿತ್ರದಲ್ಲಿ ವೆಂಕಟೇಶ್ ಅವರ ಪುತ್ರ, ಕಾನೂನು ವಿದ್ಯಾರ್ಥಿ ರೋಹನ್ ವಿ.ಗಂಗಡ್ಕರ್ ಅವರನ್ನು ಕಾಣಬಹುದು.

ಮೈಸೂರು, ಡಿ.3– ಇತ್ತೀಚೆಗೆ ಬಿಡುಗಡೆಯಾದ 'ಲಾ–ಗೈಡ್' ಕನ್ನಡ ಕಾನೂನು ಮಾಸಪತ್ರಿಕೆಯ 2026ನೇ ಸಾಲಿನ ಕ್ಯಾಲೆಂಡರ್ ಬಗ್ಗೆ ಒರಿಸ್ಸಾ ಹೈಕೋರ್ಟ್‌ನ ನ್ಯಾಯಮೂರ್ತಿ ಕೃಷ್ಣ ದೀಕ್ಷಿತ್ ಅವರು ಅಪಾರ ಮೆಚ್ಚುಗೆ ವ್ಯಕ್ತಪಡಿಸಿದರು.

ಕಾರ್ಯಕ್ರಮದ ನಿಮಿತ್ತ ಮೈಸೂರಿಗೆ ಆಗಮಿಸಿದ್ದ ನ್ಯಾಯಮೂರ್ತಿಗಳನ್ನು ಭೇಟಿಯಾಗಿ, ಲಾ–ಗೈಡ್ ಕಾನೂನು ಮಾಸ ಪತ್ರಿಕೆ ಗೌರವ ಸಂಪಾದಕರೂ ಆದ ಹಿರಿಯ ವಕೀಲ ಹೆಚ್.ಎನ್.ವೆಂಕಟೇಶ್ ಅವರು ಲಾ–ಗೈಡ್ ಕ್ಯಾಲೆಂಡರ್ ಹಾಗೂ ಡೈರಿ ನೀಡಿದರು.

ಈ ಬಾರಿ ಸುಪ್ರೀಂಕೋರ್ಟ್‌ನ ಪ್ರಮುಖ ತೀರ್ಪನ್ನು ಆಧರಿಸಿ ರೂಪಿಸಲಾಗಿರುವ ಕ್ಯಾಲೆಂಡರ್ ವಸ್ತು ವಿಷಯದ ಬಗ್ಗೆ ನ್ಯಾಯಮೂರ್ತಿ ಕೃಷ್ಣ ದೀಕ್ಷಿತ್ ಅವರು ಅತೀವ ಮೆಚ್ಚುಗೆ ವ್ಯಕ್ತಪಡಿಸಿದರು. ಇದು ಅವರ ಹೆಚ್.ಎನ್.ವೆಂಕಟೇಶ್ ಪುತ್ರ ಹಾಗೂ ಕಾನೂನು ವಿದ್ಯಾರ್ಥಿಯಾಗಿರುವ ರೋಹನ್ ವಿ ಗಂಗಡ್ಕರ್ ಅವರ ಐಡಿಯಾ ಎಂದು ತಿಳಿದು, ಅವರ ಪುತ್ರನ ಬೆನ್ನು ತಟ್ಟಿ ಮೆಚ್ಚುಗೆ ವ್ಯಕ್ತಪಡಿಸಿದರು. ತುಂಬಾ ಉತ್ತಮವಾದ ವಿಷಯವನ್ನು ಆಯ್ಕೆ ಮಾಡಿದ್ದೀಯಾ ಎಂದು ಅಭಿನಂದಿಸಿದರು. ಇದರ ಜೊತೆಗೆ ಕ್ಯಾಲೆಂಡರ್‌ನಲ್ಲಿ ವೆಬ್ ವಿಳಾಸ ಹಾಗೂ ಕ್ಯೂ ಆರ್ ಕೋಡ್ ಅಳವಡಿಸಿರುವ ತಂತ್ರಜ್ಞಾನದ ಬಗ್ಗೆಯೂ ಮೆಚ್ಚುಗೆ ವ್ಯಕ್ತಪಡಿಸಿದರು.

ಆರ್‌ಟಿಇ ಅಡಿ ಪಿಯುವರೆಗೆ ಶಿಕ್ಷಣ ನೀಡಲಿ: ಪೋಷಕರ ಮನವಿ

ಮೈಸೂರು, ಡಿ. 3 (ಆರ್‌ಕೆ)– ಶಿಕ್ಷಣ ಹಕ್ಕು ಕಾಯಿದೆ (ಆರ್‌ಟಿಇ) ಯಡಿ ಮಕ್ಕಳಿಗೆ ಪಿಯುಸಿವರೆಗೆ ಉಚಿತ ಶಿಕ್ಷಣವನ್ನು ಮುಂದುವರೆಸಬೇಕೆಂದು ಪೋಷಕರು ಸರ್ಕಾರವನ್ನು ಒತ್ತಾಯಿಸಿದ್ದಾರೆ.



ಈಗಾಗಲೇ ಎಲ್‌ಕೆಜಿಯಿಂದ 8ನೇ ತರಗತಿವರೆಗೆ ಹಾಗೂ 1 ರಿಂದ 10ನೇ ತರಗತಿವರೆಗೆ ಮಾತ್ರ ರಾಜ್ಯ ಮತ್ತು ಐಸಿಎಸ್‌ಇ ಸಿಲಬಸ್‌ಗೆ ಅರ್ಹ ಮಕ್ಕಳಿಗೆ ಸರ್ಕಾರವು ಉಚಿತ ಶಿಕ್ಷಣ ನೀಡುತ್ತಿದೆ. ರಾಜ್ಯ ಸಿಲಬಸ್‌ನವರಿಗೆ ಅದೇ ಶಾಲೆ ಅಥವಾ ಬೇರೆ ಶಾಲೆಯಲ್ಲಿ ಶಿಕ್ಷಣ ಮುಂದುವರೆಸಲು ಅವಕಾಶವಿರುತ್ತದೆ. ಆದರೆ ಐಸಿಎಸ್‌ಇ ವಿದ್ಯಾರ್ಥಿಗಳಿಗೆ ಈ ಅವಕಾಶವಿರುವುದಿಲ್ಲವಾದ್ದರಿಂದ ಕೇಂದ್ರ ಸಿಲಬಸ್ ಮಕ್ಕಳಿಗೆ ಅದೇ ಶಾಲೆಯಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿವರೆಗೆ ಉಚಿತವಾಗಿ ವಿದ್ಯಾಭ್ಯಾಸ ಮುಂದುವರೆಸಲು ಸರ್ಕಾರ ಅವಕಾಶ ಕಲ್ಪಿಸಬೇಕು ಎಂದೂ ಪೋಷಕರು ಒತ್ತಾಯಿಸುತ್ತಿದ್ದಾರೆ.

ಒಂದು ವೇಳೆ ಈಗಾಗಲೇ ಓದುತ್ತಿರುವ ಸೆಂಟ್ರಲ್ ಸಿಲಬಸ್ ಶಾಲೆಯಲ್ಲಿ ಶಿಕ್ಷಣ ಮುಂದುವರೆಸಲು ಅವಕಾಶ ನೀಡದಿದ್ದಲ್ಲಿ ಪೋಷಕರಿಗೆ ಶಾಲೆಯವರು ನಿಗದಿಪಡಿಸಿರುವ ದುಬಾರಿ ಶುಲ್ಕ ಪಾವತಿಸಲು ಕಷ್ಟವಾಗುತ್ತದೆ. ಆದರಿಂದ ಸರ್ಕಾರ ಆರ್‌ಟಿಇ ಅಡಿ ಶಾಲೆಗಳಿಗೆ ನೀಡುತ್ತಿರುವ ಒಬ್ಬ ವಿದ್ಯಾರ್ಥಿಗೆ ವಾರ್ಷಿಕ 10,800 ರೂ. ಶುಲ್ಕವನ್ನು ಶಾಲೆಗಳಿಗೆ ನೀಡಿದಲ್ಲಿ ಸಾವಿರಾರು ಬಡ ಮಕ್ಕಳ ವಿದ್ಯಾಭ್ಯಾಸಕ್ಕೆ ಸಹಕಾರಿಯಾಗಲಿದೆ ಎಂದೂ ಪೋಷಕರು ಅಭಿಪ್ರಾಯಪಟ್ಟಿದ್ದಾರೆ.

ಈ ಕುರಿತು ಕೆಲವರು ಶಾಸಕರಾದ ಜಿ.ಟಿ. ದೇವೇಗೌಡ ಮತ್ತು ಟಿ.ಎಸ್. ಶ್ರೀವತ್ಸ ಅವರಿಗೂ ಲಿಖಿತ ರೂಪದಲ್ಲಿ ಮನವಿ ಸಲ್ಲಿಸಿದ್ದು ಮುಂಬರುವ ಚಳಿಗಾಲದ ಅಧಿವೇಶನದಲ್ಲಿ ಈ ಸಂಬಂಧ ಚರ್ಚಿಸುವುದಾಗಿ ಶಾಸಕರು ಭರವಸೆ ನೀಡಿದ್ದಾರೆ.

ರಾಜ್ಯದಲ್ಲಿ 2.43 ಲಕ್ಷ ಅನರ್ಹ ಪಡಿತರ ಚೀಟಿ ರದ್ದು

ನವದೆಹಲಿ, ಡಿ.3– ಉದ್ದೇಶಿತ ಸಾರ್ವಜನಿಕ ವಿತರಣೆ ವ್ಯವಸ್ಥೆಯಲ್ಲಿ ತಂತ್ರಜ್ಞಾನದ ನೆರವಿನಿಂದ ಕರ್ನಾಟಕದಲ್ಲಿ ಕಳೆದ ಐದು ವರ್ಷಗಳಲ್ಲಿ 2.43 ಲಕ್ಷ ಅನರ್ಹ ಪಡಿತರ ಚೀಟಿಗಳನ್ನು ರದ್ದು ಮಾಡಲಾಗಿದೆ.

ಲೋಕಸಭೆಯಲ್ಲಿ ಬುಧವಾರ ಪ್ರಶ್ನೋತ್ತರ ಅವಧಿಯಲ್ಲಿ ಕಲಬುರ್ಗಿ ಸಂಸದ ರಾಧಾಕೃಷ್ಣ ಕೇಳಿದ ಪ್ರಶ್ನೆಗೆ ಗ್ರಾಹಕ ವ್ಯವಹಾರ ಖಾತೆ ರಾಜ್ಯ ಸಚಿವೆ ನಿಮುಬೆನ್ ಜಯಂತಿಬಾಯಿ ಬಂಬಾನಿಯಾ ಈ ಬಗ್ಗೆ ಉತ್ತರ ನೀಡಿದ್ದಾರೆ.

ಪಡಿತರ ಚೀಟಿಗಳ ಡಿಜಿಟಲೀಕರಣ, ಆಧಾರ್ ಜೋಡಣೆ, ಅನರ್ಹ ದಾಖಲೆಗಳು, ಸಾವು, ಫಲಾನುಭವಿಗಳ ಶಾಶ್ವತ ವಲಸೆ ಮತ್ತಿತರ ಕಾರಣಗಳಿಂದ ದೇಶದಲ್ಲಿ ಈ ಅವಧಿಯಲ್ಲಿ 2.25 ಕೋಟಿ ಪಡಿತರ ಚೀಟಿಗಳನ್ನು ರದ್ದುಗೊಳಿಸಲಾಗಿದೆ ಎಂದರು.

ಚಾಮುಂಡಿಬೆಟ್ಟ ಪರಿಸರ-ಪರಂಪರೆ ಸಂರಕ್ಷಣೆ ಆಗಲೇಬೇಕು!

ಖಾಸಗಿ ವಾಹನ ನಿರ್ಬಂಧಿಸಿ; ವಾಣಿಜ್ಯ ಕೇಂದ್ರಿತ ಬೆಳವಣಿಗೆಗೆ ಕಡಿವಾಣ ಹಾಕಿ; ಹೊಸ ಕಟ್ಟಡ ನಿರ್ಮಾಣಕ್ಕೆ ಅವಕಾಶ ಕಲ್ಪಿಸಬೇಡಿ

● ವಿವಿಧ ಸಂಘಟನೆಗಳ ಮುಖಂಡರ ಒಕ್ಕೊರಲ ಅಭಿಮತ ● ಈ ನಿಟ್ಟಿನಲ್ಲಿ ಪರಿಣಾಮಕಾರಿ ಚಳವಳಿ ರೂಪಿಸಲು ಸಿದ್ಧತೆ

ಮೈಸೂರು,ಡಿ.3(ಪಿಎಂ)–ಚಾಮುಂಡಿಬೆಟ್ಟದ ಪರಿಸರ ಹಾಗೂ ಪರಂಪರೆ ಸಂರಕ್ಷಿಸುವ ನಿಟ್ಟಿನಲ್ಲಿ ಬೆಟ್ಟಕ್ಕೆ ಖಾಸಗಿ ವಾಹನ ಸಂಚಾರಕ್ಕೆ ನಿರ್ಬಂಧ ವಿಧಿಸಬೇಕು. ವಾಣಿಜ್ಯ ಕೇಂದ್ರಿತವಾಗಿ ಬೆಳೆಯುವುದಕ್ಕೆ ತಡೆಯೊಡ್ಡಬೇಕು. ಪ್ಲಾಸ್ಟಿಕ್ ಅನ್ನು ಸಂಪೂರ್ಣವಾಗಿ ಮುಕ್ತಗೊಳಿಸಬೇಕು. ಇನ್ನಾವುದೇ ಹೊಸ ಕಟ್ಟಡಗಳು ತಲೆಯೆತ್ತಲು ಅವಕಾಶ ನೀಡಬಾರದು ಎಂಬಿತ್ಯಾದಿ ಅಭಿಪ್ರಾಯಗಳು ವ್ಯಕ್ತವಾದವು.



ಮೈಸೂರಿನ ಯಾದವಗಿರಿಯ ಚಲುವಾಂಬ ಪಾರ್ಕ್‌ನಲ್ಲಿ ಬುಧವಾರ ನಡೆದ ಚರ್ಚೆಯಲ್ಲಿ ಪಾಲ್ಗೊಂಡಿರುವ ವಿವಿಧ ಸಂಘಟನೆಗಳ ಮುಖಂಡರನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರಿನ ಯಾದವಗಿರಿಯ ಚಲುವಾಂಬ ಪಾರ್ಕ್‌ನಲ್ಲಿ 'ಪರಿಸರಕ್ಕಾಗಿ ನಾವು' ಸಂಘಟನೆ ವತಿಯಿಂದ ಚಾಮುಂಡಿಬೆಟ್ಟದ ಪರಿಸರ ಸಂರಕ್ಷಣೆ ಹಾಗೂ ಬೆಟ್ಟದಲ್ಲಿ ಅತಿಯಾದ ವ್ಯಾಪಾರೀಕರಣದಿಂದ ಉಂಟಾಗುವ ದುಷ್ಪರಿಣಾಮ ತಡೆಗಟ್ಟುವ ಕುರಿತು ಬುಧವಾರ ಹಮ್ಮಿಕೊಂಡಿದ್ದ ಚರ್ಚಾ ಕಾರ್ಯಕ್ರಮದಲ್ಲಿ ಪರಿಸರ ಪ್ರೇಮಿಗಳು, ವಿವಿಧ ಸಂಘಟನೆ ಮುಖಂಡರು ಹೀಗೆ ತಮ್ಮ ಅಭಿಪ್ರಾಯಗಳನ್ನು ಮಂಡಿಸಿದರು. ಅಲ್ಲದೆ, ಈ ಸಂಬಂಧ ಜನಾಂದೋಲನ ತೀವ್ರ ರೀತಿಯಲ್ಲಿ ನಡೆಸಬೇಕು. ಯುವಪೀಳಿಗೆಯನ್ನು ಈ ಚಳವಳಿಯ ಭಾಗವಾಗಿಸಲು ಆದ್ಯತೆ ನೀಡಬೇಕೆಂಬ ಅಭಿಪ್ರಾಯಗಳು ಕೇಳಿಬಂದವು.

ಇತಿಹಾಸ ತಜ್ಞ ಪ್ರೊ.ಎನ್.ಎಸ್.ರಂಗರಾಜು ಮಾತನಾಡಿ, ಚಾಮುಂಡಿಬೆಟ್ಟ ಸ್ವಾಭಾವಿಕ, ಸಾಂಸ್ಕೃತಿಕ ಹಾಗೂ ಜೀವಂತಿಕೆಯ ಪಾರಂಪರಿಕ ಪ್ರದೇಶ. ಇಂತಹ ಬೆಟ್ಟವನ್ನು ಹೇಗೆಂದರೆ ಹಾಗೆ ಬೆಳೆಯಲು ಈಗಾಗಲೇ ಬಿಡಲಾಗಿದೆ. ಇದಕ್ಕೆ ತಡೆಯೊಡ್ಡುವ ಅಗತ್ಯವಿದೆ. ಅಂಗಡಿ ಮುಂಗಟ್ಟುಗಳು ನಾಯಿಕೊಡೆಗಳಂತೆ ತಲೆ ಎತ್ತುವಂತಾಗಿದೆ ಯಾವುದೇ ಪರವಾನಗಿ ಇಲ್ಲದೆ ಪೆಟ್ಟಿಗೆ ಇಟ್ಟುಕೊಂಡು ಯಾರು ಬೇಕಾದರೂ ವ್ಯಾಪಾರ ಮಾಡುವಂತೆ ಆಗಿದೆ. ಆ ಮೂಲಕ ತ್ಯಾಜ್ಯವನ್ನು ಬೇಕೆಂದ ಹಾಗೆ ಬಿಸಾಡುವ ಪರಿಪಾಠ ಬೆಳೆಯುವಂತಾಗಿದೆ. ಇದನ್ನು ನಿಯಂತ್ರಿಸಬೇಕಿರುವುದು ಪರಂಪರೆ ಇಲಾಖೆ ಹಾಗೂ ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದವರ ಜವಾಬ್ದಾರಿ. ಆದರೆ ಅವರು ಇದನ್ನು ಮಾಡುತ್ತಿಲ್ಲ ಎಂದು ದೂರಿದರು.

ಮೊದಲು ಚಾಮುಂಡಿಬೆಟ್ಟದ ರಸ್ತೆಗಳಲ್ಲಿರುವ ಅಂಗಡಿ ಮುಂಗಟ್ಟುಗಳನ್ನು ತೆರವುಗೊಳಿಸಿ ಬೆಟ್ಟದಲ್ಲಿರುವ ಹಳೆಯ ಬಸ್ ನಿಲ್ದಾಣಕ್ಕೆ ಸ್ಥಳಾಂತರಿಸಬೇಕು. ದೇವಸ್ಥಾನದ ಸಮೀಪದಲ್ಲಿ ವಹಿವಾಟಿಗೆ ಅವಕಾಶ ನೀಡಬಾರದು. ಈ ಕಟ್ಟುನಿಟ್ಟಿನ ಕ್ರಮವಾದರೆ ಅಂಗಡಿ ಮುಂಗಟ್ಟುಗಳನ್ನು ನಿಯಂತ್ರಿಸಬಹುದು. ಚಾಮುಂಡಿ ಬೆಟ್ಟದ ಸುತ್ತಲು ಕಟ್ಟಡಗಳು ತಲೆ ಎತ್ತುತ್ತಲೇ ಇವೆ. ಇದನ್ನು ನಿಯಂತ್ರಿಸದೇ ಪ್ರಾಧಿಕಾರ ಏನು ಮಾಡುತ್ತಿದೆ. ಈ ಪ್ರಾಧಿಕಾರದಲ್ಲಿ ಪರಂಪರೆ ಇಲಾಖೆಯವರು, ನಾಗರಿಕರು, ಎನ್‌ಜಿಓ ಪದಾಧಿಕಾರಿಗಳು ಒಳಗೊಂಡಂತೆ ಸಮಿತಿ ರಚಿಸಬೇಕಾಗಿದೆ. ಆದರೆ ಈವರೆಗೆ ಸಮಿತಿಯನ್ನೇ ಮಾಡಿಲ್ಲ ಎಂದರು.

ಇಂದು ಬೆಟ್ಟದಲ್ಲಿ ಭಕ್ತಾದಿಗಳಲ್ಲಿ ಬಹುತೇಕರು ಸ್ವಚ್ಛತೆ ಕಾಪಾಡುವುದಕ್ಕೆ ಗಮನ ನೀಡುತ್ತಿಲ್ಲ. ಬೆಟ್ಟದ ಮೆಟ್ಟಿಲುಗಳಿಗೆ ಅತಿಯಾಗಿ ಕುಂಕುಮ ಲೇಪನ ಮಾಡುತ್ತಿದ್ದು, ರಾಸಾಯನಿಕವಾದ ಇದು ಮಳೆ ಬಂದಾಗ ಕೆಂಪು ನದಿಯಂತೆ ಹರಿಯುತ್ತದೆ. ಇದರ ಬಗ್ಗೆ ಅರಿವು ಮೂಡಿಸಬೇಕಿದೆ. ಬೆಟ್ಟದ ಪರಿಸರ ಸಂರಕ್ಷಣೆ ಕುರಿತಂತೆ ಯುವಪೀಳಿಗೆಯಲ್ಲಿ ಅರಿವು ಅಗತ್ಯವಾಗಿದೆ. ಬೆಟ್ಟವನ್ನು ನೈಸರ್ಗಿಕ ಪಾರಂಪರಿಕ ತಾಣವಾಗಿ ಸಂರಕ್ಷಿಸಬೇಕು. ಅದನ್ನು ವಾಣಿಜ್ಯ ಕೇಂದ್ರಿತ ಪ್ರವಾಸೋದ್ಯಮವಾಗಿ ಬೆಳೆಯಲು ಅವಕಾಶ ನೀಡಬಾರದು ಎಂದು ಹೇಳಿದರು.

> ಚಾಮುಂಡಿಬೆಟ್ಟದ ಪರಿಸರ ಹಾಗೂ ಪರಂಪರೆ ಸಂರಕ್ಷಿಸುವ ನಿಟ್ಟಿನಲ್ಲಿ ಅಲ್ಲಿಗೆ ಖಾಸಗಿ ವಾಹನಗಳ ಪ್ರವೇಶ ನಿರ್ಬಂಧಿಸಬೇಕು. ಮುಖ್ಯಮಂತ್ರಿಗಳು ಬೆಟ್ಟಕ್ಕೆ ಭೇಟಿ ನೀಡಿದರೂ ಅವರು ನಗರ ಸಾರಿಗೆ ಬಸ್‌ನಲ್ಲಿ ಹೋಗುವಂತೆ ಆಗಬೇಕು. ಬೆಟ್ಟದಲ್ಲಿನ ಅಂಗಡಿ ಮುಂಗಟ್ಟುಗಳಲ್ಲಿ ಯಾವುದೇ ಸಾಮಗ್ರಿ ಖರೀದಿಸದಂತೆ ಜನಾಂದೋಲನ ರೂಪಿಸಬೇಕು. ಆಗ ಮಳಿಗೆಗಳು ತಂತಾನೆಯ ಮುಚ್ಚುವಂತಾಗುತ್ತದೆ. ಈ ರೀತಿಯ ಚಳವಳಿಯಿಂದ ಬೆಟ್ಟದ ಪರಿಸರ ಸಂಕ್ಷರಣೆಯಾಗಲಿದೆ. ಪ್ರಸಾದ್ ಯೋಜನೆಯಡಿ ಯಾವುದೇ ಹೊಸ ನಿರ್ಮಾಣದ ಅಗತ್ಯವಿಲ್ಲ. ಆ ಹಣವನ್ನು ಬೆಟ್ಟದ ಪರಿಸರ ಸಂರಕ್ಷಣೆಗೆ ಬಳಸಬೇಕು.
> -ಭಾಮಿ ವಿ.ಶೆಣೈ, ಎಂಜಿಪಿ ಸಂಸ್ಥಾಪಕ ಅಧ್ಯಕ್ಷರು.

ನಿವೃತ್ತ ಪ್ರಾಧ್ಯಾಪಕ ಪ್ರೊ.ಕಾಳಚನ್ನೇಗೌಡ ಮಾತನಾಡಿ, ಸಾಕಷ್ಟು ಹೋರಾಟದ ಹಿನ್ನೆಲೆಯಲ್ಲಿ ಬೆಟ್ಟಕ್ಕೆ ಪ್ರಾಧಿಕಾರ ರಚನೆಯಾಯಿತು. ಆದರೆ ಅದರಿಂದ ಸರಿಯಾದ ಚಟುವಟಿಕೆಗಳು ಆಗುತ್ತಿಲ್ಲ. ಬೆಟ್ಟದ ಪರಿಸರ ಸಂರಕ್ಷಣೆ ವಿಚಾರದಲ್ಲಿ ಸರ್ಕಾರ ಬದ್ಧತೆಯಿಂದ ನಡೆದುಕೊಳ್ಳುತ್ತಿಲ್ಲ. ಹಾಗಾಗಿ ಜನಾಂದೋಲನದ ಮೂಲಕ ಬೆಟ್ಟದ ಪರಿಸರ ಸಂರಕ್ಷಿಸಬೇಕಿದೆ ಎಂದರು.

ಪರಿಸರ ಬಳಗದ ನೀಲ ಶಿವಕುಮಾರ್ ಮಾತನಾಡಿ, ಗೋಪಾಲಸ್ವಾಮಿ ಬೆಟ್ಟದ ಮಾದರಿಯಲ್ಲಿ ನಗರ ಸಾರಿಗೆ ಬಸ್‌ಗಳಿಗೆ ಮಾತ್ರವೇ ಬೆಟ್ಟದಲ್ಲಿ ಸಂಚರಿಸಲು ಅವಕಾಶ ನೀಡುವಂತಾಗಬೇಕು. ಆಗ ಪರಿಸರ ಸಂರಕ್ಷಣೆಯಾಗುವ ಜೊತೆಗೆ ಅತಿಯಾದ ವಾಣಿಜ್ಯೀಕರಣಕ್ಕೂ ತಡೆಯಾಗುತ್ತದೆ ಎಂದರು.

ಪರಿಸರಕ್ಕಾಗಿ ನಾವು ಸಂಘಟನೆ ಕಾರ್ಯದರ್ಶಿ ರವಿ ಬಳೆ ಮಾತನಾಡಿ, ಚಾಮುಂಡಿಬೆಟ್ಟಕ್ಕೆ ಪ್ರಥಮವಾಗಿ ಹಾನಿಕಾರಕ ಚಟುವಟಿಕೆ ಎಂದರೆ ವ್ಯಾಪಾರೀಕರಣ. ಇದನ್ನು ನಿಯಂತ್ರಿಸಿ ಪರಿಸರ ಸಂರಕ್ಷಣೆಗಾಗಿ ಜನಸಾಮಾನ್ಯರಿಗೆ ಜಾಗೃತಿ ಮೂಡಿಸಬೇಕು. ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳಿಗೆ ಮನವಿ ಸಲ್ಲಿಸಬೇಕು. ಈ ನಿಟ್ಟಿನಲ್ಲಿ ಹೋರಾಟ ಮುನ್ನಡೆಯಬೇಕಿದ್ದು, ಇದಕ್ಕೆ ಹೆಚ್ಚಿನ ಜನ ಬೆಂಬಲ ಅಗತ್ಯವಾಗಿದೆ ಎಂದು ಹೇಳಿದರು. ಮೈಸೂರು ನಗರದಲ್ಲಿ ನಿರ್ಮಿಸಲು ಉದ್ದೇಶಿಸಿರುವ ಫ್ಲೈಓವರ್ ಮೈಸೂರಿನ ಪಾರಂಪರಿಕತೆಗೆ ಹಾನಿ ಉಂಟು ಮಾಡಲಿದೆ. ಈ ಉದ್ದೇಶಿತ ಫ್ಲೈಓವರ್ ಕಾರ್ಯರೂಪಕ್ಕೆ ಬಂದರೆ ಆಗುವ ಅನಾಹುತದ ಬಗ್ಗೆ ಮುಂದಿನ ವಾರ ಚರ್ಚೆ ಏರ್ಪಡಿಸಲಾಗುವುದು ಎಂದು ತಿಳಿಸಿದರು.

ನಿವೃತ್ತ ಮೇಜರ್ ಜನರಲ್ ಎಸ್.ಜಿ.ಒಂಬತ್ಕೆರೆ, ಎಂಜಿಪಿ (ಮೈಸೂರು ಗ್ರಾಹಕರ ಪರಿಷತ್) ಸಂಸ್ಥಾಪಕ ಅಧ್ಯಕ್ಷ ಭಾಮಿ ವಿ.ಶೆಣೈ, ಆಮ್ ಆದ್ಮಿ ಪಕ್ಷದ ಮಾಲವಿಕ ಗುಬ್ಬಿವಾಣಿ, ವಿವಿಧ ಸಂಘಟನೆಗಳ ಮುಖಂಡರಾದ ಗಂಟಯ್ಯ (ಕೃಷ್ಣಪ್ಪ), ಪ್ರಭಾ ನಂದೀಶ್, ಗೀತಾ ವೇಲುಮಣಿ, ಶೈಲಜೇಶ್, ಸಿಂಧುವಳ್ಳಿ ಅಕ್ಬರ್, ಸಾಗರ್, ಮೋಹನ ಕುಮಾರಿ ಸೇರಿದಂತೆ 50ಕ್ಕೂ ಹೆಚ್ಚು ಮಂದಿ ಚರ್ಚೆಯಲ್ಲಿ ಪಾಲ್ಗೊಂಡಿದ್ದರು.

ನಕ್ಕರೆ ಅದೇ ಸ್ವರ್ಗ

ಅಪ್ಪ : ಲೋ... ಮಗನೇ ಯಾರಿಗೂ ಹೆದರಬೇಡ. ನೀನು ಸಿಂಹದ ಮರಿ ಕಣೋ...

ಮಗ : ಹೌದಪ್ಪಾ, ಟೀಚರ್ ಹಾಗೆ ಹೇಳ್ತಾರೆ. ನೀನು ಯಾವುದೋ ಪ್ರಾಣಿಗೆ ಹುಟ್ಟಿರಬೇಕು ಅಂತ.!!

ಮೈಸೂರು ಮಿತ್ರ

ಗುರುವಾರ, 4 ಡಿಸೆಂಬರ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ.........

ಎಷ್ಟೇ ಕಷ್ಟವಿದ್ದರೂ ಹೊತ್ತು ಸಾಗಬೇಕು. ಇನ್ನೊಬ್ಬರಿಗೆ ಹೇಳಿಕೊಳ್ಳಲು ಆಗಲ್ಲ. ಹಂಚಿಕೊಳ್ಳಲು ಆಗಲ್ಲ. ಬಂದಿದ್ದು ಅನುಭವಿಸಲೇಬೇಕು.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಹನುಮಂತಾನೆ ಬಾಲ ಕಡಿತಿರುವಾಗ, ಇವನ್ಯಾವನೋ ಶಾವಿಗೆ ಕೇಳಿದನಂತೆ.

ನಿಮ್ಮ ಪತ್ರಗಳು

ಅಂತೂ ಇಂತೂ ಕದನ ವಿರಾಮ !

ಮಾನ್ಯರೆ,

ರಾಜ್ಯ ಆಡಳಿತಾರೂಢ ಕಾಂಗ್ರೆಸ್ ಪಕ್ಷದಲ್ಲಿ ಕುರ್ಚಿ ಕಿತ್ತಾಟಕ್ಕೆ ತಾತ್ಕಾಲಿಕ ತೆರೆ ಎಳೆಯಲಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಒಟ್ಟಿಗೆ ಪತ್ರಿಕಾ ಗೋಷ್ಠಿಯಲ್ಲಿ ಭಾಗಿಯಾಗಿ ಒಗ್ಗಟ್ಟು ಪ್ರದರ್ಶಿಸಿದ್ದಾರೆ. ನಿಮ್ಮ ಸಮಸ್ಯೆಯನ್ನು ನೀವೇ ಬಗೆಹರಿಸಿಕೊಳ್ಳಿ ಎಂದು ಪಕ್ಷದ ವಪ್ರಬಲ ನಾಯಕರು ಒಟ್ಟಿಗೆ ಕೂತು ರುಚಿರುಚಿಯಾದ ಉಪಹಾರ ಸೇವಿಸುತ್ತಾ ಒಗ್ಗಟ್ಟು ಪ್ರದರ್ಶಿಸಿದ್ದಾರೆ. ಈ ರೀತಿಯ ರಾಜಕೀಯ ಗೊಂದಲ, ಕುರ್ಚಿಗಾಗಿ ಜಟಾಪಟಿ ಮುಂತಾದವು ಬಹುತೇಕ ರಾಜಕೀಯ ಪಕ್ಷಗಳನ್ನು ಕಾಡುವ ಸಾಮಾನ್ಯ ರೋಗವಾಗಿದೆ. ಈ ಹಿಂದೆ ರಾಜ್ಯದಲ್ಲಿ ಮುಖ್ಯಮಂತ್ರಿಯಾಗಿದ್ದ ಬಿ.ಎಸ್.ಯಡಿಯೂರಪ್ಪ ಅವರನ್ನು ದಯನೀಯ ರೀತಿಯಲ್ಲಿ ಪದಚ್ಯುತಗೊಳಿಸಿ ಬಸವರಾಜ ಬೊಮ್ಮಾಯಿ ಅವರಿಗೆ ಪಟ್ಟಾಭಿಷೇಕ ಮಾಡಿದ್ದನ್ನು ಬಿಜೆಪಿಯ ರಾಜ್ಯ ನಾಯಕರು ಮರೆತಿರಲಾರರು ಎಂದು ಭಾವಿಸುತ್ತೇನೆ.

ಅಂತೂ ಇಂತೂ ಕದನ ವಿರಾಮ ಘೋಷಣೆಯಾಗಿದೆ. ಇನ್ನೇನು ಕೆಲವೇ ದಿನಗಳಲ್ಲಿ ಬೆಳಗಾವಿಯಲ್ಲಿ ರಾಜ್ಯ ವಿಧಾನ ಮಂಡಲದ ಚಳಿಗಾಲದ ಅಧಿವೇಶನ ಪ್ರಾರಂಭವಾಗಲಿದೆ. ಆಡಳಿತಾರೂಢ ಪಕ್ಷವನ್ನು ಕುಟುಕಲು ಬಿಜೆಪಿ ಹಾಗೂ ಜೆಡಿಎಸ್ ಪಕ್ಷಗಳಿಗೆ ಸಾಕಷ್ಟು ವಿಷಯಗಳಿವೆ. ಆ ಪಕ್ಷಗಳು ಈಗ ಅದರತ್ತ ಗಮನ ಹರಿಸುವುದು ಒಳ್ಳೆಯದು. ಕಾಂಗ್ರೆಸ್ ಪಕ್ಷ ಕೂಡ ಅಂತರಿಕ ಕಚ್ಚಾಟದಿಂದ ಹೊರ ಬಂದು ಜನರು ಎದುರಿಸುತ್ತಿರುವ ಜ್ವಲಂತ ಸಮಸ್ಯೆಗಳಿಗೆ ವಿಧಾನಸಭೆಯ ಅಧಿವೇಶನದಲ್ಲಿ ಚರ್ಚಿಸಿ ಪರಿಹಾರ ಕಂಡು ಕೊಳ್ಳುವುದು ಒಳ್ಳೆಯದು.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು

ಸಂತೇಶಿವರ ಏತ ನೀರಾವರಿಗೆ ಭೈರಪ್ಪ ಹೆಸರು

ಮಾನ್ಯರೆ,

ಚನ್ನರಾಯಪಟ್ಟಣ ತಾಲೂಕಿನ ನುಗ್ಗೇಹಳ್ಳಿ ಹೋಬಳಿಯ ಸಂತೇಶಿವರ ಏತ ನೀರಾವರಿ ಯೋಜನೆ ರೂವಾರಿಯಾದ ಸಾಹಿತಿ ದಿವಂಗತ ಎಸ್.ಎಲ್. ಭೈರಪ್ಪ ಅವರ ಹೆಸರನ್ನು ಯೋಜನೆಗೆ ಇಡುವಂತೆ ಕಾವೇರಿ ನೀರಾವರಿ ನಿಗಮಕ್ಕೆ ಮನವಿ ಮಾಡಿರುವ ಶಾಸಕ ಸಿ.ಎನ್.ಬಾಲಕೃಷ್ಣ ಅವರ ನಡೆ ಶ್ಲಾಘನೀಯ. ಭೈರಪ್ಪನವರು ಹುಟ್ಟೂರಿಗೆ ಏನಾದರೂ ಮಾಡಬೇಕೆಂಬ ಇಚ್ಛೆಯಿಂದ ರೈತರಿಗೆ ಶಾಶ್ವತವಾದ ನೀರಾವರಿ ಯೋಜನೆ ರೂಪಿಸಲು ಬೊಮ್ಮಾಯಿ ಅವರ ಸರ್ಕಾರದ ಅವಧಿಯಲ್ಲಿ 25 ಕೋಟಿ ಅನುದಾನ ಬಿಡುಗಡೆ ಮಾಡಿಸುವ ಮೂಲಕ ಅನುದಾನ ತಂದಿದ್ದರಿಂದ ಇಂದು ಸಂತೇಶಿವರ ಗ್ರಾಮದ ದೊಡ್ಡಕೆರೆ ಹಾಗೂ ಬೆಳಗುಲಿ ಗ್ರಾಮದ ಕೆರೆ ತುಂಬಿತುಳುಕಿವೆ. ಇದರಿಂದ ಭೈರಪ್ಪನವರ ಕನಸು ನನಸಾಗಿದೆ. ಸಂತೇಶಿವರದಲ್ಲಿ ಭೈರಪ್ಪ ಅವರ ಹೆಸರಿನಲ್ಲಿ ಸಂಸ್ಕೃತಿ ಭವನ ನಿರ್ಮಾಣ ಮಾಡಲು ಇಂದಿನ ಸಿದ್ದರಾಮಯ್ಯ ಅವರ ಸರ್ಕಾರ 5 ಕೋಟಿ ಅನುದಾನ ಘೋಷಿಸಿದ್ದು, ಅದಷ್ಟು ಬೇಗ ಬಿಡುಗಡೆ ಮಾಡಿ, ಭೈರಪ್ಪ ಅವರ ಸಾಹಿತ್ಯವನ್ನು ಶಾಶ್ವತವಾಗಿ ನೆನೆಯುವಂತೆ ಮಾಡುವುದು ಅತ್ಯಗತ್ಯ.

–ಬೆಸಗರಹಳ್ಳಿ ರವಿಪ್ರಸಾದ್, ಮೈಸೂರು.

ಡಿಜಿಟಲ್ ಸ್ಟಾಂಪ್ ಪೇಪರ್ ಸ್ವಾಗತಾರ್ಹ

ಮಾನ್ಯರೆ,

ಇತ್ತೀಚೆಗೆ ರಾಜ್ಯ ಸರ್ಕಾರ ಪರಿಚಯಿಸಿದ ಡಿಜಿಟಲ್ ಸ್ಟ್ಯಾಂಪ್ ಪೇಪರ್ ಕ್ರಮವು ಭ್ರಷ್ಟಾಚಾರ ನಿಯಂತ್ರಣಕ್ಕೆ ಮಹತ್ವದ ಹೆಜ್ಜೆಯಾಗಿದೆ. ಪ್ರತಿ ವರ್ಷ ಸಾವಿರಾರು ಆಸ್ತಿ ವ್ಯವಹಾರಗಳಲ್ಲಿ ಸ್ಟ್ಯಾಂಪ್ ಪೇಪರ್ ಬಳಕೆಯಾಗುವುದರ ಮಧ್ಯೆ, ಹಿಂದಿನ ವರ್ಷಗಳಲ್ಲಿ ನಕಲಿ ಸ್ಟ್ಯಾಂಪ್ ಪ್ರಕರಣಗಳಿಂದ ಸರ್ಕಾರಕ್ಕೆ ಗಣನೀಯ ಆದಾಯ ನಷ್ಟವಾಗಿತ್ತು ಎಂಬುದು ದಾಖಲೆ. ಈ ಹಿನ್ನೆಲೆಯಲ್ಲಿ ಆನ್‌ಲೈನ್ ಮೂಲಕ ಸ್ಟ್ಯಾಂಪ್ ಪಡೆಯುವ ವ್ಯವಸ್ಥೆ ಜನರಿಗೆ ವೇಗ, ಪಾರದರ್ಶಕತೆ ಮತ್ತು ಸುರಕ್ಷತೆ ಒದಗಿಸುತ್ತದೆ. ಆದರೆ, ಇನ್ನೂ ಪರಿಣಾಮಕಾರಿಯಾಗಿಸಲು ಕೆಲವು ಕ್ರಮಗಳು ಅಗತ್ಯ. ಗ್ರಾಮೀಣ ಪ್ರದೇಶಗಳಲ್ಲಿ ಡಿಜಿಟಲ್ ಸಹಾಯ ಕೇಂದ್ರಗಳನ್ನು ತೆರೆಯುವುದು, ಹಿರಿಯ ನಾಗರಿಕರಿಗೆ ಮಾರ್ಗದರ್ಶನ ನೀಡುವುದು, ಪೋರ್ಟಲ್‌ಗೆ ಕನ್ನಡ ಭಾಷೆ ಬೆಂಬಲವನ್ನು ಬಲಪಡಿಸುವುದು, ಮತ್ತು ಸೈಬರ್ ಭದ್ರತಾ ವ್ಯವಸ್ಥೆಯನ್ನು ಮತ್ತಷ್ಟು ದೃಢಗೊಳಿಸುವುದು. ಈ ಸುಧಾರಣೆ ಸರಿಯಾಗಿ ಜಾರಿಯಾದರೆ, ಕರ್ನಾಟಕ ದೇಶದ ಇತರ ರಾಜ್ಯಗಳಿಗೆ ಮಾದರಿಯಾಗಬಹುದು.

–ಡಾ.ಎಚ್.ಕೆ.ವಿಜಯಕುಮಾರ, ಮೈಸೂರು.

ಆಸ್ತಿ ರಕ್ಷಣೆಗೆ ಪೊಲೀಸ್ ಭದ್ರತಾ ಪಡೆ ರಚನೆ ಸ್ವಾಗತಾರ್ಹ

ಮಾನ್ಯರೆ,

ಮೈಸೂರು ಅಭಿವೃದ್ಧಿ ಪ್ರಾಧಿಕಾರದ ಆಸ್ತಿ ರಕ್ಷಣೆಗೆ ಪ್ರತ್ಯೇಕ ಪೊಲೀಸ್ ಭದ್ರತಾ ಪಡೆ ರಚಿಸಿರುವುದು ಸ್ವಾಗತಾರ್ಹ. ಇತ್ತೀಚೆಗೆ ನಕಲಿ ದಾಖಲೆಗಳನ್ನು ಸೃಷ್ಟಿಸಿ ಮೈಸೂರು ಅಭಿವೃದ್ಧಿ ಪ್ರಾಧಿಕಾರದ ಆಸ್ತಿಯ ಅತಿಕ್ರಮ ಪ್ರವೇಶ ಕಟ್ಟಡಗಳ ನಿರ್ಮಾಣ ಒತ್ತುವರಿ ಮಾಡಿಕೊಂಡಿರುವ ವಿಷಯಗಳು ಹಾಗೂ ತಮಗೆ ಅರಿವಿಲ್ಲದೆ ತಮ್ಮ ಆಸ್ತಿ ಬೇರೆಯವರ ಹೆಸರಿಗೆ ವರ್ಗಾವಣೆಯಾಗಿ ಕೋರ್ಟ್ ಮೆಟ್ಟಿಲೇರುವುದನ್ನು ಮಾಧ್ಯಮಗಳ ಮೂಲಕ ಆಗಾಗ ನೋಡಿದ್ದೇವೆ. ಇದನ್ನೆಲ್ಲಾ ಮನಗಂಡ ಎಂಡಿಎ ಆಯುಕ್ತರು ಹಾಗೂ ಜಿಲ್ಲಾಧಿಕಾರಿಗಳು ಚರ್ಚಿಸಿ ಒತ್ತುವರಿ ತೆರವು ಕಾರ್ಯಾಚರಣೆಯ ಭದ್ರತೆಗೆ ಪ್ರತ್ಯೇಕ ಪೊಲೀಸ್ ಭದ್ರತೆ ಪಡೆ ರಚಿಸಿರುವುದು ಸ್ವಾಗತಾರ್ಹ.

–ಪಿ.ಸಿ.ಕಂಗಾಣಿ ಸೋಮು, ಕ್ಯಾತಮಾರನಹಳ್ಳಿ, ಮೈಸೂರು

ಹುಲಿಗಳಿಗೆ ರೇಡಿಯೋ ಕಾಲರ್ ಅಳವಡಿಸಿ

ಮಾನ್ಯರೆ,

ಕಳೆದ ಎರಡು ತಿಂಗಳಿಂದೀಚೆಗೆ ಮೈಸೂರು ಜಿಲ್ಲೆಯ ಸರಗೂರು, ಹೆಚ್.ಡಿ. ಕೋಟೆ, ಹುಣಸೂರು ತಾಲೂಕು ಹಾಗೂ ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ತಾಲೂಕುಗಳಲ್ಲಿ ಹುಲಿ ಕಾಣಿಸಿಕೊಳ್ಳುತ್ತಿದೆ. ಜೊತೆಗೆ ದಾಳಿ ಪ್ರಕರಣಗಳು ಹೆಚ್ಚು ವರದಿಯಾಗುತ್ತಿವೆ. ಇದರಿಂದ ರೈತರು ಹೊಲ ಗದ್ದೆಗಳಲ್ಲಿ ಕೆಲಸ ನಿರ್ವಹಿಸುವುದೇ ಕಷ್ಟವಾಗಿದೆ.

ಅರಣ್ಯ ಇಲಾಖೆಯವರು ಇಂತಹ ಹುಲಿಗಳನ್ನು ಸೆರೆ ಹಿಡಿದು ಮೈಸೂರಿನ ಕೂರ್ಗಳ್ಳಿಯ ಪುನರ್ವಸತಿ ಕೇಂದ್ರಕ್ಕೆ ಬಿಡುತ್ತಿದ್ದಾರೆ. ಈಗಾಗಲೇ ಇಂತಹ 13–15 ಹುಲಿಗಳನ್ನು ಬಿಟ್ಟಿದ್ದಾರೆ. ಕೆಲ ದಿನಗಳ ನಂತರ ಇಂತಹ ಹುಲಿಗಳನ್ನು ಮತ್ತೆ ಕಾಡಿಗೆ ಬಿಡಲಾಗುವುದು ಎಂದು ಅರಣ್ಯಾಧಿಕಾರಿಗಳು ಹೇಳಿದ್ದಾರೆ. ಆದರೆ ಮರಳಿ ಕಾಡಿಗೆ ಬಿಟ್ಟ ಹುಲಿಗಳು ಮತ್ತೆ ಜನವಸತಿ ಪ್ರದೇಶಕ್ಕೆ ಬರುವುದಿಲ್ಲ. ಜನರ ಮೇಲೆ ದಾಳಿ ಮಾಡುವುದಿಲ್ಲ ಎನ್ನುವುದಕ್ಕೆ ಗ್ಯಾರಂಟಿ ಏನು? ಬೇರೆ ರಾಜ್ಯಗಳ ಮೃಗಾಲಯಗಳಿಗೆ ಅವಶ್ಯಕತೆ ಇದ್ದರೆ ಅವರಿಗೆ ಇವುಗಳನ್ನು ಪ್ರಾಣಿ ವಿನಿಮಯ ಯೋಜನೆಯಡಿ ನೀಡಲಿ. ಮರಳಿ ಕಾಡಿಗೆ ಬಿಡುವುದಿದ್ದರೆ ಅವುಗಳಿಗೆ ರೇಡಿಯೋ ಕಾಲರ್ ಅಳವಡಿಸಿ ಬಿಡಲಿ. ಆಗ ಅವುಗಳ ಚಲನ–ವಲನಗಳನ್ನು ಸುಲಭವಾಗಿ ತಿಳಿದು ಅವುಗಳ ಇರುವಿಕೆಯನ್ನು ತಿಳಿಯಬಹುದಾಗಿದೆ. ಇದು ರೈತ ಮತ್ತು ಅರಣ್ಯ ಇಲಾಖೆ ಇಬ್ಬರಿಗೂ ಅನುಕೂಲವಾಗುತ್ತದೆ.

–ಮುಳ್ಳೂರು ಪ್ರಕಾಶ್, ಕನಕದಾಸನಗರ, ಮೈಸೂರು.

ವಿಧವಾ ವೇತನಕ್ಕಾಗಿ ಅವ್ವ ಸಾಲ ಮಾಡಿ ಲಂಚಕೊಟ್ಟ ಕಿಚ್ಚೆ ಮಗನ ಐಎಎಸ್ ಸಾಧನೆಗೆ ದಾರಿಯಾಯ್ತು!



ಮಹಾಂತೇಶ ಬೀಳಗಿ

> “ ಆರು ವರ್ಷ ಇದ್ದಾಗಲೇ ತಂದೆ ಕಳೆದುಕೊಂಡು ತಾಯಿ ಆಶ್ರಯದಲ್ಲಿ ಬೆಳೆದ ಮಹಾಂತೇಶ್ ಬೀಳಗಿಯವರು ಕಡುಬಡತನದಲ್ಲೇ ಹುಟ್ಟಿ, ಬಡತನದಲ್ಲೇ ಬೆಳೆದು ಉನ್ನತ ಹುದ್ದೆಗೆ ಏರಿದ ಇವರ ಸಾಧನೆಯ ಕಥೆ ಕೇಳಿದರೆ ಎಂಥವರಿಗೂ ಸಾಧಿಸಬೇಕೆನ್ನುವ ಛಲ ಮೂಡದೆ ಇರದು. ಇವರ ಮಾತುಗಳಲ್ಲಿ ಸಾಕ್ಷಾತ್ ಸ್ವಾಮಿ ವಿವೇಕಾನಂದರ ನುಡಿಗಳಿಗಿರುವ ಶಕ್ತಿ ಇತ್ತು. ಅಲಸ್ಯದಿಂದ ಮಲಗಿರುವ ಯುವಕರನ್ನು ಬಡಿದೆಬ್ಬಿಸುವಂತೆ ಇರುತ್ತಿದ್ದವು. ವಿಧವಾ ವೇತನಕ್ಕಾಗಿ ಅವ್ವ ತಹಸೀಲ್ದಾರ್‌ಗೆ ಸಾಲ ಮಾಡಿ ಕೊಟ್ಟ ಲಂಚ, ಇಂದು ಐಎಎಸ್ ಅಧಿಕಾರಿಯಾಗಲು ಪ್ರೇರೇಪಿಸಿತು.



ಮಿರ್ಲೆ ಚಂದ್ರಶೇಖರ
ಲೇಖಕರು,
ಮೊ:9916129654.

ಎಲ್ಲರನ್ನೂ ಅತ್ಯಂತ ಪ್ರೀತಿಯಿಂದ ಕೈ ಬೀಸಿ ಕರೆಯುವುದು ಅವನೊಬ್ಬನೇ, ಅವನಿಗೆ ಒಳ್ಳೆಯವರು ಕೆಟ್ಟವರು ಎಂಬ ಭೇದವಿಲ್ಲ, ಜಾತಿಧರ್ಮಗಳ ಗೊಡವೆ ಇಲ್ಲ, ಸಮಾನತೆ ಇದೆಯಾದರೂ ಬಹಳಷ್ಟು ಬಾರಿ ಕ್ರೂರವಾಗಿ ವರ್ತಿಸಿಬಿಡುತ್ತಾನೆ, ಅವನು ಪ್ರೀತಿಸುವುದನ್ನು ಯಾರೂ ಇಷ್ಟಪಡುವುದಿಲ್ಲ, ಪ್ರೀತಿಸಿದರೆ ಅವರ ಕಥೆ ಅಲ್ಲಿಗೆ ಮುಗಿದಂತೆ! ಬದುಕಿನಲ್ಲಿ ಒಮ್ಮೆ ಮಾತ್ರ ಸಿಗುವ ಅವನ ಪ್ರೀತಿಯ ಅಪ್ಪುಗೆಯಿಂದ ಯಾರೂ ತಪ್ಪಿಸಿಕೊಳ್ಳಲಾಗದು. ಸೂಕ್ತ ಕಾಲಕ್ಕೆ ಬಂದು ಒಳ್ಳೆಯ ರೀತಿಯಲ್ಲಿ ಕರೆದುಕೊಂಡು ಹೋಗಲಿ ಎಂಬುದೇ ಎಲ್ಲರ ಹೆಬ್ಬಯಕೆ ಆಗಿರುತ್ತದೆ. ನಾವಂದುಕೊಂಡಂತೆ ನಡೆಯಬೇಕಲ್ಲ. ಅವನು ಯಾರಿರಬಹುದೆಂದು ಈಗಾಗಲೇ ನಿಮಗೆ ತಿಳಿದು ಹೋಗಿರುತ್ತದೆ. ಅವನೇ ಎಲ್ಲರನ್ನೂ ಬಿಡದೆ ಕಾಯ್ದು, ಕರೆದೊಯ್ಯುವ ಜವರಾಯ.

ದಕ್ಷ, ಚಾಣಾಕ್ಷ ಹಾಗೂ ಕರುಣಾಮಯಿ ಅಧಿಕಾರಿ ಶ್ರೀ ಮಹಾಂತೇಶ ಬೀಳಗಿ(51)ಯವರನ್ನು ಬದುಕಿನ ಅರ್ಧ ಆಯಸ್ಸು ಮುಗಿಸಿ ಇನ್ನೂ ಅರ್ಧ ಆಯಸ್ಸು ಇರುವಾಗಲೇ ಜವರಾಯನು ಕ್ರೂರವಾಗಿ ಬಲಿ ತೆಗೆದುಕೊಂಡ. ಬೀಳಗಿಯವರು ಕುಟುಂಬವನ್ನು ಬಹಳವೇ ಪ್ರೀತಿಸುತ್ತಿದ್ದರು. ಬಹುಶಃ ಅದನ್ನು ಅರಿತೇ ಇರಬಹುದು ಇವರ ಜೊತೆಗಿರಲೆಂದು ಸಹೋದರ ಸಂಬಂಧಿಗಳಾದ ಶಂಕರ ಬೀಳಗಿ ಮತ್ತು ಈರಣ್ಣ ಬೀಳಗಿಯವರನ್ನೂ ಕರೆದುಕೊಂಡು ಹೋಗಿದ್ದಾನೆ. ಸಾಮಾಜಿಕ ಜಾಲತಾಣಗಳಲ್ಲಿ ಬರುವ ಮಹಾಂತೇಶ ಬೀಳಗಿಯವರ ಸ್ಫೂರ್ತಿದಾಯಕ ಭಾಷಣಗಳು ಹಲವಾರು ಯುವಕರಿಗೆ ಸಾಧನೆ ಮಾಡುವುದಕ್ಕೆ ಪ್ರೇರಣೆ ನೀಡಿವೆ. ಅವರ ಭಾಷಣಗಳನ್ನು ಕೇಳಿದವರಿಗೆ ಭೀಕರ ದುರಂತದ ನೋವನ್ನು ತಡೆಯುವುದು ಕಷ್ಟ. ಅಂತಹ ಆಕರ್ಷಕ ವ್ಯಕ್ತಿತ್ವ ಬೀಳಗಿಯವರದು.

ಆರು ವರ್ಷ ಇದ್ದಾಗಲೇ ತಂದೆಯನ್ನು ಕಳೆದುಕೊಂಡು(1980) ತಾಯಿ ಆಶ್ರಯದಲ್ಲಿ ಬೆಳೆದ ಬೀಳಗಿಯವರು ಕಡುಬಡತನದಲ್ಲೇ ಹುಟ್ಟಿ, ಬಡತನದಲ್ಲೇ ಬೆಳೆದು ಉನ್ನತ ಹುದ್ದೆಗೆ ಏರಿದ ಇವರ ಸಾಧನೆಯ ಕಥೆ ಕೇಳಿದರೆ ಎಂಥವರಿಗೂ ಸಾಧಿಸಬೇಕೆನ್ನುವ ಛಲ ಮೂಡದೆ ಇರದು, ಇವರ ಮಾತುಗಳಲ್ಲಿ ಸಾಕ್ಷಾತ್ ಸ್ವಾಮಿ ವಿವೇಕಾನಂದರ ನುಡಿಗಳಿಗಿರುವ ಶಕ್ತಿ ಇತ್ತು, ಅಲಸ್ಯದಿಂದ ಮಲಗಿರುವ ಯುವಕರನ್ನು ಬಡಿದೆಬ್ಬಿಸುವಂತೆ ಇರುತ್ತಿದ್ದವು.

ಬೀಳಗಿಯವರು ಹುಟ್ಟಿದ್ದು ಬೆಳಗಾವಿ ಜಿಲ್ಲೆಯ ರಾಮದುರ್ಗದಲ್ಲಿ 27, ಮಾರ್ಚ್ 1974ರಂದು ಬಡ ಕುಟುಂಬದಲ್ಲಿ ಹುಟ್ಟಿದ ಇವರಿಗೆ ಒಬ್ಬ ಅಣ್ಣ ಹಾಗೂ ಇಬ್ಬರು ತಂಗಿಯರಿದ್ದರು, ತಾಯಿ ಎಂದರೆ ಇವರಿಗೆ ಎಲ್ಲಿಲ್ಲದ ಪ್ರೀತಿ, ಬಾಯಿತುಂಬ ಅವ್ವ... ಅವ್ವ... ಎಂದು ಕರೆಯುತ್ತಿದ್ದರು. ನಮ್ಮವ್ವ ನಮ್ಮನ್ನು ಸಾಕಲು ತುಂಬಾ ಕಷ್ಟ ಪಟ್ಟವ್ಳೆ, ಆಕೆಯನ್ನು ಚೆನ್ನಾಗಿ ನೋಡಿಕೊಳ್ಳಬೇಕೆನ್ನುವ ತುಮುಲ ಬೆಟ್ಟದಷ್ಟಿತ್ತು. ಅಧಿಕಾರಿ ಆದ ಮೇಲೆ ಹಾಗೆಯೇ ನಡೆದುಕೊಂಡರು. ನಮ್ಮವ್ವನಿಗೆ ಖುಷಿ ಆಗಲೆಂದು ಕಚೇರಿಗೆ ಹೋಗುವಾಗಲೆಲ್ಲ ನಮೂನೆ ಕೋಟುಗಳನ್ನು ಧರಿಸಿಕೊಂಡು ಅವ್ವ ನಾನು ಹೋಗಿ ಬರುತ್ತೇನೆಂದು ಹೇಳಿ, ಅದರಿಂದ ಅವ್ವನ ಮುಖದಲ್ಲಿ ಕಾಣುವ ಖುಷಿಯನ್ನು ಕಂಡು ಆನಂದಿಸುತ್ತಿದ್ದರು.

ಚಿಕ್ಕ ವಯಸ್ಸಿಗೇ ತಂದೆ ಕಳೆದುಕೊಂಡ ಬೀಳಗಿಯವರ ತಾಯಿ ವಿಧವಾ ವೇತನಕ್ಕಾಗಿ ತಹಸೀಲ್ದಾರ್ ಕಚೇರಿಗೆ ಅಲೆದು ಬೇಸತ್ತು, ಲಂಚಕ್ಕಾಗಿ ಕಾಡಿಸಿದ್ದನ್ನು ತಿಳಿದು ಸಾಲ ಮಾಡಿ ಹಣ ಕೊಟ್ಟು ಮಂಜೂರಾತಿ ಪಡೆದ ಘಟನೆ ಇವರ ಮನಸ್ಸಿನಲ್ಲಿ ಬೇರೂರಿ, ಮುಂದೆ ಈ ಕಿಚ್ಚೇ ಸಾಧನೆಯ ಹೆಮ್ಮರವಾಗಲು ಕಾರಣವಾಯಿತು. ಒಮ್ಮೆ ಅವರ ಭಾಷಣದಲ್ಲಿ ಲಂಚ ಪಡೆದ ಆ ತಹಸೀಲ್ದಾರ್ ಯಾರೆಂದು ಕಚೇರಿ ಬೋರ್ಡ್‌ನಲ್ಲಿ ನೋಡುವ ಆಸೆ ವ್ಯಕ್ತಪಡಿಸಿದ್ದರು. ಬಹುಶಃ ವಿಧವೆಯಿಂದ ಹಣ ಪಡೆದ ಆ ಲಂಚ ಕೋರ ಬದುಕುಳಿದಿರುವುದು ಅನುಮಾನ. ಅಕಸ್ಮಾತ್ ಬದುಕಿದ್ದರೆ, ಇವರ ಮಾತನ್ನೊಮ್ಮೆ ಕೇಳಿದ್ದರೆ ನನ್ನ ಕೆಟ್ಟ ನಡವಳಿಕೆಯಿಂದ ಇವ ಸಾಧನೆ ಮಾಡಿದ್ದಾನೆ ಎಂಬ ಗರ್ವ ಪಡುತ್ತಿರಬಹುದು!.

ಬಡತನವನ್ನು ಮೆಟ್ಟಿನಿಂತು ಕೆಂಪುದೀಪ ಇರುವ ಸರ್ಕಾರಿ ಗೂಟದ ಕಾರಿನಲ್ಲಿ ಓಡಾಡಬೇಕೆಂಬ ಛಲವಿದ್ದ ಯುವಕ, ತಮ್ಮ ಬಾಲ್ಯದ ಬಡತನದ ಬಗ್ಗೆ ವಿವರಿಸುವಾಗ ಹೇಳುತ್ತಾರೆ, ಕಷ್ಟದೊಳಗೆ ಜಳಕ ಮಾಡಿ, ಕಷ್ಟದ ಅರಿವೆ ಹಾಕೊಂಡು, ಅದನ್ನೇ ಹಾಸಿಕೊಂಡು, ಅದನ್ನೇ ಹೊದ್ದುಕೊಂಡು ಬೆಳೆದವನು, ನಮ್ಮವ್ವ ನಮ್ಮನ್ನು ನೀರು ಕುಡಿಸಿ ಬೆಳೆಸವಳೆ, ಇವತ್ತಿಗೂ ಆ ಕಷ್ಟವನ್ನು ನೆನೆಸಿಕೊಂಡೇ ನಾನು ನಮ್ಮವ್ವ ಊಟಮಾಡೋದು ಎಂದು ಹೇಳುವಾಗ ಅವರ ಮುಖದಲ್ಲಿ ಕಷ್ಟ ಮತ್ತು ಸುಖ ಎರಡೂ ಸಮ್ಮಿಳಿತವಾಗಿ ತೇಜಸ್ಸಿನ ಭಾವವು ಕಂಡುಬರುತ್ತದೆ. ನಾನು ಎಲ್ಲರನ್ನು ಬದುಕಿಸಿ ಬದುಕಬೇಕಿತ್ತು, ಎಲ್ಲರಿಗೂ ರೊಟ್ಟಿ ತಿನಿಸಿ ನಾನು ತಿನ್ನಬೇಕಿತ್ತು, ಎಲ್ಲರನ್ನು ಸಾಕಿ ಜೀವಂತವಿಟ್ಟು ಏನಾದರೂ ಸಾಧನೆ ಮಾಡಬೇಕಿತ್ತು, ಕಾಲೇಜಿಗೆ ಫೀ ಕಟ್ಟುವುದಕ್ಕೂ ನಮಗೆ ಕಷ್ಟವಿತ್ತು. ಈ ಮಾತುಗಳನ್ನು ಕೇಳುವ ಯುವಕರಿಗೆ ಜೀವನದಲ್ಲಿ ನಾವು ಕೂಡ ಸಾಧನೆ ಮಾಡಬೇಕೆನ್ನುವ ಪ್ರೇರಣೆ ಬರುತ್ತದೆ. ಇವರಿಟ್ಟ ಹೆಜ್ಜೆಗಳನ್ನು ಹಿಂಬಾಲಿಸಿದ ಸಾವಿರಾರು ಮಕ್ಕಳು ಸರಿದಾರಿಗೆ ಬಂದ ಪರಿಣಾಮವಾಗಿ ಉನ್ನತ ಹುದ್ದೆಗಳನ್ನು ಗಿಟ್ಟಿಸಿ ಒಂದೊಳ್ಳೆ ಬದುಕಿನ ಸುಖ ಉಣ್ಣುತ್ತಿದ್ದಾರೆ.

ಜ್ಞಾನಕ್ಕೆ ಸಮನಾದ, ಅಷ್ಟೇ ಪವಿತ್ರವಾದ ವಸ್ತು ಜಗತ್ತಿನಲ್ಲಿ ಇನ್ನೊಂದಿಲ್ಲ ಎಂದು ನಂಬಿದ್ದ ಬೀಳಗಿಯವರು, ಮೊದಲು ವಿದ್ಯೆಯನ್ನು ಕಲಿತು ಜ್ಞಾನವಂತರಾದರು, ಇದು ಜ್ಞಾನದ ಯುಗ, ಯಾರೆಲ್ಲಾ ಜ್ಞಾನವಂತರಾಗಿರುತ್ತಾರೆ ಅವರುಗಳಿಗೆ ಸಮಾಜದಲ್ಲಿ ಬೆಲೆ ಇದೆ ಎಂದು ನಂಬಿದವರು, ಅದರಂತೆ ನಡೆದು ತೋರಿಸಿಕೊಟ್ಟರು. ಕಾಲಿಗೆ ಚಪ್ಪಲಿ ಇಲ್ಲದೆ, ಮೂರೊತ್ತು ಸರಿಯಾದ ಊಟ ಇಲ್ಲದೆ ಹಸಿವಿನಿಂದ ಬಳಲಿ, ಉಳ್ಳವರು ಕೊಟ್ಟ ಬಟ್ಟೆ ತೊಟ್ಟು ಶಿಕ್ಷಣ ಪಡೆದವರು ಪದವಿ ಹಾಗೂ ಸ್ನಾತಕೋತ್ತರ ಪದವಿಯಲ್ಲಿ ಚಿನ್ನದ ಪದಕ ಗಳಿಸಿ ಉನ್ನತ ದರ್ಜೆಯಲ್ಲಿ ಪಾಸು ಮಾಡಿದರು. ಸ್ವಂತ ದುಡಿಮೆಯ ಹಣದೊಂದಿಗೆ ಕಾರಿನಲ್ಲಿ ಕುಳಿತುಕೊಳ್ಳುವ ಗುರಿ ಸಾಧನೆಗೆ ಭಾರತೀಯ ನಾಗರಿಕ ಸೇವಾ ಪರೀಕ್ಷೆಗೆ ತಯಾರಾಗಲು ದೆಹಲಿಗೆ ಹೋದರಾದರೂ ಮನೆಯಲ್ಲಿದ್ದ ಕಿತ್ತು ತಿನ್ನುವ ಸಮಸ್ಯೆಗಳಿಂದಾಗಿ ವಾಪಸ್ಸು ಊರಿಗೆ ಬಂದುಬಿಟ್ಟರು. ಆದರೂ ಒಳಗಿನ ಬೆಂಕಿ ಧಗಧಗನೇ ಉರಿಯುತ್ತಲೇ ಇತ್ತು. ಕರ್ನಾಟಕ ನಾಗರಿಕ ಸೇವಾ ಪರೀಕ್ಷೆಯಲ್ಲಿ ಉನ್ನತ ದರ್ಜೆಯಲ್ಲಿ ಪಾಸು ಮಾಡಿ ಅಸಿಸ್ಟೆಂಟ್ ಕಮೀಷನರ್ ಹುದ್ದೆಗೆ ನೇಮಕಗೊಂಡರು. ಎಲ್ಲಿಗೆ ನೇಮಕಗೊಂಡರು ಗೊತ್ತೇ?, ಬರಿಗಾಲಲ್ಲಿ ನಡೆದಾಡಿದ ನೆಲಕ್ಕೆ!, ತಮ್ಮ ಸ್ವಂತ ಊರಿಗೇ ಸಹಾಯಕ ಆಯುಕ್ತರಾಗಿ ನಿಯೋಜನೆಗೊಂಡು ನಿಷ್ಠೆಯಿಂದ ಭ್ರಷ್ಟರಹಿತವಾಗಿ ಕರ್ತವ್ಯ ನಿರ್ವಹಿಸಿ ಹೆಸರು ಮತ್ತು ಕೀರ್ತಿ ಗಳಿಸಿದರು. ಆರು ವರ್ಷಗಳ ತರುವಾಯ ಐಎಎಸ್ ಹುದ್ದೆಗೆ ಭಡ್ತಿ ಪಡೆದರು.

ಒಮ್ಮೆ ಒಂದು ವೇದಿಕೆಯಲ್ಲಿ ಮೂಲ ಐಎಎಸ್ ಅಧಿಕಾರಿಯಲ್ಲ. ಕೆಎಎಸ್ ಮೂಲಕ ಬಡ್ತಿ ಪಡೆದ ಐಎಎಸ್ ಅಧಿಕಾರಿ ಎಂದು ತಿಳಿದು ಮುಖಮುರಿದಾಗ, ಅದೇ ವೇದಿಕೆಯಲ್ಲಿ ಗುಂಡು ಹೊಡೆದಂತೆ ಉತ್ತರ ಕೊಟ್ಟರು; The colour of Cat is not Important; How the Cat catches the Rat is Important.

ಬೆಕ್ಕಿನ ಬಣ್ಣ ಯಾವುದೆನ್ನುವುದು ಮುಖ್ಯವಲ್ಲ, ಬೆಕ್ಕು ಯಾವ ರೀತಿ ಇಲಿಯನ್ನು ಹಿಡಿಯುತ್ತದೆ ಎಂಬುದು ಮುಖ್ಯ ಎಂದು ಪ್ರತಿಕ್ರಿಯಿಸಿದ್ದು ಎಷ್ಟು ಅರ್ಥಗರ್ಭಿತವಾಗಿದೆ ಅಲ್ಲವೇ?.

ಸಾಧನೆಗೆ, ಸಿದ್ದಿಗೆ ಬಡತನ ಎಂದೂ ಅಡ್ಡಿ ಆಗುವುದಿಲ್ಲ ಎಂಬುದನ್ನು ಜ್ಞಾನ ಸಂಪಾದನೆಯ ಮೂಲಕ ನಿರೂಪಿಸಿದ ಬೀಳಗಿಯವರು ತಾನೊಬ್ಬನೇ ಬೆಳೆಯದೇ ತನ್ನೊಟ್ಟಿಗೆ ಸಾವಿರಾರು ಬಡಮಕ್ಕಳಿಗೆ ಮಾರ್ಗದರ್ಶನ ನೀಡಿದ್ದಾರೆ. ಇವರ ಪ್ರೇರಣಾ ನುಡಿಗಳನ್ನು ಕೇಳಿದವರು ಸುಮ್ಮನಿರಲಾರರು ಜೀವನದಲ್ಲಿ ನಾನೂ ಕೂಡ ಏನನ್ನಾದರೂ ಸಾಧಿಸಬೇಕೆಂಬ ಹಠ ಮೂಡದೆ ಇರದು. ಇವರ ಬದುಕಿನ ಕಥೆ ಪುಸ್ತಕ ರೂಪದಲ್ಲಿ ಹಾಗೂ ಸಾಕ್ಷ್ಯ ಚಿತ್ರ ಮಾಡಿದರೆ ಬೆಳೆಯುವ ಮಕ್ಕಳಿಗೆ ಅನುಕೂಲ ಆಗುವುದು. ಯೌವ್ವನಕ್ಕೆ ಕಾಲಿಡುತ್ತಿರುವ ಮಕ್ಕಳೇ ನಿಮ್ಮದು ಬದುಕಿನ ಪಥ ಬದಲಾಗುವ ಕಾಲಘಟ್ಟ ಈ ಸಂದರ್ಭಕ್ಕೆ ಇಂಥವರ ನಡೆ ನುಡಿಗಳು ನಿಮಗೆ ಸಹಕಾರಿ ಆಗುವುದು, ಲೇಖನ ಓದುತ್ತಿರುವ ಪೋಷಕರೇ ನಿಮ್ಮ ಮಕ್ಕಳಿಗೆ ಅಂತರ್ಜಾಲದಲ್ಲಿ ಸಿಗುವ ಇವರ ಭಾಷಣಗಳನ್ನು ಕೇಳಿಸಿ, ನಿಮ್ಮ ಮಕ್ಕಳು ಸಾಧನೆ ಮಾಡಿಯೇ ಮಾಡುತ್ತಾನೆ, ಆಗಲಿಲ್ಲವೆಂದರೂ, ಗ್ಯಾರಂಟಿ ಸಮಾಜಕ್ಕೆ ಒಬ್ಬ ಸತ್ಪ್ರಜೆಯಾಗಿ ರೂಪುಗೊಳ್ಳುತ್ತಾನೆ.

ಡಿಎಲ್–ಆರ್‌ಸಿ ಸ್ಮಾರ್ಟ್ ಕಾರ್ಡ್‌ಗೆ ಮತ್ತಷ್ಟು ಹೈಟೆಕ್ ಸ್ಪರ್ಶ; ಒಂದೇ ಸ್ಕ್ಯಾನ್‌ನಲ್ಲಿ ಎಲ್ಲಾ ಮಾಹಿತಿ ಲಭ್ಯ

ಬೆಂಗಳೂರು: ಒನ್ ನೇಷನ್, ಒನ್ ಕಾರ್ಡ್ ಅಡಿಯಲ್ಲಿ ಸಾರಿಗೆ ಇಲಾಖೆಯಿಂದ ಆರ್‌ಸಿ–ಡಿಎಲ್ ಹೊಸ ಸ್ಮಾರ್ಟ್ ಕಾರ್ಡ್‌ಗೆ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರು ಚಾಲನೆ ನೀಡಿದ್ದಾರೆ.

ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅರ್ಜಿ ಸಲ್ಲಿಸಿದವರಿಗೆ ಹೊಸ ಆರ್‌ಸಿ ಸ್ಮಾರ್ಟ್ ಕಾರ್ಡ್ ಸಿಗಲಿದೆ. ಹೊಸ ಕಾರ್ಡ್‌ನಲ್ಲಿ ಕ್ಯೂಆರ್ ಕೋಡ್ ಅಳವಡಿಸಲಾಗಿದೆ. ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ ಮಾಹಿತಿ ಪಡೆಯಬಹುದು ಎಂದು ತಿಳಿಸಿದರು.

ಒಂದು ಕಾರ್ಡ್‌ಗೆ ರೂ. 200 ಫಿಕ್ಸ್: ಹೈಟೆಕ್ ಸ್ಪರ್ಶ ಪಡೆದಿರುವ ಕಾರ್ಡ್‌ಗೆ ಸಾರಿಗೆ ಇಲಾಖೆ ಒಂದು ಕಾರ್ಡ್‌ಗೆ 200 ರೂ ಶುಲ್ಕ ವಿಧಿಸಿದೆ. ಈ ಪೈಕಿ 135 ರೂ. ಸರ್ಕಾರಕ್ಕೆ ಹೋದರೆ 64.46 ಸೇವಾದಾರರ ಪಾಲಾಗಲಿದೆ. ದೇಶದಲ್ಲಿ ಅತ್ಯಾಧುನಿಕ ತಂತ್ರಜ್ಞಾನ ಬಳಸಿ ಹೊಸ ಸ್ಮಾರ್ಟ್ ಕಾರ್ಡ್ ಮುದ್ರಿಸಲಾಗುತ್ತಿದ್ದು, ಒಂದು ಗಂಟೆಗೆ 500–600 ಕಾರ್ಡ್ ಪ್ರಿಂಟ್ ಮಾಡಬಹುದಾಗಿದೆ.

ಪ್ರತಿದಿನ ಹದಿನೈದು ಸಾವಿರ ಕಾರ್ಡ್‌ಗಳು ಪ್ರಿಂಟ್ ಆಗುತ್ತದೆ. ಇಟಲಿ ಮೂಲದ ಎರಡು ಪ್ರಿಂಟಿಂಗ್ ಮಿಷನ್‌ನಿಂದ ಸ್ಮಾರ್ಟ್ ಕಾರ್ಡ್ ತಯಾರಿಸಲಾಗುತ್ತಿದೆ. ಶಾಂತಿನಗರದಿಂದ ಕೇಂದ್ರ ಕಚೇರಿಯಿಂದ ಎಲ್ಲಾ ಜಿಲ್ಲೆಗಳಿಗೆ ಸ್ಮಾರ್ಟ್ ಕಾರ್ಡ್‌ಗಳು ರವಾನೆಯಾಗಲಿದೆ ಎಂದು ರಾಮಲಿಂಗಾರೆಡ್ಡಿ ತಿಳಿಸಿದರು.

ಅರ್ಜಿ ಸಲ್ಲಿಸಿದರೆ ಮಾತ್ರ ಹೊಸ ಕಾರ್ಡ್: ಹಳೆ ಆರ್‌ಸಿ ಮತ್ತು ಡಿಎಲ್ ಕಾರ್ಡ್‌ಗಳು ಎಂದಿನಂತೆ ಚಲಾವಣೆಯಲ್ಲಿರುತ್ತವೆ. ಹೊಸದಾಗಿ ಅರ್ಜಿ ಸಲ್ಲಿಸುವವರಿಗೆ ಹೊಸ ಸ್ಮಾರ್ಟ್ ಕಾರ್ಡ್ ಸಿಗಲಿದ್ದು, ಹೊಸ ಸ್ಮಾರ್ಟ್ ಕಾರ್ಡ್ ಬಯಸುವವರು 200 ರೂ. ಪಾವತಿಸಿ ಕಾರ್ಡ್ ಪಡೆಯಬಹುದಾಗಿದೆ. ಈಗಾಗಲೇ ಡಿ.15ರಿಂದ ಹೊಸ ಡಿಎಲ್ ಸ್ಮಾರ್ಟ್ ಕಾರ್ಡ್ ವಿತರಣೆ ಮಾಡಲಾಗುತ್ತದೆ ಎಂದು ಸಚಿವರು ತಿಳಿಸಿದರು.

ಸಹಕಾರಿ ಅಭಿವೃದ್ಧಿಗಾಗಿ ಕರ್ನಾಟಕಕ್ಕೆ ಕೇಂದ್ರದಿಂದ 4,164 ಕೋಟಿ

ನವದೆಹಲಿ: ಕರ್ನಾಟಕದಲ್ಲಿ ಸಹಕಾರಿ ಅಭಿವೃದ್ಧಿಗಾಗಿ ಕೇಂದ್ರ ಸರ್ಕಾರ ಇದುವರೆಗೆ 4,164.95 ಕೋಟಿ ರೂ.ಗಳನ್ನು ವಿತರಿಸಿದೆ ಎಂದು ಸಹಕಾರ ಸಚಿವ ಅಮಿತ್ ಶಾ ಬುಧವಾರ ಹೇಳಿದ್ದಾರೆ. ನ.25ರ ವೇಳೆಗೆ ದೇಶಾದ್ಯಂತ ಸಹಕಾರಿ ಸಂಸ್ಥೆಗಳ ಅಭಿವೃದ್ಧಿಗಾಗಿ ರಾಷ್ಟ್ರೀಯ ಸಹಕಾರಿ ಅಭಿವೃದ್ಧಿ ನಿಗಮ(ಎನ್‌ಸಿಡಿಸಿ) ಒಟ್ಟಾರೆಯಾಗಿ 4,67,455.66 ಕೋಟಿ ರೂ.ಗಳನ್ನು ಬಿಡುಗಡೆ ಮಾಡಿದೆ. ಇದರಲ್ಲಿ 4,164.95 ಕೋಟಿ ರೂ.ಗಳನ್ನು ಕರ್ನಾಟಕದಲ್ಲಿ ಸಹಕಾರಿ ಅಭಿವೃದ್ಧಿಗಾಗಿ ವಿತರಿಸಲಾಗಿದೆ ಎಂದು ಅಮಿತ್ ಶಾ ರಾಜ್ಯಸಭೆಗೆ ನೀಡಿದ ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ.

ರಾಷ್ಟ್ರೀಯ ಸಹಕಾರಿ ದತ್ತಸಂಚಯ(ಎನ್‌ಸಿಡಿ) ಪ್ರಕಾರ, ಕರ್ನಾಟಕದಲ್ಲಿ ಒಟ್ಟು 46,798 ಸಹಕಾರಿ ಸಂಘಗಳಿದ್ದು, 2.38 ಕೋಟಿ ಸದಸ್ಯರನ್ನು ಹೊಂದಿವೆ.

ಸಹಕಾರ ಸಚಿವಾಲಯವು 2021ರಲ್ಲಿ ಪ್ರಾರಂಭವಾದಾಗಿನಿಂದ, 'ಸಹಕಾರ–ಸೇ–ಸಮೃದ್ಧಿ'ಯ ದೃಷ್ಟಿಕೋನವನ್ನು ಸಾಕಾರಗೊಳಿಸಲು ಮತ್ತು ಕರ್ನಾಟಕ ಸೇರಿದಂತೆ ದೇಶಾದ್ಯಂತ ಡೈರಿ, ಸಕ್ಕರೆ ಮತ್ತು ಕೃಷಿ ಸಹಕಾರ ಸಂಘಗಳನ್ನು ಬಲಪಡಿಸಲು ಹಲವಾರು ಉಪಕ್ರಮಗಳನ್ನು ಕೈಗೊಂಡಿದೆ ಎಂದು ಅವರು ಹೇಳಿದರು.

ಮೈಸೂರಲ್ಲಿ ಬೀದಿ ನಾಯಿಗಳ ನಿಯಂತ್ರಣ ರೂಪುರೇಷೆ!

● ಪ್ರತಿ ಬೀದಿ ನಾಯಿಗೆ ಸಂತಾನಹರಣ ಚಿಕಿತ್ಸೆ ● ಯೋಜನೆ ರೂಪಿಸಿ 2 ದಿನದಲ್ಲಿ ಅಫಿಡವಿಟ್ ಸಲ್ಲಿಸಲು ಸೂಚನೆ ● ನೋಡೆಲ್ ಅಧಿಕಾರಿಗಳ ನೇಮಕಕ್ಕೆ ಆದೇಶ ● ಮೈಸೂರಿನಲ್ಲಿ 1,26,856 ಬೀದಿ ನಾಯಿಗಳಿವೆ ● ಇವುಗಳಲ್ಲಿ 8,197 ನಾಯಿಗಳಿಗೆ ಈಗಾಗಲೇ ಸಂತಾನಹರಣ ಚಿಕಿತ್ಸೆ

ಮೈಸೂರು, ಡಿ.3(ಬಿಎಲ್‌ಯು)– ಸುಪ್ರೀಂ ಕೋರ್ಟ್ ಆದೇಶದಂತೆ ಮೈಸೂರು ನಗರ ಹಾಗೂ ಜಿಲ್ಲೆಯಲ್ಲಿ ಬೀದಿ ನಾಯಿಗಳ ನಿಯಂತ್ರಣ ಹಾಗೂ ಸಂತಾನ ಹರಣ ಚಿಕಿತ್ಸೆ ಮಾಡಲು ಜಿಲ್ಲಾಡಳಿತ ಯೋಜನೆ ರೂಪಿಸಿದೆ.

ಮೈಸೂರು ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತರೆಡ್ಡಿ ಅಧ್ಯಕ್ಷತೆಯಲ್ಲಿ ನಡೆದ ಜಿಲ್ಲಾ ಮಟ್ಟದ ಸಮಿತಿ ಸಭೆಯಲ್ಲಿ ಈ ಸಂಬಂಧ ರೂಪುರೇಷೆ ಸಿದ್ಧಪಡಿಸಲಾಯಿತು.

ಬೀದಿನಾಯಿಗಳ ಉಪಟಳ ನಿಯಂತ್ರಣ ಮಾಡುವ ನಿಟ್ಟಿನಲ್ಲಿ ಸುಪ್ರೀಂಕೋರ್ಟ್ ನೀಡಿರುವ ಆದೇಶವನ್ನು ಅನುಷ್ಠಾನ ಮಾಡುವ ಹಿನ್ನೆಲೆ ಸಮಗ್ರ ಚರ್ಚೆ ನಡೆಸಲಾಯಿತು.

ಈ ವೇಳೆ ಮಾತನಾಡಿದ ಜಿಲ್ಲಾಧಿಕಾರಿ ಲಕ್ಷ್ಮಿಕಾಂತರೆಡ್ಡಿ, ಬೀದಿ ನಾಯಿಗಳ ಹಾವಳಿ ತಡೆಗಟ್ಟುವ ಹಿನ್ನೆಲೆಯಲ್ಲಿ ಸಂತಾನ ಹರಣ ಶಸ್ತ್ರಚಿಕಿತ್ಸೆ ಮಾಡಲು ಸ್ಥಳೀಯ ಸಂಸ್ಥೆಗಳು ಯೋಜನೆ ರೂಪಿಸಿ, ಜಿಲ್ಲಾ ನಗರಾಭಿವೃದ್ಧಿ ಕೋಶಕ್ಕೆ ಎರಡು ದಿನಗಳ ಒಳಗೆ ಅಫಿಡವಿಟ್ ಸಲ್ಲಿಸಬೇಕು ಎಂದು ಸೂಚಿಸಿದರು.

ಮೈಸೂರು ನಗರ ಪಾಲಿಕೆ, ನಗರಸಭೆಗಳು, ಪುರಸಭೆಗಳು ಹಾಗೂ ಗ್ರಾಮ ಪಂಚಾಯಿತಿಗಳು ನೋಡೆಲ್ ಅಧಿಕಾರಿ ನೇಮಕ ಮಾಡಬೇಕು. ಬೀದಿ ನಾಯಿಗಳಿಗೆ ಸಂತಾನ ಹರಣ ಚಿಕಿತ್ಸೆ ಮಾಡಿಸಬೇಕು, ನಂತರ ಅವುಗಳನ್ನು ಮೂರು ದಿನಗಳ ಕಾಲ ಆರೈಕೆ ಮಾಡಬೇಕು. ಈ ಸಂಬಂಧ ಎರಡು ದಿನಗಳ ಒಳಗೆ ಅಫಿಡವಿಟ್ ಸಲ್ಲಿಸಬೇಕು ಎಂದು ಹೇಳಿದರು.

ಸಂತಾನಹರಣ ಚಿಕಿತ್ಸೆ ನಂತರ ಪಶು ಆಸ್ಪತ್ರೆಗೆ ಬಿಡಬೇಕು. ತರುವಾಯ ಅಲ್ಲಿ



ಮೂರು ದಿನಗಳ ಕಾಲ ಚಿಕಿತ್ಸೆಯಲ್ಲಿದ್ದು ಹಾಗೂ ಆಹಾರ ನೀಡಿ ಆರೈಕೆ ಮಾಡಬೇಕು. ನಾಯಿಗಳಿಗೆ ಶೆಡ್ ನಿರ್ಮಾಣ ಮಾಡಬೇಕು. ಇದಕ್ಕೆ ತಗಲುವ ವೆಚ್ಚವನ್ನು ಸರ್ಕಾರವೇ ಭರಿಸಲಿದೆ ಎಂದು ಸ್ಪಷ್ಟಪಡಿಸಿದರು.

ಮೈಸೂರಿನ ಕೆ.ಆರ್.ಆಸ್ಪತ್ರೆ, ಮಕ್ಕಳ ಆಸ್ಪತ್ರೆ, ಚೆಲುವಾಂಬ ಆಸ್ಪತ್ರೆಯ ಸುತ್ತ ಕಾಂಪೌಂಡ್ ನಿರ್ಮಾಣ ಮಾಡಲಾಗಿದೆ. ನಾಯಿಗಳು ಆಸ್ಪತ್ರೆ ಒಳಗೆ ಬಾರದಂತೆ ಭದ್ರತಾ ಸಿಬ್ಬಂದಿ ನೋಡಿಕೊಳ್ಳಲು ವ್ಯವಸ್ಥೆ ಮಾಡಬೇಕೆಂದು ಆಸ್ಪತ್ರೆ ಅಧಿಕಾರಿಗಳಿಗೆ ಲಕ್ಷ್ಮಿಕಾಂತರೆಡ್ಡಿ ಸೂಚನೆ ನೀಡಿದರು.

ಈ ವೇಳೆ ಮಾತನಾಡಿದ ಪಶು ಸಂಗೋಪನಾ ಮತ್ತು ಪಶು ವೈದ್ಯಕೀಯ ಇಲಾಖೆ ಉಪ ನಿರ್ದೇಶಕ ಡಾ.ಸಿ.ನಾಗರಾಜು, ನೀವು ಅಫಿಡವಿಟ್ ಸಲ್ಲಿಸಿದ ನಂತರ ಅದನ್ನು ನಗರಾಭಿವೃದ್ಧಿ ಇಲಾಖೆಗೆ ಕಳುಹಿಸಲಾಗುವುದು ಎಂದು ತಿಳಿಸಿದರು.

ಸ್ಥಳಿಯ ಸಂಸ್ಥೆಗಳ ಹೊಣೆಗಾರಿಕೆ ಸಂಬಂಧ ಮಾರ್ಗಸೂಚಿ ಸಿದ್ಧಪಡಿಸಲಾಗಿದೆ. ಇದನ್ನು ಚಾಚೂ ತಪ್ಪದೆ ಪಾಲಿಸಬೇಕು ಎಂದು ಸೂಚಿಸಿದರು.

ಮೈಸೂರು ನಗರ ಮತ್ತು ಜಿಲ್ಲೆಯಲ್ಲಿ 2021 ರ ಗಣತಿ ಪ್ರಕಾರ 1,26,856 ಬೀದಿ ನಾಯಿಗಳಿದ್ದು, 2023–24 ಮತ್ತು 2025 ರವರೆಗೆ 8,197 ಬೀದಿ ನಾಯಿಗಳಿಗೆ ಸಂತಾನಹರಣ ಚಿಕಿತ್ಸೆ ಮಾಡಲಾಗಿದೆ ಎಂದು ಅಂಕಿ ಅಂಶ ಸಹಿತ ಮಾಹಿತಿ ನೀಡಿದರು.

ಕೆ.ಆರ್.ಆಸ್ಪತ್ರೆ ಆವರಣದಲ್ಲಿ 40 ನಾಯಿಗಳಿವೆ. ಇವುಗಳಿಗೆ ಸಂತಾನಹರಣ ಚಿಕಿತ್ಸೆ ಮಾಡಿ, ಪುನರ್ ವಸತಿ ಕೇಂದ್ರಕ್ಕೆ ಬಿಡಬೇಕು ಎಂದು ಮನವಿ ಮಾಡಿದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ಎಸ್. ಯುಕೇಶ್ ಕುಮಾರ್, ಡಿಸಿಪಿ ಆರ್.ಎನ್. ಬಿಂದು ಮಣಿ, ಮೈಸೂರು ನಗರಪಾಲಿಕೆ ಹೆಚ್ಚುವರಿ ಆಯುಕ್ತೆ ಕುಸುಮ ಕುಮಾರಿ, ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾಧಿಕಾರಿ ವಿ.ಪ್ರಿಯಾದರ್ಶಿನಿ ಸೇರಿದಂತೆ ಇತರೆ ಅಧಿಕಾರಿಗಳು ಸಭೆಯಲ್ಲಿ ಹಾಜರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಶ್ರೀರಂಗಪಟ್ಟಣದಲ್ಲಿ ಹನುಮ ಮಾಲಾಧಾರಿಗಳ ಸಂಕೀರ್ತನಾ ಯಾತ್ರೆ

● ಸಾವಿರಾರು ಭಕ್ತರಿಂದ ಮೊಳಗಿದ ಜೈ ಶ್ರೀರಾಮ್, ಜೈ ಭಜರಂಗಿ ಘೋಷಣೆ ● ವಿಧಿ ವಿಧಾನದಂತೆ ಮಾಲೆ ವಿಸರ್ಜನೆ ● ಜಾಮೀಯ ಮಸೀದಿಗೆ ನುಗ್ಗಲೆತ್ನ; ಪೊಲೀಸರು ತಡೆದಾಗ ಮಾತಿನ ಚಕಮಕಿ, ತಳ್ಳಾಟ-ನೂಕಾಟ ● ಅಹಿತಕರ ಘಟನೆ ನಡೆಯದಂತೆ ಪೊಲೀಸರ ಬಿಗಿ ಬಂದೋಬಸ್ತ್



ಶ್ರೀರಂಗಪಟ್ಟಣದಲ್ಲಿ ಬುಧವಾರ ಹನುಮ ಮಾಲಾಧಾರಿಗಳ ಸಂಕೀರ್ತನಾ ಯಾತ್ರೆ ವಿಜೃಂಭಣೆಯಿಂದ ನಡೆಯಿತು.



ಸಂಕೀರ್ತನಾ ಯಾತ್ರೆ ಆಂಜನೇಯಸ್ವಾಮಿ ಉತ್ಸವ ಮೂರ್ತಿ ಮೆರವಣಿಗೆ.



ಮೆರವಣಿಗೆ ವೇಳೆ ಪೊಲೀಸರೊಂದಿಗೆ ಹನುಮ ಮಾಲಾಧಾರಿಗಳ ಮಾತಿನ ಚಕಮಕಿ.

ಶ್ರೀರಂಗಪಟ್ಟಣ, ಡಿ.3– ಪ್ರತಿವರ್ಷ ಪಟ್ಟಣದಲ್ಲಿ ಹನುಮ ಜಯಂತಿ ವೇಳೆ ನಡೆಯುವ ಹನುಮ ಮಾಲಾಧಾರಿಗಳ ಸಂಕೀರ್ತನಾ ಯಾತ್ರೆ ಈ ವರ್ಷವೂ ಅದ್ಧೂರಿಯಾಗಿ ನಡೆಯಿತು. ಆದರೆ ಜಾಮೀಯ ಮಸೀದಿಗೆ ಮಾಲಾಧಾರಿಗಳು ನುಗ್ಗಲು ಯತ್ನಿಸಿದಾಗ ಪೊಲೀಸರೊಂದಿಗೆ ಮಾತಿನ ಚಕಮಕಿ, ನೂಕಾಟ-ತಳ್ಳಾಟ ನಡೆಯಿತು.

ಗಂಜಾಂನ ಕಾವೇರಿ ನದಿ ದಂಡೆಯಲ್ಲಿರುವ ಆಂಜನೇಯಸ್ವಾಮಿ ದೇವಾಲಯದ ಬಳಿ ಬೆಳಗ್ಗೆ ವಿಶೇಷ ಪೂಜೆ ಸಲ್ಲಿಸಿದ ಹಿಂದೂಪರ ಮುಖಂಡ ಲೋಹಿತ್ ರಾಜ್ ಅರಸ್, ಆಂಜನೇಯಸ್ವಾಮಿಗೆ ಪುಷ್ಪಾರ್ಚನೆ ಮಾಡುವ ಮೂಲಕ ಸಂಕೀರ್ತನಾ ಯಾತ್ರೆಗೆ ಚಾಲನೆ ನೀಡಿದರು.

ಈ ವೇಳೆ ಮಾಲಾಧಾರಿಗಳು ಪಟ್ಟಣದ ಮೂಡಲ ಬಾಗಿಲು ಆಂಜನೇಯಸ್ವಾಮಿ ದೇವಾಲಯದವರೆಗೂ ಯಾತ್ರೆ ಕೈಗೊಂಡರು. ಮಧ್ಯಾಹ್ನದ ವೇಳೆಗೆ ಯಾತ್ರೆ ದೇವಾಲಯ ತಲುಪಿತು. ಮೆರವಣಿಗೆಯುದ್ದಕ್ಕೂ ಹಿಂದೂ ಹಾಗೂ ಹನುಮಾನ್ ಮಾಲಾಧಾರಿಗಳು ಜೈ ಶ್ರೀರಾಮ್, ಜೈ ಭಜರಂಗಿ ಘೋಷಣೆಗಳನ್ನು ಮೊಳಗಿಸಿದರು.

ಮಂಡ್ಯ, ರಾಮನಗರ, ಮೈಸೂರು, ಮದ್ದೂರು, ಪಾಂಡವಪುರ, ನಾಗಮಂಗಲ, ಕೆ.ಆರ್.ಪೇಟೆ ಹಾಗೂ ಶ್ರೀರಂಗಪಟ್ಟಣ ಸುತ್ತಮುತ್ತಲ ಗ್ರಾಮಗಳ ಸಾವಿರಾರು ಹನುಮ ಭಕ್ತರು ಸಂಕೀರ್ತನಾ ಯಾತ್ರೆಯಲ್ಲಿ ಪಾಲ್ಗೊಂಡಿದ್ದರು. ಧಾರ್ಮಿಕ ವಿಧಿ ವಿಧಾನಗಳಂತೆ ಮಾಲಾಧಾರಿಗಳು ಮೂಡಲ ಬಾಗಿಲು ಆಂಜನೇಯಸ್ವಾಮಿ ದೇವಾಲಯದಲ್ಲಿ ತಮ್ಮ ಮಾಲೆಗಳನ್ನು ವಿಸರ್ಜಿಸಿದರು. ಬಳಿಕ ಪಟ್ಟಣದ ಶ್ರೀರಂಗನಾಥಸ್ವಾಮಿ ಮೈದಾನದಲ್ಲಿ ಹನುಮ ಮಾಲಾಧಾರಿಗಳಿಗೆ ಊಟದ ವ್ಯವಸ್ಥೆ ಮಾಡಲಾಗಿತ್ತು

ಹಣ್ಣು, ಪಾನಕ ವಿತರಣೆ: ಪಟ್ಟಣಕ್ಕೆ ಆಗಮಿಸಿದ ಹನುಮ ಮಾಲಾಧಾರಿಗಳಿಗೆ ರಸ್ತೆಯುದ್ದಕ್ಕೂ ಭಕ್ತರು ಹಾಗೂ ದಾನಿಗಳು ಬಾದಾಮಿ ಹಾಲು, ಮಜ್ಜಿಗೆ, ಪಾನಕ, ಮೊಸಂಬಿ, ಕಿತ್ತಳೆ, ಸಪೋಟ, ಬಾಳೆಹಣ್ಣು ಸೇರಿದಂತೆ ಇತರೆ ತಿನಿಸುಗಳನ್ನು ನೀಡಿ ಮೆರವಣಿಗೆಗೆ ಶುಭ ಕೋರಿದರು.

ಬಿಗಿ ಪೊಲೀಸ್ ಬಂದೋಬಸ್ತ್: ಜಿಲ್ಲೆ ಸೇರಿದಂತೆ ವಿವಿಧೆಡೆಗಳಿಂದ ಹನುಮ ಮಾಲಾಧಾರಿಗಳು ಆಗಮಿಸಿದ್ದರಿಂದ ಯಾವುದೇ ಅಹಿತಕರ ಘಟನೆ ನಡೆಯದಂತೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ ನೇತೃತ್ವದಲ್ಲಿ ಪೊಲೀಸರು ಮೆರವಣಿಗೆ ಸಾಗುವ ಮಾರ್ಗದುದ್ದಕ್ಕೂ ಬಿಗಿ ಭದ್ರತೆ ಕೈಗೊಂಡಿದ್ದರು.

ಹನುಮ ಮಾಲಾಧಾರಿಗಳು ತೆರಳುವ ಮಾರ್ಗ ಹಾಗೂ ವಿವಿಧ ಸೂಕ್ಷ್ಮ ಪ್ರದೇಶಗಳಲ್ಲಿ ಓರ್ವ ಐಜಿ, ಇಬ್ಬರು ಎಸ್ಪಿಗಳು, 6 ಎಎಸ್‌ಪಿ, 10 ಡಿವೈಎಸ್ಪಿ ಸೇರಿದಂತೆ 1800 ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿ ಜೊತೆಗೆ 4 ಡಿಎಆರ್, 2 ಕ್ಯೂಆರ್‌ಟಿ, 8 ಕೆಎಸ್‌ಆರ್‌ಪಿ ತುಕಡಿ ಮತ್ತು 300 ಗೃಹ ರಕ್ಷಕ ದಳದ ಸಿಬ್ಬಂದಿಯನ್ನು ನಿಯೋಜಿಸಲಾಗಿತ್ತು. ಜೊತೆಗೆ ಟಿಪ್ಪು ಮಸೀದಿ ಬಳಿ ಬಿಗಿ ಪೊಲೀಸ್ ಬಂದೋಬಸ್ತ್ ಮಾಡಲಾಗಿತ್ತು. ಡ್ರೋನ್ ಕ್ಯಾಮರಾ ಸೇರಿದಂತೆ ಹತ್ತಾರು ಆಯ್ದ ಸ್ಥಳಗಳಲ್ಲಿ ಸಿಸಿ ಕ್ಯಾಮರಾ ಅಳವಡಿಸಲಾಗಿತ್ತು.

ಈಡುಗಾಯಿ ಪೂಜೆ: ಮಸೀದಿ ಪಕ್ಕದ ಪುರಸಭೆ ವೃತ್ತದಲ್ಲಿ ಹನುಮ ಮಾಲಾಧಾರಿಗಳು ಪೂಜೆ ಸಲ್ಲಿಸಿ, ಈಡುಗಾಯಿ ಹೊಡೆದು ಕರ್ಪೂರ ಹಚ್ಚಿ ಕೆಲಕಾಲ ರಸ್ತೆಯಲ್ಲೇ ಕುಳಿತು ಶ್ರೀರಾಮ ಹಾಗೂ ಶ್ರೀ ಆಂಜನೇಯಸ್ವಾಮಿ ಭಜನೆ ನಡೆಸಿದರು. ನಂತರ ಹನುಮನ ಪಾದದ ಮೇಲಾಣೆ ಮಂದಿರ ಇಲ್ಲೇ ಕಟ್ಟುವೆವು, ಕಟ್ಟುವೆವು ಮಂದಿರ ಇಲ್ಲೇ ಕಟ್ಟುವೆವು ಎಂದು ಘೋಷಣೆ ಕೂಗಿದರು.

ಮಾತಿನ ಚಕಮಕಿ: ಪಟ್ಟಣದ ಪುರಸಭೆ ವೃತ್ತದ ಬಳಿ ಸಂಕೀರ್ತನಾ ಯಾತ್ರೆ ಬಂದ ವೇಳೆ ಹನುಮ ಮಾಲಾಧಾರಿಗಳು ಮಂದಿರ ಕಟ್ಟುವೆವು ಎಂದು ಪಟ್ಟಣದ ಜಾಮೀಯ ಮಸೀದಿ ಎದುರು ಘೋಷಣೆ ಕೂಗುತ್ತಿದ್ದ ವೇಳೆ ಪೊಲೀಸರು ಅವರನ್ನು ತಡೆದು ಮುಖ್ಯರಸ್ತೆಯಲ್ಲಿ ತೆರಳಲು ಸೂಚಿಸಿದರು. ಈ ವೇಳೆ ಪೊಲೀಸರು ಹಾಗೂ ಮಾಲಾಧಾರಿಗಳ ನಡುವೆ ಮಾತಿನ ಚಕಮಕಿ ನಡೆದು ತಳ್ಳಾಟ, ನೂಕಾಟ ನಡೆಯಿತು.


ಮಸೀದಿಗೆ ನುಗ್ಗಲು ಯತ್ನ: ಪಟ್ಟಣದ ಜಾಮೀಯ ಮಸೀದಿ ಬಳಿ ಪೊಲೀಸರನ್ನು ನಿಯೋಜಿಸಿ ಸಾಕಷ್ಟು ಭದ್ರತೆ ಏರ್ಪಡಿಸಿದ್ದರೂ ಸಹ ಕೆಲವು ಹನುಮ ಭಕ್ತರು ನುಗ್ಗಲು ಯತ್ನಿಸಿದರು. ಈ ವೇಳೆ ಮಧ್ಯ ಪ್ರವೇಶಿಸಿದ ಪೊಲೀಸರು ಮಾಲಾಧಾರಿಗಳನ್ನು ತಡೆದರು.

ದೇಗುಲ ಪುನರ್ ನಿರ್ಮಾಣಕ್ಕೆ ಸಂಕಲ್ಪ ವಹಿಸಿ: ಇದಕ್ಕೂ ಮುನ್ನ ಯಾತ್ರೆಗೆ ಚಾಲನೆ ನೀಡಿ ಮಾತನಾಡಿದ ಹಿಂದೂ ಜಾಗರಣ ವೇದಿಕೆ ಮೈಸೂರು ಪ್ರಾಂತ್ಯ ಸಂಚಾಲಕ ಲೋಹಿತ್ ರಾಜ್ ಅರಸ್, ಶ್ರೀರಂಗಪಟ್ಟಣ ಪುಣ್ಯ ಕ್ಷೇತ್ರವಾಗಿದ್ದು, ಹಿಂದೂಗಳ ಪವಿತ್ರ ಸ್ಥಳವಾಗಿದೆ. ಈ ಹಿಂದೆ ಇಲ್ಲಿ ಹಲವು ದೇವಾಲಯಗಳು ನಿರ್ಮಾಣವಾಗಿದ್ದು, ಇದರ ಪಳಯುಳಿಕೆಯನ್ನು ಇಲ್ಲಿ ಕಾಣಬಹುದಾಗಿದೆ. ಅದರಲ್ಲಿ ನಮ್ಮ ಮೂಡಲ ಬಾಗಿಲು ಆಂಜನೇಯ ಸ್ವಾಮಿ ದೇವಸ್ಥಾನವೂ ಒಂದು. ಹೀಗಾಗಿ ಅದರ ಪುನರ್ ನಿರ್ಮಾಣದ ಸಂಕಲ್ಪಕ್ಕಾಗಿ ನಾವೆಲ್ಲಾ ಇಂದು ಸೇರಿದ್ದೇವೆ ಎಂದರು.

ಇದೇ ವೇಳೆ ಹಿಂದೂ ಜಾಗರಣ ವೇದಿಕೆ ಮುಖಂಡರಾದ ವಕೀಲ ಬಾಲರಾಜ್ ಹನುಮ ಮಾಲಾಧಾರಿಗಳಿಗೆ ಪ್ರತಿಜ್ಞಾವಿಧಿ ಬೋಧಿಸಿದರು. ವೇದಬ್ರಹ್ಮ ಡಾ.ಭಾನು ಪ್ರಕಾಶ್‌ಶರ್ಮಾ, ಹಿಂದೂ ಜಾಗರಣಾ ವೇದಿಕೆ ಸಂಚಾಲಕ ಚಂದನ್, ಅರ್ಚಕ ಕೃಷ್ಣಭಟ್ ಸೇರಿದಂತೆ ಹಿಂದೂಪರ ಸಂಘಟನೆಗಳ ಮುಖಂಡರು ಹಾಜರಿದ್ದರು.

ಅಪಾರ್ಟ್‌ಮೆಂಟ್‌ಗಳಲ್ಲಿ ಫ್ಲ್ಯಾಟ್‌ನ ವಿಸ್ತೀರ್ಣ ಆಧರಿಸಿ ನಿರ್ವಹಣಾ ಶುಲ್ಕ ವಿಧಿಸುವಂತಿಲ್ಲ

ಬೆಂಗಳೂರು ಸಿವಿಲ್ ಕೋರ್ಟ್ ಆದೇಶ



ಬೆಂಗಳೂರು: ದೊಡ್ಡ ದೊಡ್ಡ ಫ್ಲ್ಯಾಟ್‌ಗಳಿಗೆ ಹೆಚ್ಚಿನ ನಿರ್ವಹಣಾ ಶುಲ್ಕ ವಿಧಿಸುವ ಮಾದರಿ ನಿಯಮ ಕಾನೂನುಬಾಹಿರ ಎಂದು ಬೆಂಗಳೂರು ನಗರದ ಸಿವಿಲ್ ಕೋರ್ಟ್ ಆದೇಶಿಸಿದೆ.

ಈ ಆದೇಶ ನಗರಗಳ ಅಪಾರ್ಟ್‌ಮೆಂಟ್‌ಗಳ ಮೇಲೆ ಗಮನಾರ್ಹ ಪರಿಣಾಮ ಬೀರಲಿದ್ದು, ಅಪಾರ್ಟ್‌ಮೆಂಟ್‌ಗಳು ಫ್ಲ್ಯಾಟ್‌ನ ವಿಸ್ತೀರ್ಣ ಆಧರಿಸಿ ನಿರ್ವಹಣಾ ಶುಲ್ಕ ವಿಧಿಸಲು ಅವಕಾಶವಿಲ್ಲದಂತಾಗಿದೆ. 'ಫ್ಲ್ಯಾಟ್ ಎಷ್ಟು ಪ್ರದೇಶ (ಬಿಲ್ಟ್ ಅಪ್ ಏರಿಯಾ) ಹೊಂದಿದೆಯೋ ಅದರ ಆಧಾರದ ಮೇಲೆ ನಿರ್ವಹಣಾ ಶುಲ್ಕ ವಿಧಿಸುವ ಅಸೋಸಿಯೇಷನ್ ನಿರ್ಧಾರ ಸರಿಯಲ್ಲ. ಎಲ್ಲಾ ಫ್ಲ್ಯಾಟ್ ಮಾಲೀಕರು ಸಾಮಾನ್ಯ ಸೌಕರ್ಯಗಳನ್ನು ಸಮಾನವಾಗಿ ಬಳಸುವುದರಿಂದ ನಿರ್ವಹಣಾ ಶುಲ್ಕವೂ ಸಮಾನವಾಗಿಯೇ ಇರಬೇಕಾಗುತ್ತದೆ' ಎಂದು ನಗರದ 40ನೇ ಹೆಚ್ಚುವರಿ ಸಿಟಿ ಸಿವಿಲ್ ಸೆಷನ್ಸ್ ನ್ಯಾಯಾಲಯ ಮಹತ್ವದ ಆದೇಶ ನೀಡಿದೆ.

ಅಲ್ಲದೆ, ಹೆಚ್ಚಿನ ಬಿಲ್ಟ್ ಅಪ್ ಪ್ರದೇಶ ಹೊಂದಿದ್ದಾರೆಂಬ ಕಾರಣಕ್ಕಾಗಿ ಅಸೋಸಿಯೇಷನ್ ಹೆಚ್ಚಿನ ನಿರ್ವಹಣಾ ಶುಲ್ಕ ಪಾವತಿಸಬೇಕೆಂದು ಫ್ಲ್ಯಾಟ್ ಮಾಲೀಕರ ಮೇಲೆ ಒತ್ತಡ ಹೇರುವುದು ಸರಿಯಲ್ಲ ಎಂದು ಹೇಳಿರುವ ನ್ಯಾಯಾಲಯ, 2020ರಲ್ಲಿ ನಗರದ ಪೂರ್ವ ಸೀಸನ್ಸ್ ಓನರ್ಸ್ ಅಸೋಸಿಯೇಷನ್ ಜಾರಿಗೊಳಿಸಿದ್ದ ನಿರ್ಣಯವನ್ನು ರದ್ದುಗೊಳಿಸಿದೆ.

ಕಾನೂನಿಗೆ ವಿರುದ್ಧ : ಸಿ.ವಿ.ರಾಮನ್ ನಗರದ ಪೂರ್ವ ಸೀಸನ್ಸ್ ಅಪಾರ್ಟ್‌ಮೆಂಟ್ ವಾಸಿ 61 ವರ್ಷದ ಅರುಣ್ ಕುಮಾರ್ ರಾವ್ ಸಲ್ಲಿಸಿದ್ದ ಅರ್ಜಿ ಪರಿಶೀಲಿಸಿದ ನ್ಯಾಯಾಧೀಶರಾದ ಎನ್. ವೀಣಾ ಅವರಿದ್ದ ನ್ಯಾಯಾಲಯ ಇತ್ತೀಚೆಗೆ ಈ ಆದೇಶ ಮಾಡಿದೆ. ದಾಖಲೆಗಳನ್ನು ಪರಿಶೀಲಿಸಿ ವಾದ – ಪ್ರತಿವಾದ ಆಲಿಸಿದ ಬಳಿಕ ನ್ಯಾಯಾಲಯ, 2020 ರ ಜುಲೈನಲ್ಲಿ ಅಸೋಸಿಯೇಷನ್ ಕೈಗೊಂಡಿರುವ ನಿರ್ಣಯ ಕಾನೂನಿಗೆ ವಿರುದ್ಧವಾಗಿದೆ ಮತ್ತು ಆ ಪ್ರಕ್ರಿಯೆಯಲ್ಲಿ ಸಾಕಷ್ಟು ಲೋಪಗಳಾಗಿವೆ. ವರ್ಚುವಲ್ ಸಭೆ ಮೂಲಕ ಬೈಲಾ ತಿದ್ದುಪಡಿ ಮಾಡಲು ರಿಜಿಸ್ಟ್ರಾರ್ ಅನುಮತಿ ನೀಡಿರುವ ಬಗ್ಗೆ ಅಸೋಸಿಯೇಷನ್ ಯಾವುದೇ ದಾಖಲೆಗಳನ್ನು ಸಲ್ಲಿಸುವಲ್ಲಿ ವಿಫಲವಾಗಿದೆ ಎಂದು ತಿಳಿಸಿದೆ.

ಜತೆಗೆ, ತಿದ್ದುಪಡಿಯ ಪ್ರಸ್ತಾವದಲ್ಲಿಯೇ ದೋಷಗಳಿವೆ. ಬಿಲ್ಟ್ ಅಪ್ ಏರಿಯಾ ಮತ್ತು ಸೂಪರ್ ಬಿಲ್ಟ್ ಅಪ್ ಏರಿಯಾ ನಡುವೆ ವ್ಯತ್ಯಾಸವಿದೆ. ಅದು ಮತದಾನದ ಮೇಲೆ ಪರಿಣಾಮ ಬೀರಿರಬಹುದು. ಜತೆಗೆ, ಮತದಾನ ಪ್ರಕ್ರಿಯೆಯಲ್ಲೂ ಸಾಕಷ್ಟು ನ್ಯೂನತೆಗಳು ಕಂಡು ಬಂದಿವೆ. ನಿರ್ಣಯದ ವಿರುದ್ಧ ಹಲವು ಮಾಲೀಕರು ಸಲ್ಲಿಸಿದ್ದ ಆಕ್ಷೇಪಣೆಗಳನ್ನೂ ಅಸೋಸಿಯೇಷನ್ ಪರಿಗಣಿಸಿಲ್ಲ. ಮೇಲಾಗಿ ಎಲ್ಲಾ ಫ್ಲ್ಯಾಟ್ ಮಾಲೀಕರು ಸಾಮಾನ್ಯ ಸೌಲಭ್ಯಗಳನ್ನು ಸಮಾನವಾಗಿ ಬಳಕೆ ಮಾಡುತ್ತಿರುವಾಗ ಹೆಚ್ಚು ಪ್ರದೇಶ ಹೊಂದಿದ್ದಾರೆಂಬ ಕಾರಣಕ್ಕೆ ಪ್ರದೇಶ ಆಧರಿಸಿ ನಿರ್ವಹಣಾ ಶುಲ್ಕ ವಿಧಿಸಲು ಸಾಧ್ಯವಾಗದು ಎಂದು ಆದೇಶಿಸಿದೆ. ಅಲ್ಲದೆ, ಫ್ಲ್ಯಾಟ್‌ದಾರರಿಗೆ ಅಗತ್ಯ ಮೂಲಸೌಕರ್ಯಗಳನ್ನು ಕಡಿತಗೊಳಿಸಬಾರದು ಎಂದು ಅಸೋಸಿಯೇಷನ್‌ಗೆ ನಿರ್ದೇಶನ ನೀಡಿದೆ.


ಕಾನೂನು ಬಾಹಿರ : ಈ ನಡುವೆ, ಲಿಫ್ಟ್, ಕ್ಲಬ್ ಹೌಸ್, ಭದ್ರತೆ ಸೇರಿದಂತೆ ಎಲ್ಲಾ ಮೂಲಸೌಕರ್ಯಗಳು ಎಲ್ಲಾ ಫ್ಲ್ಯಾಟ್ ಮಾಲೀಕರ ನಡುವೆ ಸಮಾನವಾಗಿ ಹಂಚಿಕೆಯಾಗುತ್ತವೆ. ಆದರೆ, ಫ್ಲ್ಯಾಟ್ ಪ್ರದೇಶದ ಆಧಾರದ ಮೇಲೆ ನಿರ್ವಹಣಾ ಶುಲ್ಕ ವಿಧಿಸುವುದು ಕಾನೂನುಬಾಹಿರ. ನಿಯಮಗಳನ್ನು ಉಲ್ಲಂಘಿಸಿ ವರ್ಚುವಲ್ ರೂಪದಲ್ಲಿ ಸಭೆ ನಡೆಸಿ ಬೈಲಾ ತಿದ್ದುಪಡಿಗೆ ಅನುಮೋದನೆ ನೀಡಲಾಗಿದೆ. ಇದು ಕಾಮನ್ ಏರಿಯಾ ಶುಲ್ಕ ಸಮಾನವಾಗಿ ಹಂಚಿಕೆಯಾಗಬೇಕು ಎಂಬ ನಿಯಮಕ್ಕೆ ವಿರುದ್ಧವಾಗಿದೆ. ಹಾಗಾಗಿ, ಅದನ್ನು ರದ್ದುಗೊಳಿಸಬೇಕು ಎಂದು ಅರ್ಜಿದಾರರು ನ್ಯಾಯಾಲಯವನ್ನು ಕೋರಿದ್ದರು.

ಆದರೆ, ಅದಕ್ಕೆ ಆಕ್ಷೇಪ ವ್ಯಕ್ತಪಡಿಸಿದ್ದ ಅಸೋಸಿಯೇಷನ್, ಸದಸ್ಯರ ನಡುವೆ ಸುದೀರ್ಘ ಸಮಾಲೋಚನೆ ಹಾಗೂ ಹಲವು ಸುತ್ತಿನ ಮತದಾನದ ನಂತರ ಹೈಬ್ರೀಡ್ ಮಾದರಿ ಅಳವಡಿಸಿಕೊಳ್ಳಲಾಗಿತ್ತು. ಆ ಕುರಿತು ಸರ್ವ ಸದಸ್ಯರ ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಗಿದ್ದು, ಅದಕ್ಕೆ ಎಲ್ಲರೂ ಬದ್ಧರಾಗಿರಬೇಕಾಗುತ್ತದೆ. ಆದರೆ, ಅರ್ಜಿದಾರರು ಕೆಲವು ಸಂಗತಿಗಳನ್ನು ಮುಚ್ಚಿಟ್ಟಿದ್ದಾರೆ ಎಂದು ಆರೋಪಿಸಿತ್ತು.

ಪ್ರಕರಣದ ಹಿನ್ನೆಲೆ : 660 ಫ್ಲ್ಯಾಟ್‌ಗಳನ್ನು ಒಳಗೊಂಡಿರುವ ನಗರದ ಪೂರ್ವ ಸೀಸನ್ಸ್ ಓನರ್ಸ್ ಅಸೋಸಿಯೇಷನ್ 2020 ರಲ್ಲಿ ಒಟ್ಟು ನಿರ್ವಹಣಾ ಶುಲ್ಕದಲ್ಲಿ ಹೆಚ್ಚಿನ ಸೂಪರ್ ಬಿಲ್ಟ್ ಅಪ್ ಪ್ರದೇಶ ಹೊಂದಿರುವ ಫ್ಲ್ಯಾಟ್ ಮಾಲೀಕರು ಶೇ.74ಕ್ಕೂ ಅಧಿಕ ಶುಲ್ಕ ಪಾವತಿಸಬೇಕು ಮತ್ತು ಉಳಿದ ಶೇ.25.9 ರಷ್ಟು ಶುಲ್ಕವನ್ನು ಕಡಿಮೆ ಪ್ರದೇಶ ಹೊಂದಿರುವವರ ನಡುವೆ ಸಮಾನವಾಗಿ ಹಂಚಿಕೆ ಮಾಡಲಾಗುವುದು ಎಂದು ನಿರ್ಣಯ ಅಂಗೀಕರಿಸಿತ್ತು. ಅದನ್ನು ರದ್ದುಗೊಳಿಸುವಂತೆ ಅರ್ಜಿದಾರರು ನ್ಯಾಯಾಲಯದ ಮೊರೆ ಹೋಗಿದ್ದರು.

ರೈತರ ಸೋಲಾರ್ ನೀರಾವರಿ ಪಂಪ್‌ಸೆಟ್‌ಗೆ ಶೇ.80ರಷ್ಟು ಸಬ್ಸಿಡಿ

ಕುಸುಮ್-ಬಿ ಯೋಜನೆ ಲಾಭ ಪಡೆಯಲು ಸೆಸ್ಕ್ ಮನವಿ





ರೈತರಿಗೆ ಹಗಲು ವೇಳೆಯಲ್ಲಿ ಸೋಲಾರ್ ಪಂಪ್‌ಸೆಟ್ ಮೂಲಕ ನೀರಾವರಿ ಸೌಕರ್ಯವನ್ನು ಒದಗಿಸುವಲ್ಲಿ ಕುಸುಮ್–ಬಿ ಯೋಜನೆ ಮಹತ್ವದ್ದಾಗಿದೆ. ಈ ಯೋಜನೆಯಲ್ಲಿ ರೈತರಿಗೆ ಶೇ.80 ಸಬ್ಸಿಡಿ ಸಿಗಲಿದೆ. ಈ ಯೋಜನೆ ಡಿಸೆಂಬರ್ ತಿಂಗಳಲ್ಲಿ ಕೊನೆಗೊಳ್ಳುವುದರಿಂದ ರೈತರು ಕೂಡಲೇ ಈ ಯೋಜನೆಯನ್ನು ಸದುಪಯೋಗ ಮಾಡಿಕೊಳ್ಳಬೇಕಿದೆ. -ಕೆ.ಎಂ.ಮುನಿಗೋಪಾಲ್ ರಾಜು, ವ್ಯವಸ್ಥಾಪಕ ನಿರ್ದೇಶಕರು, ಸೆಸ್ಕ್

ಮೈಸೂರು, ಡಿ.3– ಹಗಲು ವೇಳೆಯಲ್ಲಿ ನೀರಾವರಿಗೆ ವಿದ್ಯುತ್ ಸೌಕರ್ಯವನ್ನು ಒದಗಿಸುವ ಮಹತ್ವಾಕಾಂಕ್ಷಿ ಪಿಎಂ ಕುಸುಮ್–ಬಿ ಯೋಜನೆ ಯಡಿ ಸೋಲಾರ್ ಪಂಪ್–ಸೆಟ್‌ಗೆ ಶೆ.80ರಷ್ಟು ಸಬ್ಸಿಡಿ ದೊರೆಯಲಿದ್ದು, ಈ ಯೋಜನೆಯನ್ನು ಸದುಪಯೋಗಪಡಿಸಿಕೊಳ್ಳುವಂತೆ ಸೆಸ್ಕ್ ವ್ಯವಸ್ಥಾಪಕ ನಿರ್ದೇಶಕ ಕೆ.ಎಂ.ಮುನಿಗೋಪಾಲರಾಜು ಮನವಿ ಮಾಡಿದ್ದಾರೆ.

ಸೌರಶಕ್ತಿ ಬಳಕೆ ಹೆಚ್ಚಿಸಲು ಹಲವು ಕ್ರಮಗಳನ್ನು ಕೈಗೊಂಡಿರುವ ರಾಜ್ಯ ಸರ್ಕಾರವು ರೈತರು ಸೋಲಾರ್ ಪಂಪ್ ಸೆಟ್ ಅಳವಡಿಕೆ ಮಾಡಿಕೊಳ್ಳಲು 'ಕುಸುಮ್ ಬಿ' ಯೋಜನೆ ಅನುಷ್ಠಾನ ಗೊಳಿಸಿದೆ. ಈ ಯೋಜನೆಯಡಿ ರೈತರು ಸಬ್ಸಿಡಿ ದರದಲ್ಲಿ ಸೋಲಾರ್ ಪಂಪ್‌ಸೆಟ್ ಅಳವಡಿಕೆ ಮಾಡಿಕೊಳ್ಳಬಹುದು.

ಕುಸುಮ್–ಬಿ ಯೋಜನೆ ಅಡಿಯಲ್ಲಿ ನೀರಾವರಿಗೆ ಸಾಂಪ್ರದಾಯಿಕ ವಿದ್ಯುತ್ ಅವಲಂಬನೆಯನ್ನು ಕಡಿಮೆ ಮಾಡಿ, ಸೌರಶಕ್ತಿಯ ಬಳಕೆಯಿಂದ ರೈತರು ಸ್ವಾವಲಂಬನೆ ಸಾಧಿಸಲು ರೂಪಿಸಲಾಗಿದೆ ಸೌರಶಕ್ತಿ ಬಳಕೆಯ ಉತ್ತೇಜನಕ್ಕೆ ಶೇ.80ರಷ್ಟು ಸಹಾಯಧನ ನೀಡಲಾಗುತ್ತಿದೆ. ಕುಸುಮ್–ಬಿ ಯೋಜನೆಯಡಿ ಜಾಲಮುಕ್ತ ಸೌರ ಕೃಷಿ ಪಂಪ್‌ಸೆಟ್ ಅಳವಡಿಸಲು ಒತ್ತು ನೀಡಲಾಗಿದೆ. ಈ ಯೋಜನೆಯಡಿ ರಾಜ್ಯ ಸರ್ಕಾರ ಶೇ.50, ಕೇಂದ್ರ ಸರ್ಕಾರ ಶೇ.30 ಮತ್ತು ಫಲಾನುಭವಿಗಳು ಶೇ.20 ಮೊತ್ತವನ್ನು ಪಾವತಿಸಬೇಕಿದೆ.

ರಾಜ್ಯದಲ್ಲಿ MNRE ಮತ್ತು KREDL ಸಹಯೋಗದೊಂದಿಗೆ ರೈತರ ಜಮೀನಿನ ಕೊಳವೆ/ತೆರೆದ ಬಾವಿಗಳಿಗೆ ಸೋಲಾರ್ ಪಂಪ್‌ಸೆಟ್‌ಗಳನ್ನು ಅಳವಡಿಸಲು ರೈತರಿಂದ ಅರ್ಜಿಗಳನ್ನು ಆನ್‌ಲೈನ್ ಮೂಲಕವಾಗಿ www.souramitra.com ವೆಬ್‌ಸೈಟ್‌ನಲ್ಲಿ ನೋಂದಣಿಗೆ ಅವಕಾಶ ಕಲ್ಪಿಸಲಾಗಿದೆ.

ಸದರಿ ಪೋರ್ಟಲ್ ಮೂಲಕ ಸೋಲಾರ್ ಪಂಪ್‌ಸೆಟ್‌ಗಳ ಅಳವಡಿಕೆಗಾಗಿ ರೈತರು www.souramitra.com ಪೋರ್ಟಲ್‌ನಲ್ಲಿ ಅರ್ಜಿ ನೋಂದಾಯಿಸಿ, ವೆಂಡರ್/ಏಜೆನ್ಸಿಯನ್ನು ಆಯ್ಕೆ ಮಾಡಿಕೊಂಡು, ಶೇ.20 ಹಣವನ್ನು ಪಾವತಿಸಬೇಕಿದೆ.

ಪಿಎಂ ಕುಸುಮ್–ಬಿ ಯೋಜನೆಗೆ ಸಂಬಂಧಿಸಿದಂತೆ, www.kreld.karnataka.gov.in ವೆಬ್‌ಸೈಟ್‌ನಲ್ಲಿ ಹೊರಡಿಸಿದ ಪ್ರಕಟಣೆ/ಮಾಹಿತಿಗಳನ್ನು ಮಾತ್ರ ಪರಿಗಣಿಸಲು ಕೋರಲಾಗಿದೆ. ಸೌರ ಪಂಪ್‌ಸೆಟ್ ನೋಂದಣಿ ಹಾಗೂ ಪಾವತಿಗೆ ಸಂಬಂಧಿಸಿದಂತೆ www.souramitra.com ನಲ್ಲಿ ಹಾಗೂ KREDLನ ಸಹಾಯ ವಾಣಿ 080–22202100/8095132100 ಮುಖಾಂತರ ಅಥವಾ ಹತ್ತಿರದ ಚಾವಿಸನಿನಿ ಕಚೇರಿ/ಅಧಿಕಾರಿಗಳನ್ನು ಸಂಪರ್ಕಿಸಬಹುದು. ಸದರಿ ನೋಂದಣಿ ಪ್ರಕ್ರಿಯೆಯಲ್ಲಿ ಸ್ವೀಕೃತವಾಗುವ OTPಗಳನ್ನು ಯಾರೊಂದಿಗೂ ಹಂಚಿಕೊಳ್ಳದೆ ತಾವೇ ನೋಂದಾಯಿಸಿಕೊಳ್ಳಲು ಕೋರಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ (ಚಾವಿಸನಿನಿ) ದೂರವಾಣಿ ಸಂಖ್ಯೆ 9449598669 ಸಂಪರ್ಕಿಸಬಹುದಾಗಿದೆ.

ಶ್ರೀರಂಗಪಟ್ಟಣ ತಾಲೂಕು ವ್ಯಾಪ್ತಿ ಕಾವೇರಿ ದಡದ ಅಕ್ರಮ ಹೋಟೆಲ್, ರೆಸಾರ್ಟ್ ಸೇರಿ ಇನ್ನಿತರೆ ಕಟ್ಟಡ ತೆರವಿಗೆ ಉಪಲೋಕಾಯುಕ್ತ ಆದೇಶ

ನದಿಯ ಬಫರ್‌ಜೋನ್‌ನೊಂದಿಗೆ ಹೈಫ್ಲಡ್ ಬೌಂಡರಿ ಫಿಕ್ಸ್ ಮಾಡುವಂತೆ ಅಧಿಕಾರಿಗಳಿಗೆ ತಾಕೀತು



ಸಂಗ್ರಹ ಚಿತ್ರ

ಬೆಂಗಳೂರು, ಡಿ. 3– ಶ್ರೀರಂಗಪಟ್ಟಣ ತಾಲೂಕಿನ ವ್ಯಾಪ್ತಿಯ ಕಾವೇರಿ ನದಿ ದಡದಲ್ಲಿ ಅಕ್ರಮವಾಗಿ ತಲೆ ಎತ್ತಿರುವ ಹೋಟೆಲ್‌ಗಳು, ರೆಸಾರ್ಟ್‌ಗಳು ಹಾಗೂ ಕಟ್ಟಡಗಳನ್ನು ತೆರವುಗೊಳಿಸಿ ಬಫರ್‌ಝೋನ್‌ಗೆ ಹೈಫ್ಲಡ್ ಬೌಂಡರಿ ಫಿಕ್ಸ್ ಮಾಡಬೇಕೆಂದು ಉಪಲೋಕಾಯುಕ್ತ ಬಿ. ವೀರಪ್ಪ ಅವರು ಮಂಡ್ಯ ಜಿಲ್ಲೆ ಕಂದಾಯ ಇಲಾಖೆ ಅಧಿಕಾರಿಗಳು ಹಾಗೂ ಕಾವೇರಿ ನೀರಾವರಿ ನಿಗಮದ ಅಧಿಕಾರಿಗಳು ಮತ್ತು ಪ್ರವಾಸೋದ್ಯಮ ಇಲಾಖೆ ಉಪನಿರ್ದೇಶಕರಿಗೆ ಆದೇಶ ನೀಡಿದ್ದಾರೆ.

ಕಳೆದ ಮೇ 27ರಂದು ಶ್ರೀರಂಗಪಟ್ಟಣಕ್ಕೆ ಭೇಟಿ ನೀಡಿದ್ದ ಉಪಲೋಕಾಯುಕ್ತರು, ಕಾವೇರಿ ನದಿ ದಡದ ವಿವಿಧ ಪ್ರದೇಶಗಳಿಗೆ ಭೇಟಿ ನೀಡಿ, ಒತ್ತುವರಿಯಾಗಿರುವುದನ್ನು ಪ್ರತ್ಯಕ್ಷವಾಗಿ ನೋಡಿದ್ದರು. ಅಲ್ಲದೇ ಸಾರ್ವಜನಿಕರಿಂದ ಈ ಸಂಬಂಧ ದೂರುಗಳನ್ನು ಪಡೆದಿದ್ದರು. ಜೊತೆಗೆ ಶ್ರೀರಂಗಪಟ್ಟಣ ತಹಸೀಲ್ದಾರ್ ಮತ್ತು ಕಾವೇರಿ ನೀರಾವರಿ ನಿಗಮದ ಅಧಿಕಾರಿಗಳಿಂದ ವರದಿಯನ್ನು ಕೇಳಿದ್ದರು.

ಅಕ್ರಮ ಅನ್ಯಕ್ರಾಂತ: ಈ ಹಿನ್ನೆಲೆಯಲ್ಲಿ ಕಳೆದ ಅಕ್ಟೋಬರ್ 8ರಂದು ಶ್ರೀರಂಗಪಟ್ಟಣ ತಹಶೀಲ್ದಾರ್ ಚೇತನಾ ಯಾದವ್ ಮತ್ತು ಕಾವೇರಿ ನೀರಾವರಿ ನಿಗಮದ ಇಂಜಿನಿಯರ್ ವಿ. ಜಯಂತ್ ನೇತೃತ್ವದಲ್ಲಿ ಬಂಗಾರದೊಡ್ಡಿ ನಾಲೆ ಮಾರ್ಗದಲ್ಲಿ ಕಾವೇರಿ ನದಿಯ ಖರಾಬು ಜಾಗದಲ್ಲಿ ನಿರ್ಮಿಸಿದ್ದ ಖಾಸಗಿ ರೆಸಾರ್ಟ್ ಹಾಗೂ ವಾಣಿಜ್ಯ ಕಟ್ಟಡಗಳನ್ನು ತೆರವುಗೊಳಿಸಲಾಗಿತ್ತು. ಜೊತೆಗೆ ಕಾವೇರಿ ನದಿಯ ಖರಾಬು ಜಾಗದ ಕೆಲವು ಭಾಗಗಳನ್ನು ಖಾಸಗಿ ವ್ಯಕ್ತಿಗಳಿಗೆ ವಿವಿಧ ಇಲಾಖೆಗಳಿಂದ ಲೀಸ್‌ಗೆ ನೀಡಲಾಗಿದೆ. ನಗರಾಭಿವೃದ್ಧಿಯು ಖರಾಬು ಜಾಗದ ಕೆಲ ಪ್ರದೇಶಗಳನ್ನು ಖಾಸಗಿ ವ್ಯಕ್ತಿಗಳಿಗೆ ಅನ್ಯಕ್ರಾಂತ ಮಾಡಿಕೊಟ್ಟಿದ್ದು, ಶ್ರೀರಂಗಪಟ್ಟಣ ಪುರಸಭೆ ಕಟ್ಟಡ ನಿರ್ಮಾಣಕ್ಕೆ ಪರವಾನಗಿಯನ್ನು ನೀಡಿದೆ ಎಂದು ತಹಶೀಲ್ದಾರರು ಉಪಲೋಕಾಯುಕ್ತರಿಗೆ ನೀಡಿದ ವರದಿಯಲ್ಲಿ ತಿಳಿಸಿದ್ದರು.

ಈ ಹಿನ್ನೆಲೆಯಲ್ಲಿ ಒತ್ತುವರಿ ತೆರವಿಗೆ ಸಂಬಂಧಪಟ್ಟಂತೆ ಉಪಲೋಕಾಯುಕ್ತರು ಕಾವೇರಿ ನೀರಾವರಿ ನಿಗಮದ ಅಧಿಕಾರಿಗಳು, ಶ್ರೀರಂಗಪಟ್ಟಣ ತಾಲೂಕು ಭೂದಾಖಲೆಗಳ ಇಲಾಖೆಯ ಸಹಾಯಕ ನಿರ್ದೇಶಕರು, ತಹಸೀಲ್ದಾರರು, ಪುರಸಭೆ ಮುಖ್ಯಾಧಿಕಾರಿ ಮತ್ತು ಪ್ರವಾಸೋದ್ಯಮ ಇಲಾಖೆಯ ಉಪನಿರ್ದೇಶಕರಿಗೆ ವಿವರವಾದ ಆದೇಶ ನೀಡಿದ್ದಾರೆ.

ಬೌಂಡರಿ ಫಿಕ್ಸ್ ಮಾಡಿ: ಚಂದ್ರವನ ಆಶ್ರಮದ ಬಂಗಾರದೊಡ್ಡಿ ಡ್ಯಾಂ ರಸ್ತೆಯಲ್ಲಿ ಕಾವೇರಿ ನದಿಗೆ ಹೊಂದಿಕೊಂಡಂತಿರುವ ಸರ್ವೆ ನಂಬರ್ 174 ಹಾಗೂ ನದಿಯ ಸುತ್ತಮುತ್ತಲಿರುವ ಹೋಟೆಲ್‌ಗಳು, ರೆಸಾರ್ಟ್‌ಗಳು ಹಾಗೂ ಇನ್ನಿತರೆ ಕಟ್ಟಡಗಳನ್ನು ಕಾವೇರಿ ನದಿಯ ಹೈಫ್ಲಡ್ ಲೆವೆಲ್ ಜಾಗದಿಂದ 30 ಮೀಟರ್ ಬಫರ್‌ಝೋನ್ ಬಿಡದೆ ಅನಧಿಕೃತವಾಗಿ ನಿರ್ಮಿಸಲಾಗಿದೆ. ಈ ಕಟ್ಟಡಗಳ ನಿರ್ಮಾಣಕ್ಕೆ ಪರವಾನಗಿಯನ್ನೂ ಪಡೆದಿಲ್ಲ ಎಂದು ಶ್ರೀರಂಗಪಟ್ಟಣ ತಹಸೀಲ್ದಾರ್ ತಮ್ಮ ವರದಿಯಲ್ಲಿ ತಿಳಿಸಿರುವುದನ್ನು ಉಲ್ಲೇಖಿರುವ ಉಪಲೋಕಾಯುಕ್ತರು, ಕೂಡಲೇ ನದಿಯ ಬಫರ್‌ಝೋನ್ ಗುರುತಿಸಿ, ಬೌಂಡರ್ ಫಿಕ್ಸ್ ಮಾಡಿ ಒತ್ತುವರಿಯನ್ನು ತೆರವುಗೊಳಿಸಬೇಕು ಎಂದು ಶ್ರೀರಂಗಪಟ್ಟಣ ತಹಸೀಲ್ದಾರ್, ಕಾವೇರಿ ನೀರಾವರಿ ನಿಗಮದ ಅಧಿಕಾರಿಗಳು ಹಾಗೂ ಪರಿಸರ ಅಧಿಕಾರಿಗಳಿಗೆ ಆದೇಶ ನೀಡಿದ್ದಾರೆ.

ಪ್ರಾಣಿ–ಪಕ್ಷಿಗಳಿಗೆ ಕಂಟಕ: ನದಿಯ ಸುತ್ತಮುತ್ತಲಿನ ಬಾರ್‌ಗಳು ಹಾಗೂ ಹೋಟೆಲ್‌ಗಳಲ್ಲಿ ಪಟಾಕಿ ಸಿಡಿಸುತ್ತಿದ್ದಾರೆ ಮತ್ತು ಅತೀ ಜೋರಾಗಿ ಡಿಜೆ ಸೌಂಡ್ ಅನ್ನು ಹಾಕಿಕೊಂಡು ಮೋಜು ಮಸ್ತಿ ಮಾಡುತ್ತಿರುವುದರಿಂದ. ಶಬ್ಧ ಮಾಲಿನ್ಯ ಉಂಟಾಗಿ ಪಕ್ಕದಲ್ಲೇ ಇರುವ ಸುಪ್ರಸಿದ್ಧ ಪಕ್ಷಿಧಾಮದಲ್ಲಿರುವ ಪಕ್ಷಿಗಳಿಗೆ ಹಾಗೂ ಪಾಂಡವಪುರ ತಾಲೂಕಿನ ಪುಟ್ಟಯ್ಯನ ಕೊಪ್ಪಲಿನಲ್ಲಿರುವ ಗೂಳಿತಿಟ್ಟು ಸ್ಥಳದಲ್ಲಿನ ಪ್ರಾಣಿ–ಪಕಿಗಳಿಗೆ ತೊಂದರೆ ಉಂಟಾಗುತ್ತಿದೆ. ಇದಲ್ಲದೇ ಬಲಮುರಿಯಲ್ಲಿ ಯಾವುದೇ ಪರವಾನಗಿ ಇಲ್ಲದೇ ಹೋಟೆಲ್‌ಗಳು ಹಾಗೂ ಬಾರ್ ಅಂಡ್ ರೆಸ್ಟೋರೆಂಟ್‌ಗಳನ್ನು ನಡೆಸಲಾಗುತ್ತಿದೆ. ಇಲ್ಲಿಗೆ ಹೊರ ರಾಜ್ಯ ಹಾಗೂ ಹೊರ ಜಿಲ್ಲೆಗಳಿಂದ ಬರುವ ಶಾಲಾ ಮಕ್ಕಳು ಮತ್ತು ಕಾಲೇಜು ವಿದ್ಯಾರ್ಥಿಗಳು ಯಾವುದೇ ಎಗ್ಗಿಲ್ಲದೇ ಮೋಜು ಮಸ್ತಿ ಮಾಡುತ್ತಿರುವುದಲ್ಲದೆ. ಕೆಲವು ವೀಡಿಯೊ ಕ್ಲಿಪ್ಪಿಂಗ್‌ಗಳೊಂದಿಗೆ ಪತ್ರಕರ್ತ ವಿನಯ್ ಕಾರೇಕುರ ಆರೋಪಿಸಿದ್ದನ್ನು ಉಲ್ಲೇಖಿಸಿರುವ ಉಪಲೋಕಾಯುಕ್ತರು ಈ ಸಂಬಂಧ ಕ್ರಮ ಕೈಗೊಳ್ಳುವಂತೆ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಎಸ್ಪಿಯವರಿಗೆ ಆದೇಶ ನೀಡಿದ್ದಾರೆ.

ಪರವಾನಗಿ ನೀಡಿದವರ್‍ಯಾರು: ಶ್ರೀರಂಗಪಟ್ಟಣ ಕಸಬಾ ಹೋಬಳಿ ಸರ್ವೆ ನಂಬರ್ 164ರಿಂದ 178ರವರೆಗೆ ಇರುವ ಜಾಗಗಳಲ್ಲಿ ಈಗಾಗಲೇ ಕೆಲವು ಕಟ್ಟಡಗಳು ತಲೆ ಎತ್ತಿದ್ದು, ಅವುಗಳ ನಿರ್ಮಾಣಕ್ಕೆ ಮುನ್ನ ನಗರಾಭಿವೃದ್ಧಿ ಇಲಾಖೆಯಿಂದ ಅನ್ಯಕ್ರಾಂತ ಪಡೆದುಕೊಂಡಿದ್ದು, ನಕ್ಷೆ ಅನುಮೋದನೆ, ಕಟ್ಟಡ ಪರವಾನಗಿ, ಹೋಟೆಲ್ ನಡೆಸಲು ವ್ಯಾಪಾರ ಪರವಾನಗಿಯನ್ನು ಶ್ರೀರಂಗಪಟ್ಟಣ ಪುರಸಭೆ ನೀಡಿರುವ ಅನುಮತಿ ಪತ್ರಗಳು ಹಾಗೂ ಇತರೆ ದಾಖಲೆಗಳನ್ನು ಪರಿಶೀಲಿಸಿ, ನಿಯಮ ಉಲ್ಲಂಘಿಸಿರುವವರ ವಿರುದ್ಧ ಕ್ರಮ ಕೈಗೊಳ್ಳುವಂತೆ ತಹಶೀಲ್ದಾರರಿಗೆ ಆದೇಶಿಸಿದ್ದಾರೆ.

ನದಿಯ ನೈಸರ್ಗಿಕ ಹರಿವಿನ ದಿಕ್ಕನ್ನು ಬದಲಿಸಬಾರದು ಎಂದು ಸುಪ್ರೀಂಕೋರ್ಟ್ ಆದೇಶವಿದ್ದರೂ, ಕೆಲವೆಡೆ ಅಕ್ರಮ ಕಟ್ಟಡಗಳನ್ನು ನಿರ್ಮಿಸಿ ನೈಸರ್ಗಿಕವಾಗಿ ಹರಿಯಬೇಕಾದ ಕಾವೇರಿ ನದಿಯ ದಿಕ್ಕನ್ನೇ ಬದಲಿಸಿರುವುದು ಕಂಡುಬಂದಿದೆ. ಹೀಗಾಗಿ ಸಂಬಂಧಪಟ್ಟ ಇಲಾಖೆಗಳು ಪರಿಶೀಲಿಸಿ ನಿಯಮ ಉಲ್ಲಂಘಿಸಿರುವವರ ವಿರುದ್ಧ ಕಾನೂನು ಕ್ರಮ ಕೈಗೊಂಡು ಆ ಪ್ರದೇಶದಲ್ಲಿರುವ ಹಿಡುವಳಿ ಜಮೀನಿನ ಬಗ್ಗೆ ಸಂಪೂರ್ಣ ವರದಿಯನ್ನು ನೀಡುವಂತೆ ತಹಸೀಲ್ದಾರ್‌ರಿಗೆ ಆದೇಶಿಸಿದ್ದಾರೆ.

ಕಾವೇರಿ ದಡದಲ್ಲಿ ಬಾರ್, ಹೋಟೆಲ್ ಬಂದಿದ್ದೇಗೆ: ಕಾವೇರಿ ನದಿ ದಡದ ಪ್ರವಾಸೋದ್ಯಮ ಸ್ಥಳದಲ್ಲಿ ಬಾರ್‌ಗಳು ಹಾಗೂ ಹೋಟೆಲ್‌ಗಳನ್ನು ತೆರೆಯಲು ಪ್ರವಾಸೋದ್ಯಮ ಇಲಾಖೆಯಿಂದ ಅನುಮತಿ ಪಡೆಯಲಾಗಿದೆಯೇ ಎಂಬುದನ್ನು ಪರಿಶೀಲಿಸಿ ಕ್ರಮ ಕೈಗೊಳ್ಳಬೇಕು. ಕಾವೇರಿ ನದಿ ದಡದ ಜಮೀನುಗಳಿಗೆ ಸಂಬಂಧಿಸಿದಂತೆ ಹಾಲಿ ಪಹಣಿ ಇನ್ನಿತರ ದಾಖಲೆಗಳು ಇರುವ ವ್ಯಕ್ತಿಗಳಿಗೆ ಅದು ಹೇಗೆ ಬಂತು ಎಂಬುದರ ಬಗ್ಗೆ ಪರಿಶೀಲಿಸಿ, ಪೂರಕ ದಾಖಲೆಗಳೊಂದಿಗೆ ವರದಿ ಸಲ್ಲಿಸಬೇಕೆಂದು ತಹಶೀಲ್ದಾರ್ ಹಾಗೂ ಎಡಿಎಲ್‌ಆರ್ ಅವರಿಗೆ ಆದೇಶ ನೀಡಿದ್ದಾರೆ.

ಕೊಪ್ಪ ಗ್ರಾಪಂ ಆವರಣದಲ್ಲಿ ಜನಸ್ಪಂದನಾ ಸಭೆ: ಎರಡೂವರೆ ವರ್ಷದಲ್ಲಿ

ಮಂಡ್ಯ ಜಿಲ್ಲೆ ಅಭಿವೃದ್ಧಿಗೆ 10 ಸಾವಿರ ಕೋಟಿ ಅನುದಾನ

ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ



ಕೊಪ್ಪ ಗ್ರಾಪಂ ಆವರಣದಲ್ಲಿ ಜನಸ್ಪಂದನಾ ಕಾರ್ಯಕ್ರಮ ನಡೆಯಿತು.

ಮದ್ದೂರು, ಡಿ.3– ರಾಜ್ಯ ಸರ್ಕಾರ ಅಧಿಕಾರಕ್ಕೆ ಬಂದ ಎರಡೂವರೆ ವರ್ಷಗಳಲ್ಲಿ ಮಂಡ್ಯ ಜಿಲ್ಲೆ ಸಮಗ್ರ ಅಭಿವೃದ್ಧಿಗೆ 10 ಸಾವಿರ ಕೋಟಿಗೂ ಹೆಚ್ಚು ಅನುದಾನ ತರಲಾಗಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ತಿಳಿಸಿದರು.

ಜಿಲ್ಲಾಡಳಿತ, ಜಿಪಂ ವತಿಯಿಂದ ಕೊಪ್ಪ ಗ್ರಾಪಂ ಆವರಣದಲ್ಲಿ ಬುಧವಾರ ನಡೆದ ಜನಸ್ಪಂದನಾ ಹಾಗೂ 140 ಕೋಟಿ ವೆಚ್ಚದ ವಿವಿಧ ಕಾಮಗಾರಿಗಳ ಶಂಕುಸ್ಥಾಪನಾ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಗ್ಯಾರಂಟಿ ಯೋಜನೆಗಳನ್ನು ವಿರೋಧಿಸಿದವರು ಇಂದು ರಾಷ್ಟ್ರ ಮಟ್ಟದಲ್ಲಿ ಗ್ಯಾರಂಟಿ ಯೋಜನೆಗಳನ್ನು ಘೋಷಿಸಿದ್ದಾರೆ. ಆದರೆ ರಾಜ್ಯದಲ್ಲಿ ಗ್ಯಾರಂಟಿ ಯೋಜನೆಗಳನ್ನು ಸಮರ್ಪಕವಾಗಿ ನೀಡಿದಷ್ಟು ಇನ್ಯಾವುದೇ ರಾಜ್ಯಗಳಲ್ಲಿ ನೀಡಿಲ್ಲ ಎಂದರು.

ಪಂಚ ಗ್ಯಾರಂಟಿಗಳ ಮೂಲಕ ಪ್ರತಿ ತಾಲೂಕಿಗೆ ವಾರ್ಷಿಕ 250 ಕೋಟಿ ಅನುದಾನ ನೀಡಲಾಗುತ್ತಿದೆ. ಮುಂದಿನ ದಿನಗಳಲ್ಲೂ ಗ್ಯಾರಂಟಿ ಯೋಜನೆ ಮುಂದುವರೆಯುತ್ತದೆ. ಮುಂಬರುವ 2028ರ ವಿಧಾನಸಭಾ ಚುನಾವಣೆಯಲ್ಲೂ ನಮ್ಮ ಪಕ್ಷದ ಪ್ರಣಾಳಿಕೆಯಲ್ಲಿ ಪಂಚ ಗ್ಯಾರಂಟಿಗಳನ್ನು ಘೋಷಿಸಲಾಗುವುದು ಎಂದರು.

ಕೃಷಿ ಇಲಾಖೆಯಿಂದ ಈ ವರ್ಷದ ಏಪ್ರಿಲ್‌ನಿಂದ ಇಲ್ಲಿವರೆಗೆ ಕೊಪ್ಪ ಹೋಬಳಿಯ 520 ಫಲಾನುಭವಿಗಳಿಗೆ 150 ಲಕ್ಷ ರೂ. ಸಹಾಯಧನ ನೀಡಲಾಗಿದೆ. ಜಿಲ್ಲೆಯ 49,330 ಫಲಾನುಭವಿಗಳಿಗೆ ಕೃಷಿ ಇಲಾಖೆಯ ವಿವಿಧ ಯೋಜನೆಗಳಡಿ 2390.80 ಲಕ್ಷಗಳ ಸಹಾಯಧನ ನೀಡಲಾಗಿದೆ. ಒಬ್ಬರಿಗೆ ಸುಮಾರು 50 ಲಕ್ಷದವರೆಗೂ ಸಬ್ಸಿಡಿ ನೀಡಲಾಗಿದೆ ಎಂದರು.

ಕೊಪ್ಪ ಹೋಬಳಿಯಲ್ಲಿ ಇಲ್ಲಿವರೆಗೆ 1300 ಹೊಸ ಪೌತಿ ಖಾತೆ, 5800 ಹಳೇ ಪೌತಿ ಖಾತೆ ಹಾಗೂ 150 ಪೋಡಿಗಳನ್ನು ಆಂದೋಲನದ ಮೂಲಕ ಮಾಡಲಾಗಿದೆ. ಜಿಲ್ಲೆಯ 18031 ಕಂದಾಯ ಇಲಾಖೆಯ ದಾಖಲೆ ಹಾಳೆಗಳನ್ನು ಈಗಾಗಲೇ ಸ್ಕ್ಯಾನ್ ಮಾಡಲಾಗಿದೆ. 33 ಸಾವಿರ ಕಂದಾಯ ಪ್ರಕರಣ ಇತ್ಯರ್ಥಪಡಿಸಲಾಗಿದೆ ಎಂದರು.

ನಮ್ಮ ಸರ್ಕಾರ ಅಸ್ತಿತ್ವಕ್ಕೆ ಬಂದ ಬಳಿಕ ಕೊಪ್ಪ ಹೋಬಳಿ ಅಭಿವೃದ್ಧಿಗೆ 400 ಕೋಟಿ ಅನುದಾನ ಬಿಡುಗಡೆ ಮಾಡಲಾಗಿದೆ. ಕೊಪ್ಪದಲ್ಲಿ ನಾಡಕಚೇರಿ ತೆರೆಯಲು 45 ಲಕ್ಷ ಮಂಜೂರು ಮಾಡಲಾಗಿದೆ. ಶೀಘ್ರ ಕಾಮಗಾರಿ ಪ್ರಾರಂಭವಾಗುತ್ತದೆ ಎಂದರು.

ಜಿಲ್ಲೆಯ ರೈತರ ಬೇಡಿಕೆಗೆ ಸ್ಪಂದಿಸಿ ಮುಂದಿನ ಸೋಮವಾರದಿಂದ ಜಿಲ್ಲೆಯಲ್ಲಿ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಭತ್ತ ಮತ್ತು ರಾಗಿ ಖರೀದಿ ಪ್ರಾರಂಭಿಸಲಾಗುವುದು ಎಂದರು.

ಎಂಎಲ್‌ಸಿ ದಿನೇಶ್ ಗೂಳಿಗೌಡ ಮಾತನಾಡಿ, 3500 ಕೋಟಿ ಅನುದಾನವನ್ನು ಜಿಲ್ಲೆಯ ನೀರಾವರಿ ಅಭಿವೃದ್ಧಿಗೆ ಕೃಷಿ ಸಚಿವರು ತಂದಿದ್ದಾರೆ. ಜಿಲ್ಲೆಯ ಇತಿಹಾಸದಲ್ಲೇ ಯಾರು ನೀರಾವರಿ ಅಭಿವೃದ್ಧಿಗೆ ಇಷ್ಟು ಅನುದಾನ ತಂದಿಲ್ಲ. ಕೊಪ್ಪ ಭಾಗದ ವಿವಿಧ ಕಾಮಗಾರಿಗಳಿಗೆ 137.99 ಕೋಟಿ ಅನುದಾನ ಬಿಡುಗಡೆ ಮಾಡಿದ್ದಾರೆ ಎಂದರು.

ಅರ್ಜಿ ಸ್ವೀಕಾರ: ಕೊಪ್ಪ ಹೋಬಳಿ 8 ಗ್ರಾಪಂಗಳಿಂದ ಆಗಮಿಸಿದ್ದ ಸಾರ್ವಜನಿಕರು ಮತ್ತು ರೈತರಿಂದ ಕಂದಾಯ ಇಲಾಖೆಗೆ 90, ಗ್ರಾಮೀಣಾಭಿವೃದ್ಧಿಗೆ 54, ಆಹಾರ ಇಲಾಖೆಗೆ 1, ಸಾರಿಗೆ ಇಲಾಖೆಗೆ 1, ಇಂಧನ ಇಲಾಖೆಗೆ 10, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಗೆ 8, ಕಾವೇರಿ ನೀರಾವರಿ ನಿಗಮಕ್ಕೆ 3 ಅರ್ಜಿಗಳು ಸೇರಿದಂತೆ 191 ಅರ್ಜಿಗಳನ್ನು ಸ್ವೀಕರಿಸಲಾಯಿತು.

ಈ ವೇಳೆ ಡಿಸಿಸಿ ಬ್ಯಾಂಕ್ ಅಧ್ಯಕ್ಷ ಸಚಿನ್, ನಿರ್ದೇಶಕ ಕೆ.ಸಿ.ಜೋಗಿಗೌಡ, ರಾಜ್ಯ ಸಣ್ಣ ಕೈಗಾರಿಕೆಗಳ ಉಪಾಧ್ಯಕ್ಷೆ ವಿಜಯಲಕ್ಷ್ಮಿ, ಜಿಲ್ಲಾಧಿಕಾರಿ ಡಾ.ಕುಮಾರ, ಜಿಪಂ ಸಿಇಓ ಕೆ.ಆರ್.ನಂದಿನಿ, ಎಸಿ ಶಿವಮೂರ್ತಿ, ತಹಸೀಲ್ದಾರ್ ಪರಶು ರಾಮ್ ಸತ್ತಿಗೆರೆ, ತಾಪಂ ಇಓ ರಾಮಲಿಂಗಯ್ಯ, ಕೃಷಿ ಇಲಾಖೆ ಜಂಟಿ ನಿರ್ದೇಶಕ ಅಶೋಕ್, ಕಾವೇರಿ ನೀರಾವರಿ ನಿಗಮದ ರಘುರಾಮ್, ಗ್ರಾಪಂ ಅಧ್ಯಕ್ಷ ಸಂತೋಷ್ ಕೊಟ್ಟಿಗೆಯಾರ್, ಸದಸ್ಯರಾದ ಪರ್ವಿಜ್ ಅಹಮದ್, ಕುಮಾರ್ ಕೊಪ್ಪ, ನಾಗ ಮಂಗಲ ಗ್ರಾಮಾಂತರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕೆ.ಎನ್.ದಿವಾಕರ್, ತಾಪಂ ಮಾಜಿ ಉಪಾಧ್ಯಕ್ಷ ಬೆಕ್ಕಳಲೆ ರಘು, ಮುಖಂಡರಾದ ತಮ್ಮಯ್ಯ, ಕ್ರಾಂತಿಸಿಂಹ ಇತರರಿದ್ದರು.

ಸಚಿವ ಸಿಆರ್‌ಎಸ್ ಭಾವುಕ

ನಾವು ಎಷ್ಟೇ ಪ್ರಾಮಾಣಿಕವಾಗಿ ಜನರ ಸಮಸ್ಯೆಗಳನ್ನು ಆಲಿಸಿ ಪರಿಹರಿಸುವ ನಿಟ್ಟಿನಲ್ಲಿ ಕೆಲಸ ಮಾಡಿದರೂ ಕೆಲವರಿಗೆ ತೃಪ್ತಿಯೇ ಇಲ್ಲ. ಈ ಹಿಂದಿನ ಸರ್ಕಾರ ಕಳೆದ 5 ವರ್ಷದಲ್ಲಿ ಮಾಡಿದ ಅಭಿವೃದ್ಧಿ ಕೆಲಸ ಮತ್ತು ನಮ್ಮ ಸರ್ಕಾರದ ಎರಡೂವರೆ ವರ್ಷದಲ್ಲಿ ಕೈಗೊಳ್ಳಲಾದ ಅಭಿವೃದ್ಧಿ ಕೆಲಸಗಳನ್ನು ಅವಲೋಕಿಸಿ ನೋಡಿ ಯಾರೂ ಎಷ್ಟು ಕೆಲಸ ಮಾಡಿದ್ದಾರೆ ಎಂಬ ಬಗ್ಗೆ ನಿಮಗೆ ಸ್ಪಷ್ಟತೆ ದೊರೆಯುತ್ತದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎನ್. ಚಲುವರಾಯಸ್ವಾಮಿ ತಿಳಿಸಿದರು.

2018ರಲ್ಲಿ ಅಧಿಕಾರಕ್ಕೆ ಬಂದ ಸಮ್ಮಿಶ್ರ ಸರ್ಕಾರದಲ್ಲಿ ಸಿಎಂ ಆಗಿದ್ದ ಕುಮಾರಸ್ವಾಮಿ ಅವರು ರೈತರ ಸಾಲ ಮನ್ನಾ ಮಾಡಿದ್ದರು. ಆದರೆ ಇಂದಿಗೂ ಎಷ್ಟೋ ರೈತರ ಸಾಲ ಮನ್ನಾ ಆಗಿಲ್ಲ. ಜೊತೆಗೆ ಅವರ ಸರ್ಕಾರದಲ್ಲಿ ಮನ್ನಾ ಮಾಡಿದ ಸಾಲದ ಮೊತ್ತ ನಮ್ಮ ಸರ್ಕಾರ ಪಾವತಿಸುತ್ತಿದೆ. ಇಲ್ಲಿವರೆಗೆ 480 ಕೋಟಿ ಸಾಲ ಪಾವತಿಸಿದೆ. ಇನ್ನೂ 400ರಿಂದ 500 ಕೋಟಿ ಬಾಕಿ ಉಳಿದಿದೆ ಎಂದರು.

ನಾನು 4 ಬಾರಿ ಶಾಸಕನಾಗಿ ಹಾಗೂ ಒಂದು ಬಾರಿ ಸಂಸದನಾಗಿ ಸೇವೆ ಸಲ್ಲಿಸಿದ್ದೇನೆ. ನಾಗಮಂಗಲದಿಂದ ಶಾಸಕ ಸ್ಥಾನಕ್ಕೆ 2018ರಲ್ಲಿ ಸ್ಪರ್ಧಿಸಿದಾಗ ಜನರು 50 ಸಾವಿರ ಮತಗಳಿಂದ ಸೋಲಿಸಿದರು. ಕ್ಷೇತ್ರದ ಅಭಿವೃದ್ಧಿಗಾಗಿ ಸಾಕಷ್ಟು ಕೆಲಸ ಕಾರ್ಯಗಳು ಮಾಡಿದ್ದೆ. ಆದರೂ ಜನರು ನನ್ನ ಕೈ ಹಿಡಿಯಲಿಲ್ಲ ಎಂದು ಭಾವುಕರಾದರು.

ಹಿಮ್ಮುಖವಾಗಿ ಚಲಿಸಿದ ಸರಕು ಸಾಗಣೆ ವಾಹನ ಹರಿದು

ಇಬ್ಬರು ಮಹಿಳೆಯರು ಸ್ಥಳದಲ್ಲೇ ಸಾವು



ಶಾಂತಮ್ಮ



ಸರೋಜಮ್ಮ

ಕೆ.ಆರ್.ಪೇಟೆ, ಡಿ.3– ಸರಕು ಸಾಗಾಣೆ ವಾಹನ ಹಿಮ್ಮುಖವಾಗಿ ಚಲಿಸುವಾಗ ಸ್ಥಳದಲ್ಲೇ ಇಬ್ಬರು ಮಹಿಳೆಯರು ಸಾವನ್ನಪ್ಪಿರುವ ಘಟನೆ ತಾಲೂಕಿನ ಸಂತೇಬಾಚಹಳ್ಳಿ ಹೋಬಳಿಯ ಶ್ರೀಗವಿರಂಗನಾಥಸ್ವಾಮಿ ದೇವಾಲಯದ ಬಳಿ ಬುಧವಾರ ಮಧ್ಯಾಹ್ನ ನಡೆದಿದೆ.

ತಾಲೂಕಿನ ಸಾರಂಗಿ ಗ್ರಾಮದ ನಿವಾಸಿ ಜಯರಾಮೇಗೌಡರ ಪತ್ನಿ ಶಾಂತಮ್ಮ(55), ಲಕ್ಷ್ಮಣ್ ಅವರ ಪತ್ನಿ ಸರೋಜಮ್ಮ(60) ಮೃತಪಟ್ಟವರು.

ವಿವರ: ಸಾರಂಗಿ ಗ್ರಾಮದ ನಿವಾಸಿ ಯೋಗೇಶ್ ಕುಟುಂಬದವರು ಬೀಗರ ಔತಣ ಕೂಟವನ್ನು ತಾಲೂಕಿನ ಸಂತೇಬಾಚಹಳ್ಳಿ ಹೋಬಳಿಯ ಶ್ರೀಕ್ಷೇತ್ರ ಶ್ರೀಗವಿರಂಗನಾಥಸ್ವಾಮಿ ದೇವಾಲಯದಲ್ಲಿ ಹಮ್ಮಿಕೊಂಡಿದ್ದರು. ಬೀಗರ ಔತಣ ಕೂಟಕ್ಕೆ ತೆರಳಿದ್ದ ಗ್ರಾಮದ ನಿವಾಸಿಗಳಾದ ಶಾಂತಮ್ಮ, ಸರೋಜಮ್ಮ, ನಾಗಮ್ಮ, ತಿಮ್ಮೇಗೌಡ, ಯೋಗೇಶ್ ಹಾಗೂ ಮತ್ತಿತರರು ಮೊದಲ ಪಂಕ್ತಿಯಲ್ಲಿ ಊಟ ಮುಗಿಸಿ ತಮ್ಮನ್ನು ಕರೆತಂದಿದ್ದ ವಾಹನದ ಬಳಿ ಹೋಗುತ್ತಿದ್ದರು. ಈ ವೇಳೆ ಇಳಿ ಜಾರಿನಲ್ಲಿ ನಿಂತಿದ್ದ ಸರಕುಸಾಗಣೆ ವಾಹನ ಹಿಮ್ಮುಖವಾಗಿ ಚಲಿಸಿದೆ. ಪರಿಣಾಮ ಶಾಂತಮ್ಮ ಹಾಗೂ ಸರೋಜಮ್ಮ ವಾಹನಕ್ಕೆ ಸಿಲುಕಿ ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಘಟನೆಯಲ್ಲಿ ನಾಗಮ್ಮ ಎಂಬುವರಿಗೂ ಗಂಭೀರ ಗಾಯಗಳಾಗಿದ್ದು, ಅವರನ್ನು ಕೆ.ಆರ್.ಪೇಟೆಯ ದುಂಡಶೆಟ್ಟಿ ಲಕ್ಷ್ಮಮ್ಮ ಸ್ಮಾರಕ ತಾಲೂಕು ಆಸ್ಪತ್ರೆಗೆ ದಾಖಲಿಸಿ ಪ್ರಥಮ ಚಿಕಿತ್ಸೆ ಕೊಡಿಸಿ ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಕೆ.ಆರ್.ಆಸ್ಪತ್ರೆಗೆ ದಾಖಲಿಸಲಾಗಿದೆ. ಘಟನೆಗೆ ಸರಕು ಸಾಗಣೆ ವಾಹನದ ಚಾಲಕನ ಅಜಾರೂಕತೆಯೇ ಕಾರಣ ಎನ್ನಲಾಗಿದೆ.

ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಕೆಆರ್.ಪೇಟೆ ಪಟ್ಟಣ ಠಾಣೆ ಪೊಲೀಸರು ಪರಿಶೀಲನೆ ನಡೆಸಿ, ವಾಹನ ವಶಕ್ಕೆ ಪಡೆದು ಪ್ರಕರಣ ದಾಖಲಿಸಿಕೊಂಡು ಮುಂದಿನ ತನಿಖೆ ಕೈಗೊಂಡಿದ್ದಾರೆ.

ಸಂತಾಪ: ಘಟನೆ ಸಂಬಂಧ ಶಾಸಕ ಹೆಚ್.ಟಿ.ಮಂಜು, ಮಾಜಿ ಸಚಿವ ಕೆ.ಸಿ.ನಾರಾಯಣಗೌಡ, ಸಮಾಜ ಸೇವಕ ಆರ್‌ಟಿಓ ಮಲ್ಲಿಕಾರ್ಜುನ್, ವಿಜಯ್ ರಾಮೇಗೌಡ, ಮನ್‌ಮುಲ್ ನಿರ್ದೇಶಕ ಡಾಲು ರವಿ ಸೇರಿದಂತೆ ಇತರ ಗಣ್ಯರು ಸಂತಾಪ ಸೂಚಿಸಿದ್ದಾರೆ.

ಡಿ.6, ಗೃಹರಕ್ಷಕ ದಳ ದಿನಾಚರಣೆ

ಮಂಡ್ಯ, ಡಿ.3– ನಗರದ ಡಿಎಆರ್ ಮೈದಾನದಲ್ಲಿ ಡಿ.6 ರಂದು ಸಂಜೆ 4 ಗಂಟೆಗೆ 63ನೇ ಗೃಹರಕ್ಷಕದಳ ದಿನಾಚರಣೆ ನಡೆಯಲಿದ್ದು, ಜಿಲ್ಲಾಧಿಕಾರಿಗಳು, ಆರಕ್ಷಕ ವರಿಷ್ಠಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಅಧಿಕಾರಿಗಳು ಹಾಗೂ ಇನ್ನಿತರೆ ಪ್ರಮುಖರು ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ ಎಂದು ಗೃಹರಕ್ಷಕದಳ ಸಮಾದೇಷ್ಟರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಎಂ.ಆರ್.ಪ್ರಶಾಂತ್‌ಕುಮಾರ್ ನಿಧನ



ಕೆ.ಆರ್.ಪೇಟೆ, ಡಿ.3– ತಾಲೂಕಿನ ಮೋದೂರು ಗ್ರಾಮದ ನಿವಾಸಿ, ವಕೀಲ ಎಂ.ಆರ್.ಪ್ರಶಾಂತ್ ಕುಮಾರ್(44) ಬುಧವಾರ ಮುಂಜಾನೆ ನಿಧನರಾದರು. ಮೃತರು ತಂದೆ, ತಾಯಿ, ಪತ್ನಿ ಹಾಗೂ ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸ್ವಗ್ರಾಮದಲ್ಲಿ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮಹದೇವಮ್ಮ



ಕೆ.ಆರ್.ಪೇಟೆ, ಡಿ.3– ತಾಲೂಕು ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ನಿರ್ದೇಶಕರೂ ಆದ ಅಕ್ಕಿ ಹೆಬ್ಬಾಳು ಹೋಬಳಿ ಜೆಡಿಎಸ್ ಅಧ್ಯಕ್ಷ ಎಂ.ಸಿ.ಬಸವಲಿಂಗಪ್ಪ ಅವರ ತಾಯಿ, ಮಂಚಿಬೀಡು ಗ್ರಾಮದ ಪಟೇಲ್ ಚನ್ನಬಸಪ್ಪ ಅವರ ಪತ್ನಿ, ಮಹದೇವಮ್ಮ(82) ಮಂಗಳವಾರ ನಿಧನರಾದರು.

ಮೃತರು ಆರು ಪುತ್ರಿಯರು, ಮೊಮ್ಮಕ್ಕಳು, ಮರಿಮಕ್ಕಳು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಬುಧವಾರ ಮೃತರ ಜಮೀನಿನಲ್ಲಿ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ರೈತರು ಕೃಷಿ ಮೇಳ ಸದುಪಯೋಗಪಡಿಸಿಕೊಳ್ಳಿ: ಡಿಸಿ



ಕೃಷಿ ಮೇಳ ಅಂಗವಾಗಿ ಹಮ್ಮಿಕೊಂಡಿದ್ದ ಜಾಥಾಕ್ಕೆ ಚಾಲನೆ ನೀಡಲಾಯಿತು.

ಮಂಡ್ಯ, ಡಿ.3– ಮಂಡ್ಯ ಕೃಷಿ ವಿಜ್ಞಾನ ವಿಶ್ವವಿದ್ಯಾನಿಲಯದ ವತಿಯಿಂದ ಡಿ.5ರಿಂದ 7ರವರೆಗೆ ನಡೆಯುವ ಕೃಷಿ ಮೇಳವನ್ನು ರೈತರು ಸದುಪಯೋಗಪಡಿಸಿಕೊಳ್ಳಬೇಕು ಎಂದು ಜಿಲ್ಲಾಧಿಕಾರಿ ಡಾ.ಕುಮಾರ್ ತಿಳಿಸಿದರು.

ಕೃಷಿ ಮೇಳದ ಅಂಗವಾಗಿ ನಗರದ ಜಿಪಂನಿಂದ ವಿಸಿ ಫಾರಂವರೆಗೆ ಆಯೋಜಿಸಿದ್ದ ಸೈಕಲ್ ಹಾಗೂ ಬೈಕ್ ಜಾಥಾ ಉದ್ಘಾಟಿಸಿ ಮಾತನಾಡಿದ ಅವರು, ಕೃಷಿಯಲ್ಲಿ ನಾವಿನ್ಯತೆ, ತಂತ್ರಜ್ಞಾನ ಬಳಕೆ ಕುರಿತು ರೈತರಿಗೆ ಮಾಹಿತಿ ನೀಡುವ ಅರ್ಥಪೂರ್ಣ ಕಾರ್ಯಕ್ರಮ ಇದಾಗಿದೆ. ಕೃಷಿ ದೇಶದ ಬೆನ್ನೆಲುಬು. ಕೃಷಿಯಲ್ಲಿ ಪ್ರಗತಿ ಹೊಂದಿದಾಗ ಮಾತ್ರ ದೇಶ ಅಭಿವೃದ್ಧಿ ಕಾಣುತ್ತದೆ. ಕೃಷಿ ಮೇಳದಲ್ಲಿ ಹೊಸ ಹೊಸ ತಂತ್ರಜ್ಞಾನದ ಬಳಕೆ ಮತ್ತು ಹೊಸ ತಳಿಗಳ ಪ್ರದರ್ಶನ ಮಾಡಲಾಗುತ್ತದೆ. ರೈತರು ಕೃಷಿ ಮೇಳದಲ್ಲಿ ಭಾಗವಹಿಸಿ ಎಂದರು.

ಜಿಪಂ ಸಿಇಓ ಕೆ.ಆರ್.ನಂದಿನಿ ಮಾತನಾಡಿ, ಕೃಷಿ ಮೇಳ ಕುರಿತು ರೈತರಿಗೆ ಜಾಗೃತಿ ಮೂಡಿಸುವ ಸಲುವಾಗಿ ಬೈಕ್ ಮತ್ತು ಸೈಕಲ್ ಜಾಥಾ ಹಮ್ಮಿಕೊಳ್ಳಲಾಗಿದೆ. ಇದರ ಉದ್ದೇಶ ಕೃಷಿ ಸಂಜೀವಿನಿ ಬಲವರ್ಧನೆಯನ್ನು ಹೇಗೆ ಸಾಧಿಸಬೇಕು. ಇದರಿಂದ ಜನರಿಗೆ ಹೇಗೆ ಉಪಯೋಗ ಆಗುತ್ತದೆ ಎಂಬುದರ ಕುರಿತು ತಿಳಿಸುವುದು ಎಂದರು.

ರೈತರು, ಸಾಮಾನ್ಯ ಜನರು ಸಹ ಕೃಷಿ ಮೇಳದಲ್ಲಿ ಭಾಗವಹಿಸಿ ಇದರ ಪ್ರಯೋಜನ ಪಡೆಯಬಹುದು. 5 ಜಿಲ್ಲೆಯಿಂದ ಆಗಮಿಸಿರುವ ಎನ್‌ಆರ್‌ಎಲ್‌ಎಂ ಮಹಿಳಾ ಸ್ವಸಹಾಯ ಗುಂಪಿನ ಮಹಿಳೆಯರು 50 ಹೆಚ್ಚು ಮಳಿಗೆಗಳನ್ನು ಕೃಷಿ ಮೇಳದಲ್ಲಿ ಸ್ಥಾಪಿಸಲಿದ್ದಾರೆ. ಆ ಮೂಲಕ ವಿಭಿನ್ನ ಉತ್ಪನ್ನಗಳನ್ನು ಮಾರಾಟ ಮಾಡಲಾಗುತ್ತದೆ ಎಂದರು.

ಮಂಡ್ಯ ಕೃಷಿ ವಿಜ್ಞಾನ ವಿಶ್ವವಿದ್ಯಾಲಯದ ವಿಶೇಷಾಧಿಕಾರಿ ಹರಿಣಿ ಕುಮಾರ್, ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ ಮಾತನಾಡಿದರು. ಕೃಷಿ ಇಲಾಖೆ ಜಂಟಿ ನಿರ್ದೇಶಕ ಅಶೋಕ್, ತೋಟಗಾರಿಕೆ ಇಲಾಖೆ ಜಂಟಿ ನಿರ್ದೇಶಕಿ ರೂಪಶ್ರೀ ಇನ್ನಿತರರಿದ್ದರು.

ಡಿ.12, ನೇರ ಸಂದರ್ಶನ

ಮಂಡ್ಯ, ಡಿ.3– ಕರ್ನಾಟಕ ಮೆದುಳಿನ ಆರೋಗ್ಯ ಉಪಕ್ರಮ ಕಾರ್ಯಕ್ರಮದಡಿ, ಗುತ್ತಿಗೆ ಆಧಾರದ ಮೇಲೆ ಖಾಲಿ ಇರುವ ತಲಾ ಒಬ್ಬರಂತೆ ನ್ಯೂರಾಲಜಿಸ್ಟ್, ಫಿಜಿಷಿಯನ್, ವೈದ್ಯಾಧಿಕಾರಿ, ಸ್ಪೀಚ್ ಥೆರಪಿಸ್ಟ್ ಹುದ್ದೆಗಳನ್ನು ಭರ್ತಿ ಮಾಡಲು ಡಿ.12 ರಂದು ಬೆಳಗ್ಗೆ 11 ಗಂಟೆಗೆ ಮಿಮ್ಸ್ ಮುಂಭಾಗದಲ್ಲಿರುವ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಚೇರಿಯಲ್ಲಿ ಸಂದರ್ಶನ ಆಯೋಜಿಸಲಾಗಿದೆ.

ಹೆಚ್ಚಿನ ಮಾಹಿತಿಗೆ ಜಿಲ್ಲಾ ಕುಷ್ಠರೋಗ ನಿರ್ಮೂಲನಾಧಿಕಾರಿಗಳ ಕಚೇರಿ, ಮಾನಸಿಕ ಆರೋಗ್ಯ ವಿಭಾಗ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಚೇರಿ ಆವರಣ ಅಥವಾ ಮೊ.8277895725 ಅನ್ನು ಸಂಪರ್ಕಿಸಬಹುದು.

ಒಂದನೇ ಪುಟದಿಂದ

ಬೇಡಿಕೆ ಈಡೇರಿಕೆಗೆ ಕೇಂದ್ರ ಸಮ್ಮತಿ

ಈಡೇರಿಕೆಗೆ ಕ್ರಮ ವಹಿಸಲಾಗುವುದು. ನಿಮ್ಮ ಮೇಲಿನ ಕಾಳಜಿ ಹಾಗೂ ಮಾನವೀಯ ನೆಲೆಗಟ್ಟಿನ ಮೇರೆಗೆ ಬೇಡಿಕೆಗಳ ಈಡೇರಿಕೆಗೆ ಪರಿಶೀಲನೆ ನಡೆಸಲಾಗುವುದು ಎಂದು ಅನ್ನಪೂರ್ಣದೇವಿ ಅವರು ಭರವಸೆ ನೀಡಿದರು. ನರೇಂದ್ರ ಮೋದಿ ಅವರ ಸರ್ಕಾರ ನಿಮ್ಮ ಜತೆಗಿದೆ. ಕರ್ನಾಟಕದಲ್ಲಿ ನೀವು ನಡೆಸುತ್ತಿದ್ದ ಪ್ರತಿಭಟನಾ ಚಳವಳಿಯ ಬಗ್ಗೆ ಸಚಿವರಾದ ಕುಮಾರಸ್ವಾಮಿ ಅವರು ನನ್ನೊಂದಿಗೆ ವಿವರವಾಗಿ ಚರ್ಚೆ ನಡೆಸಿದ್ದಾರೆ. ನೀವು ಉತ್ತಮ, ಶ್ರೇಷ್ಠ ಕೆಲಸ ಮಾಡುತ್ತಿದ್ದೀರಿ. ನಿಮ್ಮ ಜತೆ ಸರಕಾರವಿದೆ. ನಿಮ್ಮ ಬಹುತೇಕ ಬೇಡಿಕೆಗಳನ್ನು ಈಡೇರಿಸಲಾಗುವುದು. ನಿಮಗೆ ಒತ್ತಡ ಕಡಿಮೆ ಮಾಡುವ ನಿಟ್ಟಿನಲ್ಲಿ, ಮತ್ತಷ್ಟು ಉತ್ತಮ ಸೌಲಭ್ಯ ಕಲ್ಪಿಸುವ ದಿಸೆಯಲ್ಲಿ ಕ್ರಮ ಕೈಗೊಳ್ಳಲಾಗುವುದು ಎಂದು ಅನ್ನಪೂರ್ಣದೇವಿ ಅವರು ಅಂಗನವಾಡಿ ಪ್ರಮುಖರಿಗೆ ತಿಳಿಸಿದರು.

ಈ ಸಭೆಯಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವಾಲಯದ ಕಾರ್ಯದರ್ಶಿ ಅನಿಲ್ ಮಲಿಕ್ ಸೇರಿದಂತೆ ಮತ್ತಷ್ಟು ಉನ್ನತ ಅಧಿಕಾರಿಗಳು ಹಾಜರಿದ್ದರು.

ಪ್ರತಿಭಟನೆ ಕೈ ಬಿಟ್ಟಿದ್ದು ಒಳ್ಳೆಯದು: ಇದಕ್ಕೂ ಮುನ್ನ ತಮ್ಮ ನಿವಾಸದಲ್ಲಿ ನೌಕರರ ಪ್ರಮುಖರನ್ನು ಭೇಟಿಯಾದ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರು, ನನ್ನ ಮನವಿಗೆ ಓಗೊಟ್ಟು ಪ್ರತಿಭಟನೆ ಕೊನೆಗೊಳಿಸಿ, ನವದೆಹಲಿಗೆ ಬಂದಿದ್ದು ಸ್ವಾಗತಾರ್ಹ. ನೀವೆಲ್ಲರೂ ಮೈಕೊರೆಯುವ ಚಳಿಯಲ್ಲಿ ರಸ್ತೆಯ ಮೇಲೆ ಧರಣಿ ಕೂರುವುದು ಅತ್ಯಂತ ನೋವಿನ ಸಂಗತಿ. ಚರ್ಚೆಯ ಮೂಲಕ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಬಹುದು. ಅದಕ್ಕಾಗಿಯೇ ನಿಮ್ಮನ್ನು ಇಲ್ಲಿಗೆ ಕರೆಸಿಕೊಳ್ಳಲಾಯಿತು. ಪ್ರತಿಭಟನೆಗಿಂತ ಚರ್ಚೆ ಮಾಡುವುದು ಉತ್ತಮ ಮಾರ್ಗ ಎಂದರು. ಇದೇ ವೇಳೆ ಶಿಕ್ಷಣ ಇಲಾಖೆಗೆ ಸಂಬಂಧಿಸಿದ ನೌಕರರ ಬೇಡಿಕೆಗಳ ಬಗ್ಗೆ ದೂರವಾಣಿಯಲ್ಲಿ ಕೇಂದ್ರದ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರೊಂದಿಗೆ ಮಾತುಕತೆ ನಡೆಸಿದ ಸಚಿವ ಕುಮಾರಸ್ವಾಮಿ ಅವರು, ಪ್ರಧಾನ್ ಅವರೊಂದಿಗೆ ನೌಕರರ ಪ್ರಮುಖರ ಸಭೆಯನ್ನು ನಿಗದಿಗೊಳಿಸಿ, ಅವರ ನಿವಾಸಕ್ಕೆ ಅಧಿಕಾರಿಗಳ ಸಮೇತ ಕಳಿಸಿದರು.

ಸಚಿವ ಪ್ರಧಾನ್ ಅವರ ಜತೆಗೂ ಮಾತುಕತೆ ನಡೆಸಿದ ಪ್ರಮುಖರು, ತಮ್ಮ ಬೇಡಿಕೆ, ಸಂಕಷ್ಟಗಳ ಬಗ್ಗೆ ಚರ್ಚಿಸಿದರು. ಅವರನ್ನು ಉದ್ದೇಶಿಸಿ ಮಾತನಾಡಿದ ಸಚಿವ ಪ್ರಧಾನ್ ಅವರು, ಈ ಬಗ್ಗೆ ಕುಮಾರಸ್ವಾಮಿ ಅವರು ನನ್ನೊಂದಿಗೆ ಚರ್ಚೆ ನಡೆಸಿದ್ದಾರೆ ಎಂದರು. ಎಸ್. ವರಲಕ್ಷ್ಮೀ, ಹೆಚ್.ಎಸ್. ಸುನಂದಾ, ಮಾಲಿನಿ ಮೇಸ್ತಾ, ಶಾಂತಾ, ಲಕ್ಷ್ಮೀದೇವಮ್ಮ, ಮಹದೇವಮ್ಮ, ಶಶಿಕಲಾ, ದೊಡ್ಡವ್ವ ಪೂಜಾರಿ, ನಂಜಮ್ಮ, ಗುಲ್ಜಾರ್, ಉಷಾರಾಣಿ, ಸಿಂಧು, ಸವಿತಾ ಅವರು ನೌಕರರ ನಿಯೋಗದಲ್ಲಿ ಪಾಲ್ಗೊಂಡಿದ್ದರು.

ಡಿ.17ರಿಂದ ಸಾಕ್ಷ್ಯ ವಿಚಾರಣೆ

ಸಹಾಯಕ ಎಸ್‌ಪಿಪಿ ಸಚಿನ್ ಅವರು ಸಾಕ್ಷಿಗಳ ಪಟ್ಟಿಯನ್ನು ಕೋರ್ಟ್‌ಗೆ ಸಲ್ಲಿಸಿದ್ದಾರೆ. ಪ್ರತ್ಯಕ್ಷ ಸಾಕ್ಷಿಗಳು, ಎಫ್‌ಎಸ್‌ಎಲ್ ಸಾಕ್ಷಿಗಳು, ತಾಂತ್ರಿಕ ಸಾಕ್ಷಿಗಳ ಪ್ರತ್ಯೇಕ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಲಾಗಿದೆ. ಸಾಕ್ಷಿಗಳಿಗೆ ಸಮನ್ಸ್ ನೀಡಲು ಸಹಾಯಕ ಎಸ್‌ಪಿಪಿ ಸಚಿನ್ ಮನವಿ ಮಾಡಿದ್ದಾರೆ. ಅದರಂತೆ ಸಾಕ್ಷಿ ನಂಬರ್ ಏಳು ಮತ್ತು ಎಂಟಕ್ಕೆ ನ್ಯಾಯಾಲಯದಿಂದ ಸಮನ್ಸ್ ಜಾರಿ ಮಾಡಲಾಗಿದೆ. ರೇಣುಕಾಸ್ವಾಮಿ ತಂದೆ, ತಾಯಿಗೂ ಸಮನ್ಸ್ ನೀಡಲಾಗಿದೆ. ಈ ಪ್ರಕರಣದಲ್ಲಿ 260ಕ್ಕೂ ಅಧಿಕ ಸಾಕ್ಷಿಗಳು ಇವೆ. ಎಲ್ಲಾ ಸಾಕ್ಷಿಗಳ ವಿಚಾರಣೆ ಬಳಿಕ ಕೋರ್ಟ್ ಅಂತಿಮ ತೀರ್ಪು ನೀಡಲಿದೆ.

ಶಿಕ್ಷೆ ತಡೆಗೆ ಹೈಕೋರ್ಟ್ ನಕಾರ

ಜಾಮೀನು ನೀಡುವಂತೆ ಕೋರಿ ಪ್ರಜ್ವಲ್ ರೇವಣ್ಣ ಅವರು ಸಲ್ಲಿಸಿದ್ದ ಅರ್ಜಿಯನ್ನು ಕರ್ನಾಟಕ ಹೈಕೋರ್ಟ್ ಇಂದು ವಜಾಗೊಳಿಸಿದೆ. ಅಪರಾಧದ ಗಂಭೀರತೆ ಮತ್ತು ಬಾಕಿ ಇರುವ ಇತರ ಪ್ರಕರಣಗಳ ಮೇಲಿನ ಸಂಭಾವ್ಯ ಪರಿಣಾಮದಿಂದಾಗಿ ಈ ಹಂತದಲ್ಲಿ ಜಾಮೀನು ನೀಡುವುದು ಸೂಕ್ತವಲ್ಲ ಎಂದು ನ್ಯಾಯಮೂರ್ತಿ ಕೆ.ಎಸ್.ಮುದಗಲ್ ಮತ್ತು ನ್ಯಾಯಮೂರ್ತಿ ವೆಂಕಟೇಶ್ ನಾಯಕ್ ಅವರಿದ್ದ ವಿಭಾಗೀಯ ಪೀಠ ಅಭಿಪ್ರಾಯಪಟ್ಟಿದೆ. ಪ್ರಜ್ವಲ್ ರೇವಣ್ಣ ವಿರುದ್ಧ ಲೈಂಗಿಕ ದೌರ್ಜನ್ಯದ ಆರೋಪದ ಮೇಲೆ ಹಲವಾರು ಪ್ರಕರಣಗಳು ದಾಖಲಾಗಿರುವುದನ್ನು ಗಮನಿಸಿದ ಪೀಠ, ಪ್ರಸ್ತುತ ಪ್ರಕರಣದಲ್ಲಿ ದೂರುದಾರರು, ಆರೋಪಿಯ ಉತ್ತಮ ರಾಜಕೀಯ ಮತ್ತು ಆರ್ಥಿಕ ಹಿನ್ನೆಲೆಯಿಂದಾಗಿ ಪೊಲೀಸರನ್ನು ಸಂಪರ್ಕಿಸಲು ವಿಳಂಬ ಮಾಡಿದ್ದಾರೆ ಎಂದು ಹೇಳಿದೆ. ಪ್ರಜ್ವಲ್ ಅವರನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಿದರೆ ಇನ್ನೂ ವಿಚಾರಣೆಯಲ್ಲಿರುವ ಸಂಬಂಧಿತ ಪ್ರಕರಣಗಳಲ್ಲಿ ಸಾಕ್ಷ್ಯಗಳನ್ನು ತಿರುಚುವ ಸಾಧ್ಯತೆ ಇದೆ ಎಂಬ ವಿಶೇಷ ಸಾರ್ವಜನಿಕ ಅಭಿಯೋಜಕರ ವಾದವನ್ನು ಹೈಕೋರ್ಟ್ ಒಪ್ಪಿಕೊಂಡಿದೆ. ಪ್ರಜ್ವಲ್ ರೇವಣ್ಣ ಅವರ ವಿರುದ್ಧ ದಾಖಲಾಗಿರುವ ನಾಲ್ಕು ಲೈಂಗಿಕ ದೌರ್ಜನ್ಯ ಮತ್ತು ಅತ್ಯಾಚಾರ ಪ್ರಕರಣಗಳಲ್ಲಿ ಒಂದು ಪ್ರಕರಣದಲ್ಲಿ ಕೋರ್ಟ್ ತೀರ್ಪು ಪ್ರಕಟಿಸಿದ್ದು, ಜೀವಾವಧಿ ಶಿಕ್ಷೆ ವಿಧಿಸಿದೆ.

ಜನವರಿಗೆ ಅಭಿವೃದ್ಧಿ ಕಾಮಗಾರಿ ಆರಂಭ



ಅಲ್ಲದೆ ವಿಶೇಷ ಪೂಜೆ ಸಹ ಸಲ್ಲಿಸುತ್ತಾರೆ. ಇಂತಹ ವಿಶ್ವ ಪ್ರಸಿದ್ಧ ಚಾಮುಂಡಿಬೆಟ್ಟವನ್ನು ಸಮಗ್ರವಾಗಿ ಅಭಿವೃದ್ಧಿಪಡಿಸಲು ಕೇಂದ್ರ ಸರ್ಕಾರ 'ಪ್ರಸಾದ' ಯೋಜನೆಯಡಿ ಆಯ್ಕೆ ಮಾಡಿದೆ. ದೇಶದ 48 ಪಾರಂಪರಿಕ ದೇವಸ್ಥಾನಗಳ ಅಭಿವೃದ್ಧಿ ಪಟ್ಟಿಯಲ್ಲಿ ಚಾಮುಂಡಿಬೆಟ್ಟ ಕೂಡ ಸೇರಿದೆ. ಈ ಯೋಜನೆಯಡಿ ಚಾಮುಂಡಿಬೆಟ್ಟ ಅಭಿವೃದ್ಧಿಗೆ ಕೇಂದ್ರ ಸರ್ಕಾರ 45 ಕೋಟಿ ರೂ. ನೀಡುತ್ತಿದೆ. ರಾಜ್ಯ ಸರ್ಕಾರದ ಪ್ರವಾಸೋದ್ಯಮ ಇಲಾಖೆ ಈ ಯೋಜನೆ ಕಾರ್ಯರೂಪಗೊಳಿಸುತ್ತಿದೆ.

ಕಾರ್ಕಳ, ಉಡುಪಿ, ಮಂಗಳೂರು ಸೇರಿದಂತೆ ಹಲವು ಹೆಸರಾಂತ ಪಾರಂಪರಿಕ ದೇವಸ್ಥಾನಗಳನ್ನು ಅಭಿವೃದ್ಧಿ ಮಾಡಿದ ಅನುಭವ ಹೊಂದಿರುವ ಎಸ್‌ಕೆಎಸ್ ಕಾರ್ಕಳ ಪ್ರೈವೇಟ್ ಲಿಮಿಟೆಡ್‌ಗೆ ಚಾಮುಂಡಿಬೆಟ್ಟದ ಅಭಿ ವೃದ್ಧಿ ಗುತ್ತಿಗೆ ನೀಡಲಾಗಿದೆ. ಈ ಯೋಜನೆಯ ಸಂಪೂರ್ಣ ಕಾಮಗಾರಿಯನ್ನು ಮಾರ್ಚ್ 26, 2026ಕ್ಕೆ ಪೂರ್ಣಗೊಳಿಸುವಂತೆ ಟೆಂಡರ್‌ನಲ್ಲಿ ಷರತ್ತು ವಿಧಿಸಲಾಗಿದೆ. ಎಸ್‌ಕೆಎಸ್ ಕಾರ್ಕಳ ಪ್ರೈ. ಲಿ. ಕಂಪನಿ ಈಗಾಗಲೇ ಸರ್ವೆ ಕಾರ್ಯ ಪೂರ್ಣಗೊಳಿಸಿದೆ. ರಾಜ್ಯ ಸರ್ಕಾರದ ಮುಜರಾಯಿ ಇಲಾಖೆಯು ಪ್ರಸಾದ ಯೋಜನೆಯಡಿ ಚಾಮುಂಡಿಬೆಟ್ಟದ ಅಭಿವೃದ್ಧಿಗೆ ಅಧಿಕೃತವಾಗಿ ಜಾಗ ಹಸ್ತಾಂತರ ಮಾಡಬೇಕು. ಜೊತೆಗೆ ಡಿಪಿಆರ್ (ಸಮಗ್ರ ಯೋಜನಾ ವರದಿ) ಸಲ್ಲಿಸಿರುವಂತೆ ಅಭಿವೃದ್ಧಿ ಮಾಡಲು ನಿರಪೇಕ್ಷಣಾ ಪತ್ರ (ಎನ್‌ಒಸಿ) ನೀಡಬೇಕಿದೆ. ಆದರೆ ಮುಜರಾಯಿ ಇಲಾಖೆ ಇನ್ನು ಎನ್‌ಒಸಿ ನೀಡದ ಹಿನ್ನೆಲೆಯಲ್ಲಿ ಕಾಮಗಾರಿ ವಿಳಂಬವಾಗುತ್ತಿದೆ. ಎನ್‌ಒಸಿ ನೀಡಿದ ಕೂಡಲೇ ಕಾಮಗಾರಿ ಆರಂಭಗೊಳ್ಳಲಿದೆ.

ಜನವರಿ ಮೊದಲ ವಾರದಲ್ಲಿ ಕಾಮಗಾರಿ ಆರಂಭವಾದರೆ ಯೋಜನೆ ಪೂರ್ಣಗೊಳಿಸಲು 90 ದಿನಗಳು ಮಾತ್ರ ಉಳಿಯಲಿದೆ. ಈ ಹಿನ್ನೆಲೆಯಲ್ಲಿ ಗುತ್ತಿಗೆ ಪಡೆದ ಸಂಸ್ಥೆ ಭರದಿಂದ ಕಾಮಗಾರಿ ನಡೆಸುವುದು ಅನಿವಾರ್ಯವಾಗಿದೆ. ಈ ಮೂಲಕ ಮೈಸೂರಿನ ಇತರೆ ಅಭಿವೃದ್ಧಿ ಕಾಮಗಾರಿಗಳಂತೆ ಇದನ್ನು ನೆನೆಗುದಿಗೆ ಬೀಳಲು ಬಿಡದೆ ತ್ವರಿತ ಕಾಮಗಾರಿಗೆ ಎಲ್ಲಾ ರೀತಿಯ ತಯಾರಿ ಮಾಡಿಕೊಳ್ಳಲಾಗಿದೆ.

ಗುತ್ತಿಗೆ ಪಡೆದ ಎಸ್ ಕೆಎಸ್ ಕಾರ್ಕಳ ಕಂಪನಿ ಈಗಾಗಲೇ ಚಾಮುಂಡಿಬೆಟ್ಟ, ನಂದಿ ಪ್ರತಿಮೆ ಹಾಗೂ ಪಾದದಲ್ಲಿ ಸರ್ವೆ ಕಾರ್ಯ ಪೂರ್ಣಗೊಳಿಸಿದೆ. ನೀಲಿ ನಕ್ಷೆ, ತ್ರಿ ಡಿ ಡೈಮೆನ್ಷನ್ ಸೇರಿದಂತೆ ಎಲ್ಲಾ ಸಿದ್ಧತೆ ಪೂರ್ಣಗೊಳಿಸಿಕೊಂಡಿದೆ. ಇದರಿಂದ ಕಾಮಗಾರಿ ವೇಗವಾಗಿ ಪಡೆಯಲಿದೆ.

ಆರ್ಚ್, ಮಲ್ಟಿ ಪರ್ಪಸ್ ಸೆಂಟರ್, ವೀವಿಂಗ್ ಟವರ್ ನಿರ್ಮಾಣ

ಕೇಂದ್ರದ 'ಪ್ರಸಾದ' ಯೋಜನೆಯಡಿ ಚಾಮುಂಡಿಬೆಟ್ಟದ ಮೇಲೆ, ನಂದಿ ಪ್ರತಿಮೆ, ಪಾದದ ಮೆಟ್ಟಿಲು ಸೇರಿದಂತೆ ಇತರೆಡೆ 10ಕ್ಕೂ ಹೆಚ್ಚು ಕಾಮಗಾರಿ ಕೈಗೊಳ್ಳಲಾಗುತ್ತಿದೆ. ದೇವಸ್ಥಾನದ ಬಳಿ ಸರದಿ ಸಾಲು ಮಂಟಪ, ಮಹಿಷಾಸುರ ಪ್ರತಿಮೆ ಬಳಿ ಮಲ್ಟಿ ಪರ್ಪಸ್ ಸೆಂಟರ್, ಅಲ್ಲಿಯೇ ಪೂಜೆ, ವಿಶೇಷ ದರ್ಶನ ಸೇರಿದಂತೆ ಇತರೆ ಸೇವಾ ಕಾರ್ಯಗಳಿಗೆ ಟಿಕೆಟ್ ಕೌಂಟರ್ ತೆರೆಯಲಾಗುತ್ತದೆ. ಮಹಿಷಾಸುರ ಪ್ರತಿಮೆಯ ನೇರ ರಸ್ತೆಯಲ್ಲಿ ಈಗಿರುವ ಕಬ್ಬಿಣದ ಗೇಟ್ ಬಳಿ ಪಾರಂಪರಿಕ ಶೈಲಿಯ ಆರ್ಚ್ (ಪವೇಶ ದ್ವಾರ), ಶೌಚಾಲಯ, ಚಪ್ಪಲಿ ಸ್ಟ್ಯಾಂಡ್, ವೀವಿಂಗ್ ಟವರ್, ನಂದಿ ಪ್ರತಿಮೆ ಬಳಿಯ ಮೆಟ್ಟಿಲುಗಳ ನವೀಕರಣ, ಸ್ಟೀಲ್ ರೇಲಿಂಗ್ಸ್, ಮತ್ತೊಂದು ವೀವಿಂಗ್ ಟವರ್, ಚಾಮುಂಡಿಬೆಟ್ಟದ ಪಾದದಲ್ಲಿ ಮೆಟ್ಟಿಲುಗಳ ನವೀಕರಣ ಸೇರಿದಂತೆ ಇತರೆ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುತ್ತಿದೆ.

3ನೇ ವ್ಯಕ್ತಿಗೆ ಕಾಮಗಾರಿ ಗುಣಮಟ್ಟದ ಉಸ್ತುವಾರಿ

'ಪ್ರಸಾದ' ಯೋಜನೆಯಡಿ ಕೈಗೊಳ್ಳುವ ಕಾಮಗಾರಿಗಳ ಗುಣಮಟ್ಟ ಖಾತರಿಗೆ ಮೂರನೇ ವ್ಯಕ್ತಿಗೆ ಉಸ್ತುವಾರಿ ವಹಿಸಲಾಗುತ್ತಿದೆ. ಈ ಯೋಜನೆಯಡಿ ನಡೆಯುವಂತಹ ಕಾಮಗಾರಿಗಳ ಉತ್ತಮ ನಿರ್ವಹಣೆಗೆಂದೇ ಅಗತ್ಯವಿರುವ ವ್ಯವಸ್ಥಾಪನೆಯನ್ನು ಕೇಂದ್ರ ಸರ್ಕಾರವೇ ನಿರ್ಧರಿಸುತ್ತದೆ ಹಾಗೂ ಅವುಗಳು ಡಿಪಿಆರ್‌ನಲ್ಲಿ ನಮೂದಾಗಿರುತ್ತವೆ.

ಅಧಿಕಾರ ಗದ್ದುಗೆ ಉಳಿಸಿಕೊಳ್ಳಲು ಸಿದ್ದರಾಮಯ್ಯ ಮತ್ತೆ ಕಸರತ್ತು

ಬೆಂಗಳೂರು,ಡಿ.3(ಕೆಎಂಶಿ)–ಅಧಿಕಾರ ಉಳಿಸಿಕೊಳ್ಳುವ ಯತ್ನವಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ತಮ್ಮ ಬೆಂಬಲಿತ ಸಚಿವರ ಜೊತೆಗೂಡಿ ಎಐಸಿಸಿ ರಾಜಕೀಯ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಭೇಟಿ ಮಾಡಿ ಗೌಪ್ಯ ಮಾತುಕತೆ ನಡೆಸಿದ್ದಾರೆ.

ಎಐಸಿಸಿ ಮಾಜಿ ಪ್ರಧಾನ ಕಾರ್ಯದರ್ಶಿ ಹಾಗೂ ಸಿದ್ದರಾಮಯ್ಯ ಬೆಂಬಲಿತ ಬಿ.ಕೆ.ಹರಿಪ್ರಸಾದ್ ಮಂಗಳೂರಿನಲ್ಲಿ ಆಯೋಜಿಸಿದ್ದ ನಾರಾಯಣ ಗುರು ಕಾರ್ಯಕ್ರಮದಲ್ಲಿ ಭಾಗವಹಿಸಲು ಮುಖ್ಯಮಂತ್ರಿ ತೆರಳಿದ್ದರು. ಹರಿಪ್ರಸಾದ್ ಈ ಕಾರ್ಯಕ್ರಮಕ್ಕೆ ವೇಣುಗೋಪಾಲ್ ಅವರನ್ನೂ ಆಹ್ವಾನಿಸಿದ್ದಲ್ಲದೆ, ಅವರು ಬರುವಂತೆ ನೋಡಿಕೊಂಡು ಮುಖ್ಯಮಂತ್ರಿ ಭೇಟಿ ಮಾಡಿಸಲು ಪೂರ್ವ ಸಿದ್ಧತೆ ಮಾಡಿದ್ದರು. ಸರ್ಕಾರಿ ಪ್ರಾಯೋಜಿತ ಕಾರ್ಯಕ್ರಮದಲ್ಲಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೂ ಆಹ್ವಾನ ನೀಡಬೇಕಿತ್ತು. ಆದರೆ, ಅವರನ್ನು ದೂರವಿಟ್ಟು, ಜಿಲ್ಲಾ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್ ಅವರಿಗೆ ಆಹ್ವಾನ ನೀಡಲಾಗಿದ್ದು, ಇದು ಕಾರ್ಯಕ್ರಮ ಪಟ್ಟಿಯಲ್ಲೂ ಇತ್ತು.

ಹರಿಪ್ರಸಾದ್–ವೇಣುಗೋಪಾಲ್ ಭೇಟಿ; ಗೌಪ್ಯ ಮಾತುಕತೆ

ಕಾರ್ಯಕ್ರಮಕ್ಕೆ ಆಹ್ವಾನ ಇಲ್ಲದಿದ್ದರೂ ತಮ್ಮ ಆಪ್ತರಾದ ಸತೀಶ್ ಜಾರಕಿಹೊಳಿ, ಡಾ.ಜಿ.ಪರಮೇಶ್ವರ್, ಜಮೀರ್ ಅಹಮದ್ ಖಾನ್ ವೇದಿಕೆಯಲ್ಲಿ ಆಸೀನರಾಗಿದ್ದರು.

ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಸಿದ್ದರಾಮಯ್ಯ, ಎಐಸಿಸಿ ರಾಜಕೀಯ ಕಾರ್ಯದರ್ಶಿ ವೇಣುಗೋಪಾಲ್ ಅವರೊಂದಿಗೆ ರಾಜಕೀಯ ವಿಷಯ ಚರ್ಚೆ ಮಾಡಿಲ್ಲ ಎಂದು ಸ್ಪಷ್ಟಪಡಿಸಿದರು. ಡಿಸಿಎಂ ಡಿ.ಕೆ.ಶಿವಕುಮಾರ್ ದೆಹಲಿಗೆ ಹೋಗುವುದಕ್ಕೆ ಯಾರೂ ಬೇಡ ಅಂದಿಲ್ಲ. ನಾನು ಹೋಗುವುದಿಲ್ಲ. ನನ್ನನ್ನು ಕರೆದರೆ ಮಾತ್ರ ದೆಹಲಿಗೆ ತೆರಳುವೆ ಎಂದರು. ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಉಡುಪಿ ಜಿಲ್ಲಾ ಉಸ್ತುವಾರಿ ಸಚಿವೆ ಆಗಿರುವುದರಿಂದ ಈ ಕಾರ್ಯಕ್ರಮಕ್ಕೆ ಅವರಿಗೂ ಆಹ್ವಾನ ನೀಡಲಾಗಿತ್ತು. ಹೆಬ್ಬಾಳ್ಕರ್ ಮಂಗಳೂರಿನಲ್ಲೇ ಇದ್ದರಾದರೂ ವೇಣುಗೋಪಾಲ್ ಭೇಟಿಯಿಂದ ಅವರನ್ನು ದೂರ ಇಡಲಾಗಿತ್ತು.

ಸೋನಿಯಾ ಮೊರೆ ಹೋದ ಡಿಕೆಶಿ!

30 ನಿಮಿಷಗಳಿಗೂ ಹೆಚ್ಚು ಕಾಲ ಮುಖಾಮುಖಿ ಚರ್ಚೆ ಮಾಡಿದ್ದಾರೆ. ಕಳೆದ ಮಂಗಳವಾರ ಸಿದ್ದರಾಮಯ್ಯರಿಗೆ ತಮ್ಮ ನಿವಾಸದಲ್ಲಿ ಏರ್ಪಡಿಸಿದ್ದ ಉಪಹಾರ ಕೂಟದ ನಂತರ ಜಂಟಿಯಾಗಿ ಪತ್ರಿಕಾಗೋಷ್ಠಿ ನಡೆಸಿದ ಸಂದರ್ಭದಲ್ಲಿ, ವರಿಷ್ಠರ ಆಹ್ವಾನ ಇಲ್ಲದೆ ದೆಹಲಿಗೆ ತೆರಳುವುದಿಲ್ಲ ಎಂದಿದ್ದರು. ಮುಖ್ಯಮಂತ್ರಿ ಮತ್ತು ನಾನು ಡಿಸೆಂಬರ್ 8ರಂದು ದೆಹಲಿಗೆ ತೆರಳಿ ರಾಜ್ಯ ಪ್ರತಿನಿಧಿಸುವ ಸಂಸದರೊಂದಿಗೆ ಸಭೆ ನಡೆಸಲಿದ್ದು, ಈ ಸಂದರ್ಭದಲ್ಲಿ ಅವಕಾಶ ನೀಡಿದರೆ ವರಿಷ್ಠರನ್ನು ಭೇಟಿ ಮಾಡುವುದಾಗಿ ಹೇಳಿದ್ದರು.

ನಿನ್ನೆ ರಾತ್ರಿ ಅವರ ಕಚೇರಿಯಿಂದ ಬಂದ ದೈನಂದಿನ ಕಾರ್ಯಕ್ರಮ ಸಂಪೂರ್ಣವಾಗಿ ಕಾಯ್ದಿರಿಸಲಾಗಿತ್ತು. ಆದರೆ, ಇಂದು ದಿಢೀರನೇ ದೆಹಲಿಗೆ ತೆರಳಿದರು.

ಸೋನಿಯಾ ಗಾಂಧಿ ಹಾಗೂ ಪ್ರಿಯಾಂಕಾ ಗಾಂಧಿ ನೀಡಿರುವ ಆಹ್ವಾನದ ಮೇರೆಗೆ ದೆಹಲಿಗೆ ತೆರಳಿದ್ದು, ಅವರನ್ನು ಗೌಪ್ಯವಾಗಿ ಭೇಟಿ ಮಾಡಿ, ಅಧಿಕಾರ ಹಸ್ತಾಂತರ ಕುರಿತು ಸಮಾಲೋಚನೆ ಮಾಡಲಿದ್ದಾರೆ ಎಂದು ಉನ್ನತ ಮೂಲಗಳು ತಿಳಿಸಿವೆ. ಸಿದ್ದರಾಮಯ್ಯ ಆಡಳಿತ ನವೆಂಬರ್ 20ಕ್ಕೆ ಎರಡೂವರೆ ವರ್ಷ ಪೂರೈಸಿದ ಬೆನ್ನಲ್ಲೇ ಅಧಿಕಾರ ಹಸ್ತಾಂತರ ಗರಿಗೆದರಿ ವರಿಷ್ಠರನ್ನು ಇಕ್ಕಟ್ಟಿಗೆ ಸಿಲುಕಿಸಿದೆ.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ರಾಜ್ಯಕ್ಕೆ ಎರಡು ಬಾರಿ ಭೇಟಿ ನೀಡಿ ಮುಖ್ಯಮಂತ್ರಿ ಹಾಗೂ ಉಪಮುಖ್ಯಮಂತ್ರಿ ನಡುವಿನ ಅಧಿಕಾರ ಹಸ್ತಾಂತರ ಗೊಂದಲಕ್ಕೆ ತೆರೆ ಎಳೆಯಲು ನಡೆಸಿದ ಯತ್ನವೂ ಫಲಪ್ರದವಾಗಲಿಲ್ಲ.

ಶಿವಕುಮಾರ್ ಬೆಂಬಲಿತ ಶಾಸಕರು ದೆಹಲಿ ದಂಡಯಾತ್ರೆ ಕೈಗೊಂಡರೆ, ಮತ್ತೊಂದೆಡೆ ಒಕ್ಕಲಿಗ ಮತ್ತು ವೀರಶೈವ ಮಠಾಧೀಶರು ಉಪಮುಖ್ಯಮಂತ್ರಿ ಬೆಂಬಲಕ್ಕೆ ನಿಂತರು. ಅಧಿಕಾರ ಹಸ್ತಾಂತರ ವಿಷಯ ಗೊಂದಲಕ್ಕೆ ಕಾರಣವಾಗಿ ಸರ್ಕಾರಕ್ಕೆ ತೊಂದರೆ ಆಗುವುದೆಂಬ ಉದ್ದೇಶದಿಂದ ವೇಣುಗೋಪಾಲ್ ಮಧ್ಯಪ್ರವೇಶ ಮಾಡಿ ಉಭಯ ನಾಯಕರ ಮನೆಯಲ್ಲೂ ಉಪಹಾರ ಕೂಟ ನಡೆಸುವುದರ ಮೂಲಕ ತಾತ್ಕಾಲಿಕ ಶಮನ ಮಾಡಿದ್ದರು. ಮಂಗಳವಾರ ಶಿವಕುಮಾರ್ ನಿವಾಸದಲ್ಲಿ ನಡೆದ ಉಪಹಾರ ಕೂಟ ಮುಗಿಯುತ್ತಿದ್ದಂತೆ ಅಧಿಕಾರ ಉಳಿಸಿಕೊಳ್ಳುವ ಹಾಗೂ ಪಡೆಯುವ ತೆರೆಮರೆಯ ಕಸರತ್ತನ್ನು ಮುಖ್ಯಮಂತ್ರಿ ಹಾಗೂ ಉಪಮುಖ್ಯಮಂತ್ರಿ ಆರಂಭಿಸಿದ್ದಾರೆ.

ನಾನು ದೆಹಲಿಗೆ ಹೋಗಲ್ಲ

ಗುರುಗಳು ಮಹಾತ್ಮ ಗಾಂಧಿಯವರೊಂದಿಗೆ ಭೇಟಿಯಾದ ಶತಮಾನೋತ್ಸವದ ಸ್ಮರಣಾರ್ಥ ಕಾರ್ಯಕ್ರಮದಲ್ಲಿ ಭಾಗವಹಿಸಲು ಮಂಗಳೂರಿಗೆ ತೆರಳುವ ಮುನ್ನ ಕಾವೇರಿ ಅತಿಥಿ ಗೃಹಕ್ಕೆ ಸುದ್ದಿಗಾರರೊಂದಿಗೆ ಮಾತನಾಡಿದರು. ಶಿವಕುಮಾರ್ ದೆಹಲಿಗೆ ಹೋಗುತ್ತಿದ್ದಾರೆ ಎಂದು ವರದಿಗಾರರು ಗಮನಸೆಳೆದಾಗ, ಅವರು ಹೋಗಲು ಬಿಡಿ. ಯಾರಾದರೂ ಅವರಿಗೆ ಬೇಡ ಎಂದು ಹೇಳಿದ್ದಾರೆಯೇ? ಎಂದರು. ನೀವು ಹೋಗುವಿರಾ ಎಂದು ಕೇಳಿದಾಗ, ನನಗೆ ಆಹ್ವಾನ ಬಂದಾಗ ಮಾತ್ರ ನಾನು ಹೋಗುತ್ತೇನೆ. ನನಗೆ ಆಹ್ವಾನ ಬಂದಿಲ್ಲ, ಆದ್ದರಿಂದ ನಾನು ಹೋಗುತ್ತಿಲ್ಲ ಎಂದರು. ದೆಹಲಿಯಲ್ಲಿ ಸಭೆ ನಡೆಸಲು ಪಕ್ಷದ ಹೈಕಮಾಂಡ್‌ನಿಂದ ಯಾವುದೇ ನಿರ್ದೇಶನವಿದ್ದರೆ, ಅದನ್ನು ವೇಣುಗೋಪಾಲ್ ಮೂಲಕ ತಿಳಿಸಲಾಗುವುದು ಎಂದು ಅವರು ಹೇಳಿದರು.

ಹಸ್ತಾಂತರ ಪ್ರಕ್ರಿಯೆ ಆರಂಭವಾಗಿದೆ

ಅಧಿಕಾರ ಹಸ್ತಾಂತರ ಪ್ರಕ್ರಿಯೆ ಪೂರ್ಣಗೊಳ್ಳಲಿದೆ ಎಂಬ ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಶಿವಕುಮಾರ್ ಸಂಬಂಧಿ ಹಾಗೂ ಕಾಂಗ್ರೆಸ್ ಶಾಸಕ ರಂಗನಾಥ್, ರಾಜ್ಯದ ಏಳು ಕೋಟಿ ಜನತೆಗೆ ಶೀಘ್ರದಲ್ಲೇ ಸಂತಸದ ಸುದ್ದಿ ಸಿಗಲಿದೆ ಎಂಬುದಾಗಿ ನೀಡಿದ ಹೇಳಿಕೆ ಬೆನ್ನಲ್ಲೇ ಬಾಬಾ ಸಾಹೇಬ್ ಈ ಮಾತನ್ನಾಡಿದ್ದಾರೆ.

ಅಧಿಕಾರ ಹಸ್ತಾಂತರ ಗೊಂದಲ ಬಗೆಹರಿಸಬೇಕೆಂದೇ ನಾವು ದೆಹಲಿಗೆ ತೆರಳಿದ್ದೆವು. ಆಗ ನಮಗೆ ಯಾವುದೇ ಸ್ಪಷ್ಟ ಚಿತ್ರಣ ದೊರೆತಿರಲಿಲ್ಲ. ನಿನ್ನೆಯಿಂದ ಅಧಿಕಾರ ಹಸ್ತಾಂತರ ಪ್ರಕ್ರಿಯೆಗೆ ಚಾಲನೆ ದೊರೆತಿದ್ದು, ವಾರದಲ್ಲಿ ಶುಭ ಸಂದೇಶ ಲಭ್ಯವಾಗಲಿದೆ ಎಂದು ಪಾಟೀಲ್ ಹೇಳಿಕೆ ನೀಡುವುದಕ್ಕೂ, ಶಿವಕುಮಾರ್ ದೆಹಲಿಯಲ್ಲಿ ಬಿಡಾರ ಹೂಡಿರುವುದಕ್ಕೂ ರಾಜಕೀಯ ವಲಯದಲ್ಲಿ ಚರ್ಚೆಗೆ ಗ್ರಾಸವಾಗಿದೆ.

ಸಿಎಂ ಗಾದಿಯಿಂದ ಇಳಿಯುವುದು ಖಚಿತ

ಮುಖ್ಯಮಂತ್ರಿ ಗಾದಿಯಿಂದ ಯಾವಾಗ ಇಳಿಯುತ್ತಾರೆ ಎಂಬುದು ಪಕ್ಷದ ವರಿಷ್ಠರಿಗೆ ಮಾತ್ರ ತಿಳಿದಿದೆ ಎಂದರು. ಅದು 30 ತಿಂಗಳಾಗಬಹುದು, 33 ತಿಂಗಳಿರಬಹುದು ಅಥವಾ ಇನ್ನೂ ಹೆಚ್ಚಿನ ಸಮಯ ಆಗಬಹುದು. ಆದರೆ ಅಧಿಕಾರ ಬಿಡುವುದಂತೂ ನಿಶ್ಚಿತ, ಅದು ಯಾವಾಗ ಎಂಬುದನ್ನು ವರಿಷ್ಠರೇ ತೀರ್ಮಾನಿಸಬೇಕು. ಅಧಿಕಾರ ಹಸ್ತಾಂತರ ಗೊಂದಲ ನಿವಾರಣೆ ಆಗಿದೆ. ನಾವೆಲ್ಲರೂ ವರಿಷ್ಠರ ತೀರ್ಮಾನಕ್ಕೆ ಕಾಯುತ್ತಿದ್ದೇವೆ. ಸಿದ್ದರಾಮಯ್ಯ ಅವರು ವೈರಾಗ್ಯದ ಮಾತನ್ನಾಡಿರುವುದು ಸತ್ಯಕ್ಕೆ ಹತ್ತಿರವಾಗಿದೆ. ಅಧಿಕಾರ ಯಾರಿಗೂ ಶಾಶ್ವತವಲ್ಲ. ಅವರು ಕುರ್ಚಿ ಬಿಡಲು ಮಾನಸಿಕವಾಗಿ ಸಿದ್ಧರಾಗಿದ್ದಾರೆ. ಅದು ಯಾವಾಗಬೇಕಾದರೂ ಆಗಬಹುದು ಎಂದರು.

ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರಿಂದ ಲೋಕ ಕಲ್ಯಾಣಾರ್ಥ ವಿಶೇಷ ಪೂಜೆ



ಗಣಪತಿ ಆಶ್ರಮದಲ್ಲಿ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಲೋಕ ಕಲ್ಯಾಣಾರ್ಥ ವಿಶೇಷ ಪೂಜೆ ಸಲ್ಲಿಸಿದರು.

ಮೈಸೂರು, ಡಿ.3(ಎಂಟಿವೈ)– ಹನುಮ ಜಯಂತಿ ಅಂಗವಾಗಿ ಮೈಸೂರಿನ ಅವಧೂತ ದತ್ತಪೀಠದಲ್ಲಿ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ನೇತೃತ್ವದಲ್ಲಿ ಬುಧವಾರ ಲೋಕ ಕಲ್ಯಾಣಾರ್ಥ ವಿಶೇಷ ಪೂಜೆ ಸಲ್ಲಿಸಲಾಯಿತು.

ಮೈಸೂರು–ಊಟಿ ಮುಖ್ಯ ರಸ್ತೆಯಲ್ಲಿರುವ ಅವಧೂತ ದತ್ತಪೀಠದ ಆವರಣದಲ್ಲಿ ನಡೆದ ಧಾರ್ಮಿಕ ಕಾರ್ಯಕ್ರಮದಲ್ಲಿ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಹನುಮನ ಮೂರ್ತಿಗೆ ವಿವಿಧ ಪೂಜೆ ನೆರವೇರಿಸಿ, ಲೋಕ ಕಲ್ಯಾಣಕ್ಕಾಗಿ ವಿಶೇಷ ಪ್ರಾರ್ಥನೆ ಸಲ್ಲಿಸಿದರು. ಪೂಜಾ ಕಾರ್ಯ ನೆರವೇರಿದ ಬಳಿಕ ನೆರೆದಿದ್ದ ಭಕ್ತರಿಗೆ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಆಶೀರ್ವಚನ ನೀಡಿ, ರಾಮಾಯಣದಲ್ಲಿ ಶ್ರೀರಾಮನು ಸೀತೆಯನ್ನು ಹುಡುಕಿಕೊಡುವಂತೆ ಹಾಗೂ ಲಂಕಾ ಪ್ರವೇಶದ ನಂತರ ಸೀತೆಯನ್ನು ಶ್ರೀರಾಮನ ಬಳಿ ಸೇರಿಸುವಂತೆ ಹನುಮಂತನನ್ನು ಕೋರಿಕೊಂಡರು. ಶ್ರೀರಾಮ ಮತ್ತು ಸೀತೆಯು 'ಕಾರ್ಯಸಿದ್ಧಿ ಮಾಡಿಕೊಡು' ಎಂದು ಹನುಮಂತನನ್ನೇ ಪ್ರಾರ್ಥಿಸಿದ್ದರು. ಹಾಗಾಗಿ ಹನುಮಂತನು ಭಕ್ತರ ಪಾಲಿನ 'ಕಾರ್ಯಸಿದ್ಧಿ ಹನುಮಂತ'ನಾಗಿದ್ದಾನೆ ಎಂದು ತಿಳಿಸಿದರು.

ಭಾರತದಲ್ಲಿ ವರ್ಷಕ್ಕೆ ಆರು ಬಾರಿ ಹನುಮ ಜಯಂತಿ ಬರುತ್ತದೆ. ಆದರೆ ದತ್ತಪೀಠದಲ್ಲಿರುವ ಹನುಮಂತನು ವಿಶೇಷವಾಗಿದ್ದು, ಆಕಾಶ, ಭೂಮಿ ಮತ್ತು ಪಾತಾಳ ಮೂರು ಲೋಕಗಳನ್ನು ಪ್ರತಿನಿಧಿಸುವ ವಿಶ್ವರೂಪವನ್ನು ಹೊಂದಿದ್ದಾನೆ. ದಶಕಂಠ ರಾವಣ, ಶತಕಂಠ ಮತ್ತು ಪಾತಾಳ ರಾವಣ (ಮೈರಾವಣ) ಎಂಬ ಮೂವರು ರಾವಣರನ್ನು ಸಂಹರಿಸಿ, ಆ ಅಸುರರಿಗೆ ಮುಕ್ತಿ ನೀಡಿ ತನ್ನಲ್ಲೇ ಐಕ್ಯ ಮಾಡಿಕೊಂಡ ಸಂಕೇತವಾಗಿ ಇಲ್ಲಿನ ವಿಗ್ರಹ ಮಹತ್ವ ಪಡೆದಿದೆ. 'ಫಲ ಸಮರ್ಪಣೆ' ಮಾಡುವುದು ಪ್ರಸಿದ್ಧ ವ್ರತವಾಗಿದ್ದು, ಭಕ್ತರು ಕೇವಲ ಒಂದು ತೆಂಗಿನಕಾಯಿ ಸಮರ್ಪಿಸಿದರೆ ಹನುಮಂತನು ಇಷ್ಟಾರ್ಥವನ್ನು ನೆರವೇರಿಸುತ್ತಾನೆ ಎಂದರು.

ಘರ್ ವಾಪಸಿ: ಇದೇ ವೇಳೆ ಚಾಮರಾಜನಗರ, ಗುಂಡ್ಲುಪೇಟೆ ಸೇರಿದಂತೆ ವಿವಿಧೆಡೆ ವಿವಿಧ ಧರ್ಮಗಳಿಗೆ ಮತಾಂತರಗೊಂಡಿದ್ದ ಇನ್ನೂರಕ್ಕೂ ಹೆಚ್ಚು ಮಂದಿ ಸ್ವಾಮೀಜಿಯವರ ಸಮ್ಮುಖದಲ್ಲಿ ಮತ್ತೆ ಹಿಂದೂ ಧರ್ಮಕ್ಕೆ ವಾಪಸಾದರು. ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರು ಹಿಂದೂ ಧರ್ಮಕ್ಕೆ ವಾಪಸಾದವರೆಲ್ಲರಿಗೂ ಆಶೀರ್ವಾದ ನೀಡಿ, ಪ್ರತಿದಿನ ಯಾವುದಾದರೂ ಒಂದು ದೇವಸ್ಥಾನಕ್ಕೆ ಹೋಗಿ ಪೂಜೆ ಮಾಡಿ ದೇವರಿಗೆ ನಮಸ್ಕರಿಸಬೇಕು ಎಂದು ಸಲಹೆ ನೀಡಿದರು.

ಈ ಸಂದರ್ಭದಲ್ಲಿ ಗಣಪತಿ ಸಚ್ಚಿದಾನಂದ ಆಶ್ರಮದ ಕಿರಿಯ ಸ್ವಾಮೀಜಿ ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ ಉಪಸ್ಥಿತರಿದ್ದರು. ಇದೇ ವೇಳೆ ಮಹಿಳೆಯರಿಗೆ ಸೀರೆ ವಿತರಿಸಲಾಯಿತು.

ಶಾಸಕ ಕೆ.ಹರೀಶ್‌ಗೌಡರಿಗೆ ಅಭಿನಂದನೆ...



ಮೈಸೂರಿನ ಯಾದವಗಿರಿಯಲ್ಲಿರುವ ಶ್ರೀ ಉತ್ತರಾದಿ ಮಠದ ಶ್ರೀ ಆಂಜನೇಯಸ್ವಾಮಿ ದೇವಸ್ಥಾನದಲ್ಲಿ ಶ್ರೀ ಹನುಮದ್ ವ್ರತ ಪ್ರಯುಕ್ತ ಏರ್ಪಡಿಸಿದ್ದ ಪವಮಾನ ಹೋಮ ಹಾಗೂ ನವಗ್ರಹ ಹೋಮ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಶಾಸಕ ಕೆ.ಹರೀಶ್‌ಗೌಡ ಅವರನ್ನು ಅಭಿನಂದಿಸಲಾಯಿತು. ಈ ವೇಳೆ ಕೃಷ್ಣರಾಜ ಕ್ಷೇತ್ರದ ಬ್ರಾಹ್ಮಣ ಮುಖಂಡರೂ ಆದ ಅಖಿಲ ಭಾರತ ಬ್ರಾಹ್ಮಣ ಏಕೀಕೃತ ಪರಿಷತ್ ರಾಜ್ಯಾಧ್ಯಕ್ಷ ಎನ್.ಎಂ.ನವೀನ್‌ಕುಮಾರ್, ಶ್ರೀ ಉತ್ತರಾದಿ ಮಠ ವ್ಯವಸ್ಥಾಪಕ ಪಂ. ಶ್ರೀ ಅನಿರುದ್ಧಾಚಾರ್ಯ ಪಾಂಡುರಂಗಿ, ಹೊಯ್ಸಳ ಕರ್ನಾಟಕ ಸಂಘದ ಅಧ್ಯಕ್ಷ ಕೆ.ಆರ್.ಸತ್ಯ ನಾರಾಯಣ, ಮಾಜಿ ಕಾರ್ಪೊರೇಟರ್ ಪ್ರಮೀಳಾ ಭರತ್, ಅಗಸ್ತ್ಯ ಕೋ–ಆಪರೇಟಿವ್ ಸೊಸೈಟಿ ನಿಕಟಪೂರ್ವ ಅಧ್ಯಕ್ಷ ಸಿ.ವಿ.ಪಾರ್ಥಸಾರಥಿ, ಹಿರಿಯ ಸಮಾಜ ಸೇವಕ ರಘುರಾಮ ವಾಜಪೇಯಿ, ಅಖಿಲ ಕರ್ನಾಟಕ ಬ್ರಾಹ್ಮಣ ಸಭಾ ಸಂಘಟನಾ ಕಾರ್ಯದರ್ಶಿ ಎಸ್.ಎಸ್.ಪ್ರಸಾದ್ ಇನ್ನಿತರರು ಉಪಸ್ಥಿತರಿದ್ದರು.

ನಿರಾಶ್ರಿತರಿಗೆ ಹೊದಿಕೆ ವಿತರಣಾ ಅಭಿಯಾನಕ್ಕೆ ಚಾಲನೆ

ಮಾನವೀಯತೆ ಮೈಗೂಡಿಸಿ ಜೀವನ ಸಾಗಿಸಿ: ಕೆ.ಬಿ.ಲಿಂಗರಾಜು



ಕೆಎಂಪಿಕೆ ಚಾರಿಟಬಲ್ ಟ್ರಸ್ಟ್ ವತಿಯಿಂದ ಬಡವರಿಗೆ ಹೊದಿಕೆ ವಿತರಿಸಲಾಯಿತು.

ಮೈಸೂರು, ಡಿ. 3– ಮೈಸೂರಿನ ರಸ್ತೆ ಬದಿಯಲ್ಲಿ ಆಶ್ರಯ ಪಡೆದಿರುವ ನಿರ್ಗತಿಕರು ಹಾಗೂ ಬಡವರಿಗೆ ಚಳಿಗಾಲ ಹಾಗೂ ವಿಪರೀತ ತಂಡಿಗಾಳಿ ವಾತಾವರಣದ ಪರಿಣಾಮ ಆರೋಗ್ಯ ಸಮಸ್ಯೆ ಬರುವ ಅಪಾಯವಿದೆ. ಹಾಗಾಗಿ ಕೆಎಂಪಿಕೆ ಚಾರಿಟಬಲ್ ಟ್ರಸ್ಟ್ ವತಿಯಿಂದ ಹೊದಿಕೆ ವಿತರಣಾ ಅಭಿಯಾನ ಹಮ್ಮಿಕೊಳ್ಳಲಾಗಿದೆ.

ರೈಲ್ವೆ ನಿಲ್ದಾಣ ಮುಂಭಾಗ ರಸ್ತೆ ಬದಿ ಮಲಗಿರುವ ಬಡವರಿಗೆ ಹೊದಿಕೆ ನೀಡುವ ಮೂಲಕ ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ ಅಧ್ಯಕ್ಷ ಕೆ.ಬಿ. ಲಿಂಗರಾಜು ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು, ಬಡವರಿಗೆ ಸೇವೆ ಸಲ್ಲಿಸಿದರೆ ದೇವರಿಗೆ ಸಲ್ಲುತ್ತದೆ. ಇಂತಹ ಸೇವೆಗೈದು ಮಾನವೀಯತೆ ಮೈಗೂಡಿಸಿಕೊಂಡು ಜೀವನ ಸಾಗಿಸಿ ಬದುಕನ್ನು ಹಸನುಗೊಳಿಸಿ ಎಂದರು.

ಕೆಎಂಪಿಕೆ ಟ್ರಸ್ಟ್ ಅಧ್ಯಕ್ಷ ವಿಕ್ರಂ ಅಯ್ಯಂಗಾರ್ ಸ್ನೇಹಿತರ ಸಹಕಾರದೊಂದಿಗೆ ಕಳೆದ 6 ವರ್ಷದಿಂದ ನಿರಂತರವಾಗಿ ಡಿಸೆಂಬರ್ ಹಾಗೂ ಜನವರಿ ತಿಂಗಳಿನಲ್ಲಿ ಚಳಿಗಾಲದಲ್ಲಿ ನಗರದ ವಿವಿಧ ಸ್ಥಳದಲ್ಲಿ ಮಲಗಿದ್ದವರ ಸ್ಥಿತಿಗತಿ ನೋಡಿ ಹೊದಿಕೆ ವಿತರಿಸುತ್ತಾ ಬಂದಿದ್ದೇವೆ. ಜೊತೆಗೆ ಕೆಲವೊಂದು ಹಾಡಿಗಳಿಗೆ ಭೇಟಿ ಕೊಟ್ಟು ಅಲ್ಲಿನ ಜನರಿಗೆ ಹೊದಿಕೆ ವಿತರಿಸಲಾಗುವುದೆಂದರು. ಬಿಜೆಪಿ ಮುಖಂಡ ಜೋಗಿಮಂಜು, ಅಜಯ್‌ಶಾಸ್ತ್ರಿ, ಎಸ್.ಬಿ. ರಾಮು, ರಾಜೇಶ್, ಕಡಕೊಳ ಆರೋಗ್ಯ ಅಧಿಕಾರಿ ಮಂಜುನಾಥ್, ಸಚಿನ್ ನಾಯಕ್, ಅಮಿತ್ ಇನ್ನಿತರರು ಹಾಜರಿದ್ದರು.

ಡಿ.6, ಅಂಬೇಡ್ಕರ್‌ರ 69ನೇ ಪರಿನಿರ್ವಾಣ ದಿನಾಚರಣೆ

ಮೈಸೂರು: ಜಿಲ್ಲಾಡಳಿತದ ವತಿಯಿಂದ ಡಿ.6ರಂದು ಬೆಳಿಗ್ಗೆ 9.30 ಗಂಟೆಗೆ ಡಾ.ಬಿ.ಆರ್.ಅಂಬೇಡ್ಕರ್ ರವರ 69ನೇ ವರ್ಷದ ಮಹಾಪರಿನಿರ್ವಾಣ ದಿನದ ಅಂಗವಾಗಿ ಮೈಸೂರಿನ ಟೌನ್‌ಹಾಲ್ ಆವರಣದಲ್ಲಿರುವ ಡಾ.ಅಂಬೇಡ್ಕರ್ ಪುತ್ಥಳಿಗೆ ಪುಷ್ಪಾರ್ಚನೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಅಲ್ಪಸಂಖ್ಯಾತ ಬಡವರ ಮಕ್ಕಳ ವಿವಾಹಕ್ಕೆ ಆರ್ಥಿಕ ಯೋಜನೆ

ಫಲಾನುಭವಿಗಳ ಆಯ್ಕೆ ವೇಳೆ ಎಚ್ಚರ ವಹಿಸಿ

● ಶಾಸಕ ತನ್ವೀರ್ ಸೇಠ್ ಸಲಹೆ ● ವಯಸ್ಸಿನ ದಾಖಲಾತಿ ಕಡ್ಡಾಯವಾಗಿ ಪರಿಶೀಲಿಸಿ

ಮೈಸೂರು,ಡಿ.3(ಎಂಟಿವೈ)– ಅಲ್ಪಸಂಖ್ಯಾತ ಸಮುದಾಯಗಳ ಬಡವರ ಮಕ್ಕಳ ಸರಳ ವಿವಾಹಕ್ಕೆ ಆರ್ಥಿಕ ನೆರವು ನೀಡುವ ಯೋಜನೆಯನ್ನು ಅರ್ಹ ಸಮುದಾಯಗಳಿಗೆ ತಲುಪಿಸಲು ಶ್ರಮಿಸಬೇಕು ಎಂದು ಶಾಸಕ ತನ್ವೀರ್ ಸೇಠ್ ಸಲಹೆ ನೀಡಿದ್ದಾರೆ.

ಮೈಸೂರಿನ ಸಿದ್ಧಾರ್ಥನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಬುಧವಾರ ಅಲ್ಪಸಂಖ್ಯಾತ ಸಮುದಾಯಗಳ ಸರಳ ವಿವಾಹ ಪ್ರೋತ್ಸಾಹ ಧನ ವಿತರಣೆ ಕುರಿತು ಅಧಿಕಾರಿಗಳ ಸಭೆ ನಡೆಸಿ ಮಾತನಾಡಿದ ಅವರು, ಆರ್ಥಿಕವಾಗಿ ಹಿಂದುಳಿದಿರುವ ಅಲ್ಪಸಂಖ್ಯಾತ ಸಮುದಾಯದ ಮಕ್ಕಳ ಸರಳ ವಿವಾಹಕ್ಕೆ ಪ್ರತಿ ಜೋಡಿಗೆ 50 ಸಾವಿರ ರೂ. ಸಹಾಯ ಧನ ನೀಡಲಾಗುತ್ತದೆ. ಈ ಬಾರಿ ಮೈಸೂರು ಜಿಲ್ಲೆಯಲ್ಲಿ 150 ಜೋಡಿಯ ಸರಳ ವಿವಾಹ ಮಾಡುವ ಗುರಿ ಹೊಂದಲಾಗಿದ್ದು, ಅರ್ಹ ಫಲಾನುಭವಿಗಳನ್ನು ಗುರುತಿಸಬೇಕು. ಅರ್ಜಿ ಸಲ್ಲಿಸುವ ಅಲ್ಪಸಂಖ್ಯಾತ ವಧುವಿಗೆ ಕನಿಷ್ಠ 18ರಿಂದ ಗರಿಷ್ಠ 42 ವರ್ಷ, ವರನಿಗೆ ಕನಿಷ್ಠ 21ರಿಂದ ಗರಿಷ್ಠ 45 ವರ್ಷ ವಯಸ್ಸಾಗಿರಬೇಕು. ಬಾಲ್ಯವಿವಾಹಕ್ಕೆ ಆಸ್ಪದ ಕೊಡದಂತೆ ಅಧಿಕಾರಿಗಳು ಎಚ್ಚರಿಕೆ ವಹಿಸಿ ಯೋಜನೆಯನ್ನು ಅನುಷ್ಠಾನಗೊಳಿಸಬೇಕು ಎಂದು ಸೂಚನೆ ನೀಡಿದರು.



ಮೈಸೂರಿನ ಸಿದ್ಧಾರ್ಥನಗರದಲ್ಲಿರುವ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಅಲ್ಪಸಂಖ್ಯಾತ ಸಮುದಾಯಗಳ ಸರಳ ವಿವಾಹ ಪ್ರೋತ್ಸಾಹಧನ ಕಾರ್ಯಕ್ರಮ ಕುರಿತ ಅಧಿಕಾರಿಗಳ ಸಭೆಯನ್ನು ಶಾಸಕ ತನ್ವೀರ್ ಸೇಠ್ ನಡೆಸಿದರು.

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳು ಈ ಯೋಜನೆ ಫಲಾನುಭವಿಗಳನ್ನು ಗುರುತಿಸಬೇಕು. ತಂದೆ ಇಲ್ಲವೇ ತಾಯಿ ಇಲ್ಲದ ವಧುವನ್ನು ಆಯ್ಕೆ ಮಾಡಿ ಸವಲತ್ತು ಒದಗಿಸಿದರೆ ಯೋಜನೆ ಹೆಚ್ಚಿನ ಸಾರ್ಥಕತೆ ಪಡೆಯುತ್ತದೆ. ಅಲ್ಪಸಂಖ್ಯಾತ ಸಮುದಾಯದಡಿ ಬರುವ ಮುಸ್ಲಿಂ, ಕ್ರಿಶ್ಚಿಯನ್, ಜೈನ, ಬೌದ್ಧ, ಸಿಖ್ ಹಾಗೂ ಪಾರ್ಸಿ ಸಮುದಾಯದವರಿಗೂ ಸರಳ ವಿವಾಹ ಯೋಜನೆಯ ಸೌಲಭ್ಯ ದೊರಕುವಂತೆ ನೋಡಿಕೊಳ್ಳಬೇಕು. ಆಯಾ ಸಮುದಾಯಕ್ಕೆ ಗುರಿ ನಿಗದಿ ಮಾಡಿ ಅರ್ಜಿ ಆಹ್ವಾನಿಸಬೇಕು ಎಂದರು.

ಸರಳ ವಿವಾಹ ಯೋಜನೆಯಡಿ ಅರ್ಜಿ ಸ್ವೀಕೃತಿಯಾದ ನಂತರ ವಧು ಹಾಗೂ ವರ ನೀಡಿರುವ ವಯಸ್ಸಿನ ದಾಖಲಾತಿಗಳನ್ನು ಪರಿಶೀಲಿಸಬೇಕು. ಅರ್ಜಿದಾರರು ವಿವಾಹಿತರೇ ಎಂಬುದನ್ನು ಖಚಿತಪಡಿಸಿಕೊಂಡು ನಂತರ ಯೋಜನೆಯ ಸೌಲಭ್ಯ ಒದಗಿಸಿಕೊಡಲು ಕ್ರಮ ಕೈಗೊಳ್ಳಬೇಕು ಎಂದು ತಿಳಿಸಿದರು.

ಇದೇ ವೇಳೆ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ ಮಾತನಾಡಿ, ಅಲ್ಪಸಂಖ್ಯಾತ ಸಮುದಾಯಗಳ ಸರಳ ವಿವಾಹ ಪ್ರೋತ್ಸಾಹ ಧನ ಕಾರ್ಯಕ್ರಮದ ಫಲಾನುಭವಿಗಳ ಆಯ್ಕೆ ಪ್ರಕ್ರಿಯೆಯಲ್ಲಿ ವಧು–ವರರ ವಯಸ್ಸು ಪರಿಶೀಲಿಸುವಾಗ ಕಡ್ಡಾಯವಾಗಿ ಎಸ್‌ಎಸ್‌ಎಲ್‌ಸಿ ಅಂಕಪಟ್ಟಿ ಇಲ್ಲವೇ ಜನನ ಪ್ರಮಾಣ ಪತ್ರದ ಮೂಲಕ ಖಚಿತಪಡಿಸಿಕೊಳ್ಳಬೇಕು. ವಿವಾಹದ ನೋಂದಣಿಗೆ ನೋಂದಣಾಧಿಕಾರಿಗಳ ಕಚೇರಿಯೊಂದಿಗೆ ಸಮನ್ವಯ ಸಾಧಿಸಿ ವಿವಾಹದ ಸಂದರ್ಭದಲ್ಲಿ ನೊಂದಣಿಗೆ ಕ್ರಮ ಕೈಗೊಳ್ಳುವಂತೆ ಸಲಹೆ ನೀಡಿದರು. ಸಭೆಯಲ್ಲಿ ಮೈಸೂರು ನಗರಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸೀಫ್, ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಜಿಲ್ಲಾ ಅಧಿಕಾರಿ ಶಿಲ್ಪ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಸಹಾಯಕ ನಿರ್ದೇಶಕರಾದ ಎಸ್.ಹೆಚ್.ನಿರ್ಮಲಾ ಸೇರಿದಂತೆ ಜಿಲ್ಲಾ ಮಟ್ಟದ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

ಡಿಸಿಎಂ ಹೋಮ್ ಟೂರ್ ಆಯ್ತು! ಒಮ್ಮೆ ಸರ್ಕಾರಿ ಸ್ಕೂಲ್ ಟೂರ್ ಹೋಗಿ ಬನ್ನಿ!

ಸಿಎಂ ಸಿದ್ದರಾಮಯ್ಯ ಕಾಲೆಳೆದ ವಿಪಕ್ಷ ನಾಯಕ ಆರ್.ಅಶೋಕ್!

ಬೆಂಗಳೂರು, ಡಿ.3(ಕೆಎಂಶಿ)– ಮುಖ್ಯಮಂತ್ರಿ ಸಿದ್ದರಾಮಯ್ಯ ಕಾಂಗ್ರೆಸ್ ಸೇರಿ ಸರಿಸುಮಾರು 20 ವರ್ಷಗಳಾದ ಮೇಲೆ ಮೊಟ್ಟ ಮೊದಲ ಬಾರಿಗೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮನೆಗೆ ಭೇಟಿ ನೀಡಿ, ಇಡ್ಲಿ, ನಾಟಿಕೋಳಿ ಉಪಹಾರ ಸವಿದು 'ಹೋಮ್ ಟೂರ್' ಮಾಡಿಕೊಂಡು ಬಂದಿದ್ದಾರೆ ಎಂದು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಟೀಕಿಸಿದ್ದಾರೆ.



ಈ ಸಂಬಂಧ ಟ್ವೀಟ್ ಮಾಡಿರುವ ಅವರು, ಮುಂದಿನ ಬ್ರೇಕ್ ಫಾಸ್ಟ್ ಮೀಟಿಂಗ್ ಎಲ್ಲಿ, ಯಾರ ಜೊತೆ ಅಂತ ನಿಮ್ಮ ಹೈಕಮಾಂಡ್ ಏಜೆಂಟ್ ಕೆ.ಸಿ.ವೇಣುಗೋಪಾಲ್ ಆದೇಶ ಕೊಡುವುದಕ್ಕೂ ಮುಂಚೆ ಒಮ್ಮೆ 'ಸರ್ಕಾರಿ ಸ್ಕೂಲ್ ಟೂರ್' ಮಾಡಿಕೊಂಡು ಬನ್ನಿ ಎಂದು ಒತ್ತಾಯಿಸಿದ್ದಾರೆ. ಶೌಚಾಲಯಗಳೇ ಇಲ್ಲದ ಶಾಲೆಗಳು, ಶಿಥಿಲಾವಸ್ಥೆಯಲ್ಲಿರುವ ಶಾಲಾ ಕೊಠಡಿಗಳು, ಬಿದ್ದು ಹೋಗುತ್ತಿರುವ ಗೋಡೆಗಳು, ಶಿಕ್ಷಕರಿಲ್ಲದ ತರಗತಿಗಳನ್ನು ಒಮ್ಮೆ ಕಣ್ತುಂಬಿಕೊಂಡು ಬನ್ನಿ ಸಿದ್ದರಾಮಯ್ಯನವರೇ. ಇಂತಹ ಲಜ್ಜೆಗೆಟ್ಟ ಸರ್ಕಾರವನ್ನು ಇಡೀ ಪ್ರಪಂಚದ ಇತಿಹಾಸದಲ್ಲೇ ಕಾಣಲು ಸಾಧ್ಯವಿಲ್ಲ ಎಂದು ಕುಟುಕಿದ್ದಾರೆ.

ನಾಳೆಯಿಂದ ಸಿಎಫ್‌ಟಿಆರ್‌ಐನಲ್ಲಿ ಜಿಐ ಮಹೋತ್ಸವ–3.0

ಮೈಸೂರು, ಡಿ.3(ಆರ್‌ಕೆ)– ಭಾರತದ ಭೌಗೋಳಿಕ ಸೂಚನಾ ಪರಂಪರೆಯನ್ನು ಬಿಂಬಿಸಲು ಮೈಸೂರಿನ ಸಿಎಫ್‌ಟಿಆರ್‌ಐನಲ್ಲಿ ಡಿಸೆಂಬರ್ 5ರಿಂದ 8ರವರೆಗೆ ಜಿಐ ಮಹೋತ್ಸವವನ್ನು ಆಯೋಜಿಸಲಾಗಿದೆ.

ಡಿ.5ರಂದು ನಬಾರ್ಡ್ ಕಾರ್ಯನಿರ್ವಾಹಕ ನಿರ್ದೇಶಕ ಆರ್.ಕೆ.ಗಣೇಶ್ ಮೂರ್ತಿ ಮಹೋತ್ಸವಕ್ಕೆ ಚಾಲನೆ ನೀಡಲಿದ್ದು, ಸಿಎಸ್‌ಐಆರ್–ಸಿಎಫ್‌ಟಿಆರ್‌ಐ ನಿರ್ದೇಶಕ ಡಾ. ಗಿರಿಧರ್ ಪರ್ವತಮ್ ಅಧ್ಯಕ್ಷತೆ ವಹಿಸುವರು. ಎಂ.ಎಸ್.ಎಂ.ಇ. ಜಂಟಿ ನಿರ್ದೇಶಕ ದೇವರಾಜ್, ಮಧುರೈನ ಎಸಿ ಅಂಡ್ ಆರ್‌ಐ ಡೀನ್ ಡಾ. ಪಿ.ಸಿ. ಮಹೇಂದ್ರನ್, ಕೊಯಮತ್ತೂರಿನ ಡಿ.ಎ.ಬಿ.ಡಿ ನಿರ್ದೇಶಕ ಡಾ.ಇ. ಸೋಮ ಸುಂದರಮ್, ಐಐಪಿಎಂ ನಿರ್ದೇಶಕ ಡಾ.ಎಸ್.ಸೆಂಥಿಲ್ ವಿನಯಾಗಂ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸುವರು.



ಭಾರತದ ಸಾಂಸ್ಕೃತಿಕ, ಪರಿಸರ ಮತ್ತು ಕುಶಲಕರ್ಮಿ ವೈವಿಧ್ಯತೆಯ ಭೌಗೋಳಿಕ ಸೂಚನಾ (ಜಿಐ) ಉತ್ಪನ್ನಗಳಲ್ಲಿ ಅಭಿವ್ಯಕ್ತಿಯಾಗುವ ಸಾಂಪ್ರದಾಯಿಕ ಜ್ಞಾನ, ಪ್ರಾದೇಶಿಕ ಅಭ್ಯಾಸಗಳು ಮತ್ತು ಸಮುದಾಯ ಪರಂಪರೆಯಿಂದ ರೂಪುಗೊಂಡ ವಿಶಿಷ್ಟ ಸೃಷ್ಟಿಗಳಾಗಿವೆ. ಪ್ರತಿಯೊಂದು ಜಿಐ ಉತ್ಪನ್ನವು ತಲೆಮಾರುಗಳಿಂದ ಈ ಸಾಂಪ್ರದಾಯಗಳನ್ನು ಸಂರಕ್ಷಿಸಿಕೊಂಡು ಬಂದಿವೆ.

ಜಿಐ ಪರಿಸರ ವ್ಯವಸ್ಥೆ ಉತ್ತೇಜಿಸಲು ಹಾಗೂ ಸಾಂಪ್ರದಾಯಿಕ ಉತ್ಪಾದಕರಿಗೆ ಮಾರುಕಟ್ಟೆ ಸಂಪರ್ಕಗಳನ್ನು ಬಲಪಡಿಸಲು ಕೇಂದ್ರದ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳ ಸಚಿವಾಲಯವು ಈ ರೀತಿಯ ಸರಣಿ ಕಾರ್ಯಕ್ರಮಗಳನ್ನು ನಡೆಸುತ್ತಾ ಬಂದಿದೆ. ಮಹೋತ್ಸವದಲ್ಲಿ ನಬಾರ್ಡ್ ಮಧುರೈ ಕೃಷಿ ವ್ಯವಹಾರ ಇನ್ಕ್ಯುಬೇಷನ್ ಫೋರಮ್ ಜಿಐ ಮಹೋತ್ಸವ–3.0 ಭೌಗೋಳಿಕ ಸೂಚನಾ ಉತ್ಪನ್ನಗಳ ಪ್ರದರ್ಶನವನ್ನು ಆಯೋಜಿಸಿದೆ. 4 ದಿನಗಳ ಕಾಲ ಪ್ರತಿ ದಿನ ಬೆಳಿಗ್ಗೆ 10 ರಿಂದ ಸಂಜೆ 5 ಗಂಟೆವರೆಗೆ ಪ್ರದರ್ಶನ ತೆರೆದಿರುತ್ತದೆ.

ಅದೇ ವೇಳೆ ಕೃಷಿ ಆಹಾರದಲ್ಲಿ ನಾವೀನ್ಯತೆ, ಸಂಶೋಧನೆ ಮತ್ತು ಉದ್ಯಮಶೀಲತೆಯನ್ನು ಬೆಂಬಲಿಸಲು ಒಡಂಬಡಿಕೆಗೆ ಸಹಿ ಮಾಡಲಾಗುವುದು ಹಾಗೂ ಹಲವು ಸ್ಟಾರ್ಟ್‌ಅಪ್ ಉತ್ಪನ್ನಗಳನ್ನೂ ಬಿಡುಗಡೆ ಮಾಡಲಾಗುತ್ತದೆ. ಡಿ.8ರಂದು ನಡೆಯುವ ಸಮಾರೋಪ ಸಮಾರಂಭದಲ್ಲಿ ವಿಶೇಷ ಅಧಿವೇಶನದಲ್ಲಿ ಆತ್ಯಾಧುನಿಕ ವಿಷಯಗಳ ಕುರಿತು ಸಂಪನ್ಮೂಲ ವ್ಯಕ್ತಿಗಳು ಮಾತನಾಡುವರು ಎಂದು ಪ್ರಕಟಣೆ ತಿಳಿಸಿದೆ.

ಡಿ.8, 9ರಂದು ಸ್ಮಾರ್ಟ್ ಇಂಡಿಯಾ ಹ್ಯಾಕಥಾನ್

ಮೈಸೂರು,ಡಿ.3(ಆರ್‌ಕೆ)– ಮೈಸೂರಿನ ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜಿನಲ್ಲಿ ಡಿಸೆಂಬರ್ 8 ಮತ್ತು 9ರಂದು ಸ್ಮಾರ್ಟ್ ಇಂಡಿಯಾ ಹ್ಯಾಕಥಾನ್ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.

ಅಂದು ಪ್ರಧಾನಮಂತ್ರಿ ನರೇಂದ್ರ ಮೋದಿಯವರು ವರ್ಚುವಲ್ ಮೂಲಕ ದೇಶಾದ್ಯಂತ ಯುವ ಸಂಶೋಧಕರನ್ನು ದ್ದೇಶಿಸಿ ಮಾತನಾಡಲಿದ್ದು, ಈ ಕಾರ್ಯಕ್ರಮಕ್ಕೆ ಮೈಸೂರಿನ ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜನ್ನು ನೋಡಲ್ ಕೇಂದ್ರವಾಗಿ ಆಯ್ಕೆ ಮಾಡಲಾಗಿದೆ.

ಭಾರತ ಸರ್ಕಾರದ ಶಿಕ್ಷಣ ಸಚಿವಾಲಯದ ಇನ್ನೋವೇಷನ್ ಸೆಲ್ (ಎಂಐಸಿ), ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿ (ಎಐಸಿಟಿಇ) ಹಾಗೂ ಇಂಟರ್–ಇನ್‌ಸ್ಟಿಟ್ಯೂಷನಲ್ ಇನ್‌ಕ್ಲೂಸಿವ್ ಇನ್ನೋವೇಷನ್ ಸೆಂಟರ್ ಸಂಯುಕ್ತಾಶ್ರಯದಲ್ಲಿ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.

ದೇಶಾದ್ಯಂತ 60 ನೋಡಲ್ ಕೇಂದ್ರಗಳಲ್ಲಿ ನಡೆಯುತ್ತಿರುವ ಈ ಕಾರ್ಯಕ್ರಮದಲ್ಲಿ 42 ಸಾಫ್ಟ್‌ವೇರ್, 18 ಹಾರ್ಡ್‌ವೇರ್ ಆವೃತ್ತಿ ಕೇಂದ್ರಗಳು ಸೇರಿವೆ. ವಿವಿಸಿಇಯಲ್ಲಿ ಸುಮಾರು 140 ಸ್ಪರ್ಧಿಗಳು ಭಾಗವಹಿಸಲಿದ್ದಾರೆ ಎಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

'ಹನು' ಎಂದರೆ 'ಜ್ಞಾನ', ಅದ ಹೊಂದಿದ್ದವನೇ ಹನುಮಂತ

ಹನುಮದ್ ವ್ರತದ ಅಂಗವಾಗಿ ಮೈಸೂರಲ್ಲಿ ಬೃಹತ್ ಪಾದಯಾತ್ರೆ

ಮೈಸೂರು, ಡಿ.3–ಲೋಕದ ಸಮಸ್ತ ಜೀವಿಗಳಿಗೆ ಜ್ಞಾನ ಮತ್ತು ವೈರಾಗ್ಯಗಳನ್ನು ನೀಡುವ ಹನುಮಂತನ ಆರಾಧನೆಗೆ ಶಾಸ್ತ್ರಗಳಲ್ಲಿ ಮಹತ್ವದ ಸ್ಥಾನವಿದೆ ಎಂದು ಪಂಡಿತ ಹೇಮಂತಾಚಾರ್ಯ ಗುಡಿ ತಿಳಿಸಿದರು.

ಶ್ರೀಮನ್ ಮಧ್ವಾಚಾರ್ಯ ಮೂಲ ಮಹಾಸಂಸ್ಥಾನ ಶ್ರೀ ಉತ್ತರಾದಿ ಮಠದ ಶ್ರೀರಾಮಪುರ ಶಾಖೆಯ ಶ್ರೀ ವೆಂಕಟೇಶ್ವರ ಧ್ಯಾನ ಕೇಂದ್ರವು ಹನುಮದ್ ವ್ರತದ ಅಂಗವಾಗಿ ಬುಧವಾರ ಬೆಳಗ್ಗೆ ಹಮ್ಮಿಕೊಂಡಿದ್ದ ಬೃಹತ್ ಪಾದಯಾತ್ರೆಗೆ ಚಾಲನೆ ನೀಡಿ ಅವರು ಮಾತನಾಡಿದರು.

'ಹನು' ಎಂದರೆ 'ಜ್ಞಾನ'. ಅದನ್ನು ಹೊಂದಿದವನೇ ಹನುಮಂತ. ಅವನ ಗುಣ ಚಿಂತನೆಗಳನ್ನು ಮಾಡುವುದರಿಂದ ನೂರಾರು ಕಂಟಕಗಳು ಪರಿಹಾರವಾಗುತ್ತವೆ. ಅವನ ಅನುಗ್ರಹ ಪ್ರಾಪ್ತಿಗಾಗಿ ನಿತ್ಯವೂ ಭಜಿಸಬೇಕು. ಲೋಕ ಕಲ್ಯಾಣಕ್ಕಾಗಿ ಪ್ರಾರ್ಥಿಸಲು ಉತ್ತರಾದಿ ಮಠಾಧೀಶರಾದ ಶ್ರೀ ಸತ್ಯಾತ್ಮ ತೀರ್ಥರ ಆದೇಶದ ಮೇರೆಗೆ ಪಾದ ಯಾತ್ರೆ ಹಮ್ಮಿಕೊಳ್ಳಲಾಗಿದೆ. ಹಲವು ಸಮುದಾಯದ ಪ್ರಮುಖರು ಭಾಗವಹಿಸಿರುವುದು ಶ್ಲಾಘನೀಯ ಎಂದರು.



ಶ್ರೀರಾಮಪುರದ ಉತ್ತರಾದಿ ಮಠದ ಶಾಖೆ ಶ್ರೀ ವೆಂಕಟೇಶ್ವರ ಧ್ಯಾನ ಕೇಂದ್ರವು ಹನುಮದ್ ವ್ರತದ ಅಂಗವಾಗಿ ಹಮ್ಮಿಕೊಂಡಿದ್ದ ಪಾದಯಾತ್ರೆಗೆ ಪಂಡಿತ ಹೇಮಂತ ಆಚಾರ್ಯ ಗುಡಿ ಚಾಲನೆ ನೀಡಿದರು.

ಶ್ರೀ ವೆಂಕಟೇಶ್ವರ ಧ್ಯಾನ ಕೇಂದ್ರದಿಂದ ಬೆಳಗ್ಗೆ 7 ಗಂಟೆಗೆ ಆರಂಭವಾದ ಪಾದಯಾತ್ರೆ ಹೆಚ್.ಡಿ.ಕೋಟೆ ಮುಖ್ಯರಸ್ತೆ, ಎನ್‌ಐಇ ಕಾಲೇಜು ರಸ್ತೆ, ಸಿಲ್ಕ್ ಫ್ಯಾಕ್ಟರಿ ಸರ್ಕಲ್, ನಂಜುಮಳಿಗೆ ವೃತ್ತ ಅಗ್ರಹಾರದ 101 ಗಣಪತಿ ದೇಗುಲ ಮಾರ್ಗವಾಗಿ (8 ಕಿ.ಮೀ. ಕ್ರಮಿಸಿ) ಕೋಟೆ ಆಂಜನೇಯ ದೇಗುಲವನ್ನು ತಲುಪಿತು. ಮಾರ್ಗದ ಉದ್ದಕ್ಕೂ ನೂರಾರು ಹನುಮ ಭಕ್ತರು ವಿವಿಧ ವಾದ್ಯಮೇಳದೊಂದಿಗೆ ಹರಿನಾಮ ಸಂಕೀರ್ತನೆ, ಭಜನೆ ಮಾಡಿದ್ದು ಗಮನ ಸೆಳೆಯಿತು. ನಂತರ ಕೋಟೆ ಶ್ರೀ ಆಂಜನೇಯನ ಮೂರ್ತಿಗೆ ಪಂಡಿತ ಹೇಮಂತ ಆಚಾರ್ಯ ನೇತೃತ್ವದಲ್ಲಿ ಮನ್ಯುಸೂಕ್ತ, ಶ್ರೀಹರಿ ವಾಯುಸ್ತುತಿ ಮತ್ತು ವಿಷ್ಣು ಸಹಸ್ರನಾಮ ಪಾರಾಯಣ ಸಹಿತ ಕ್ಷೀರಾಭಿಷೇಕ ಮತ್ತು ಮಧು ಅಭಿಷೇಕವನ್ನು ನೆರವೇರಿಸಲಾಯಿತು. ಶ್ರೀ ವೆಂಕಟೇಶ್ವರ ಧ್ಯಾನ ಕೇಂದ್ರದ ಪ್ರಮುಖರಾದ ಎ.ಎನ್.ರಮೇಶ್, ಮಧ್ವೇಶ ಮನ್ನಾರಿ, ಗುರುರಾಜ, ವಾಸುದೇವ ಮೂರ್ತಿ ಸೇರಿದಂತೆ ಮಹಿಳಾ ಮಂಡಳಿ ಮಾತೆಯರು ಹಾಜರಿದ್ದರು.

ದೇಶ – ವಿದೇಶ

ಡಾಲರ್ ಎದುರು ದಾಖಲೆ ಕನಿಷ್ಠ ಮಟ್ಟಕ್ಕೆ ಕುಸಿದ ಭಾರತದ ಕರೆನ್ಸಿ

ನವದೆಹಲಿ: ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯ ಬುಧವಾರ ಮತ್ತೆ 29 ಪೈಸೆ ಕುಸಿದಿದ್ದು, ಇದರೊಂದಿಗೆ ಭಾರತದ ಕರೆನ್ಸಿ ಮೊದಲ ಬಾರಿಗೆ ನೈಂಟಿ ಕ್ರಾಸ್ ಮಾಡಿದೆ. ಅಮೆರಿಕದ ಡಾಲರ್ ಎದುರು ರೂಪಾಯಿ ಅಪಮೌಲ್ಯ ಮುಂದುವರೆದಿದ್ದು, ಪ್ರತಿ ಡಾಲರ್‌ಗೆ 90.25 ರೂ.ಗೆ ತಲುಪಿದೆ. ಇದು ಸಾರ್ವಕಾಲಿಕ ಕನಿಷ್ಠ ಮಟ್ಟವಾಗಿದೆ. ಮಂಗಳವಾರ ಡಾಲರ್ ಎದುರು ರೂಪಾಯಿ ಮೌಲ್ಯ 89.94 ರೂಪಾಯಿ ಇತ್ತು.



ಎಫ್‌ಐಐ ಹೊರಹರಿವು ಮತ್ತು ಬ್ಯಾಂಕುಗಳು ನಿರಂತರವಾಗಿ ಡಾಲರ್‌ಗಳನ್ನು ಖರೀದಿಸುತ್ತಿರುವುದು ರೂಪಾಯಿ ಮೌಲ್ಯ ಕುಸಿತಕ್ಕೆ ಕಾರಣ ಎನ್ನಲಾಗಿದೆ. ದೇಶೀಯ ಷೇರು ಮಾರುಕಟ್ಟೆಗಳಲ್ಲಿನ ಕುಸಿತ ಮತ್ತು ಭಾರತ–ಅಮೆರಿಕ ವ್ಯಾಪಾರ ವಿಳಂಬ ಹಾಗೂ ವಿದೇಶಿ ಹೂಡಿಕೆದಾರರ ಹಣ ಹಿಂಪಡೆಯುವಿಕೆ ರೂಪಾಯಿ ದುರ್ಬಲಗೊಳ್ಳಲು ಪ್ರಮುಖ ಕಾರಣಗಳಾಗಿವೆ ಎಂದು ಫಾರೆಕ್ಸ್ ವ್ಯಾಪಾರಿಗಳು ತಿಳಿಸಿದ್ದಾರೆ.

ತಾಲಿಬಾನ್ ಕ್ರೂರ ಆಡಳಿತ: 13 ವರ್ಷದ ಬಾಲಕನಿಂದ ಕೊಲೆಗಾರನಿಗೆ ಗುಂಡಿಟ್ಟು ಶಿಕ್ಷೆ

ಕಾಬೂಲ್: ಅಫ್ಘಾನಿಸ್ತಾನದಲ್ಲಿ ತಾಲಿಬಾನ್‌ನ ಕ್ರೂರ ಆಡಳಿತದಿಂದ ಜನತೆ ಪರಿತಪಿಸುವಂತಾಗಿದೆ. ಒಂದು ಕುಟುಂಬದ 13 ಜನರನ್ನು ಕೊಂದ ಹಂತಕನನ್ನು ಅದೇ ಕುಟುಂಬಕ್ಕೆ ಸೇರಿದ 13 ವರ್ಷದ ಬಾಲಕನಿಂದ ಗುಂಡಿಟ್ಟು ಹತ್ಯೆ ಮಾಡಿಸಿದೆ.



ಅಫ್ಘಾನ್ ಸುಪ್ರೀಂಕೋರ್ಟ್ ಆದೇಶ ಮತ್ತು ತಾಲಿಬಾನ್‌ನ ಸರ್ವೋಚ್ಚ ನಾಯಕ ಹಿಬತುಲ್ಲಾ ಅಖುಂಡ್‌ಜಾದಾ ಅನುಮೋದಿಸಿದ ಸಾರ್ವಜನಿಕ ಮರಣದಂಡನೆಯನ್ನು ಸುಮಾರು 80,000 ಜನರು ವೀಕ್ಷಿಸಿದ್ದಾರೆ. ಅಬ್ದುಲ್ ರೆಹಮಾನ್, ಆತನ ಕುಟುಂಬದ ಮಹಿಳೆಯರು ಹಾಗೂ ಮಕ್ಕಳು ಸೇರಿದಂತೆ 13 ಜನರನ್ನು ಕೊಂದ ಅಪರಾಧಕ್ಕಾಗಿ ಮಂಗಲ್ ಎಂಬ ವ್ಯಕ್ತಿಗೆ ಮರಣದಂಡನೆ ವಿಧಿಸಲಾಗಿದೆ. ಈ ಆದೇಶವನ್ನು ಅಫ್ಘಾನಿಸ್ತಾನದ ಸರ್ವೋಚ್ಚ ನಾಯಕ ಹಿಬತುಲ್ಲಾ ಅಖುಂಜಾದಾ ಅನುಮೋದಿಸಿದ್ದಾರೆ. ಸಂತ್ರಸ್ತರ ಕುಟುಂಬಕ್ಕೆ ಕ್ಷಮೆ ಮತ್ತು ಶಿಕ್ಷೆಯ ಆಯ್ಕೆಯನ್ನು ನೀಡಲಾಗಿತ್ತು. ಆದರೆ, ಸಂತ್ರಸ್ತ ಕುಟುಂಬ ಕಿಸಾಸ್‌ಗೆ ('ಕಣ್ಣಿಗೆ ಕಣ್ಣು' ಎಂಬ ಇಸ್ಲಾಮಿಕ್ ತತ್ವ) ಒತ್ತಾಯಿಸಿದ ನಂತರ, ಮರಣದಂಡನೆ ಆದೇಶ ನೀಡಲಾಗಿದೆ ಎಂದು ತಿಳಿದುಬಂದಿದೆ.

ತನಗಿಂತ ಯಾರು ಕೂಡ ಸುಂದರವಾಗಿ ಕಾಣಬಾರದೆಂದು 6 ವರ್ಷದ ಬಾಲಕಿ ಕೊಂದ ಮಹಿಳೆ


ಚಂಡೀಗಢ: ತನಗಿಂತ ಯಾರು ಕೂಡ ಸುಂದರವಾಗಿ ಕಾಣಬಾರದು ಎಂದು 6 ವರ್ಷದ ಬಾಲಕಿಯನ್ನು ಮಹಿಳೆ ಹತ್ಯೆ ಮಾಡಿರುವ ಘಟನೆ ಹರಿಯಾಣದ ಪಾಣಿಪತ್‌ನಲ್ಲಿ ನಡೆದಿದೆ. ಸೋನಿಪತ್‌ನಲ್ಲಿ ಮದುವೆ ಕಾರ್ಯಕ್ರಮಕ್ಕಾಗಿ ಇಡೀ ಕುಟುಂಬ ಒಟ್ಟುಗೂಡಿತ್ತು ಈ ವೇಳೆ, ಆರೋಪಿ ಪೂನಂ ತನ್ನ 6 ವರ್ಷದ ಸೊಸೆಯನ್ನು ನೀರಿನ ತೊಟ್ಟಿಯಲ್ಲಿ ಮುಳುಗಿಸಿ ಕೊಂದಿದ್ದಾಳೆ. ಪೂನಂ ಈ ಹಿಂದೆ 2023 ರಲ್ಲಿ ತನ್ನ ಮಗ ಸೇರಿದಂತೆ ಮೂವರು ಮಕ್ಕಳನ್ನು ಕೊಂದಿದ್ದಳು. ಅವರನ್ನು ಸಹ ನೀರಿನಲ್ಲಿ ಮುಳುಗಿಸಿ ಹತ್ಯೆ ಮಾಡಿದ್ದಳು.



ವಿಧಿ (6) ಕೊಲೆಯಾದ ಮಗು. ಪಾಣಿಪತ್‌ನ ಇಸ್ರಾನಾ ಪ್ರದೇಶದ ನೌಲ್ತಾ ಗ್ರಾಮಕ್ಕೆ ತಮ್ಮ ಕುಟುಂಬದೊಂದಿಗೆ ಸಂಬಂಧಿಕರ ಮದುವೆಯಲ್ಲಿ ಪಾಲ್ಗೊಳ್ಳಲು ಅಜ್ಜ ಪಾಲ್ ಸಿಂಗ್, ಅಜ್ಜಿ ಓಂವತಿ, ತಂದೆ ಸಂದೀಪ್, ತಾಯಿ ಜೊತೆ ಬಂದಿದ್ದಳು. ಮದುವೆ ಮನೆಯಲ್ಲಿ ವಿಧಿ ಕಾಣೆಯಾಗಿದ್ದಳು. ಕುಟುಂಬದವರು ಎಲ್ಲಾ ಕಡೆ ಹುಡುಕಾಡಿದರು. ವಿಧಿಯ ಅಜ್ಜಿ ತನ್ನ ಸಂಬಂಧಿಕರ ಮನೆಯ ಮೊದಲ ಮಹಡಿಯಲ್ಲಿರುವ ಸ್ಟೋರ್ ರೂಂಗೆ ಹೋಗಿ ನೋಡಿದಾಗ ಮೃತದೇಹ ಕಂಡುಬಂದಿದೆ.

ಭಾರತೀಯನ ಸುಳಿವು ನೀಡಿದವರಿಗೆ 45 ಲಕ್ಷ ಬಹುಮಾನ ಘೋಷಿಸಿದ ಎಫ್‌ಬಿಐ!

ನ್ಯೂಯಾರ್ಕ್: 2017ರಲ್ಲಿ ಅಮೆರಿಕದ ನ್ಯೂಜೆರ್ಸಿಯಲ್ಲಿ ಭಾರತೀಯ ಮಹಿಳೆ ಹಾಗೂ ಆಕೆಯ 6 ವರ್ಷದ ಪುತ್ರನನ್ನು ಹತ್ಯೆಗೈದು ಪರಾರಿಯಾಗಿರುವ ಆರೋಪ ಎದುರಿಸುತ್ತಿರುವ ಭಾರತೀಯ ವ್ಯಕ್ತಿಗಾಗಿ ಅಮೆರಿಕದ ತನಿಖಾ ಸಂಸ್ಥೆ ಎಫ್‌ಬಿಐ ಹುಡುಕಾಟ ನಡೆಸುತ್ತಿದೆ.



ಆರೋಪಿಯ ಸುಳಿವು ನೀಡಿದವರಿಗೆ 45 ಲಕ್ಷ ಬಹುಮಾನ ನೀಡುವುದಾಗಿಯೂ ಘೋಷಿಸಿದೆ.

ಆರೋಪಿಯನ್ನು ನಸೀರ್ ಹಮೀದ್ (38) ಎಂದು ಗುರುತಿಸಲಾಗಿದ್ದು, ಈತ 2017ರ ಮಾರ್ಚ್‌ನಲ್ಲಿ ಶಶಿಕಲಾ ನಾರ್ರಾ ಹಾಗೂ ಅವರ ಪುತ್ರ ಅನಿಶ್ ನಾರ್ರಾ ಎಂಬುವವರನ್ನು ಹತ್ಯೆ ಮಾಡಿದ್ದಾನೆ. ಶಶಿಕಲಾ ಅವರ ಪತಿ ಹನುಮಂತ ನಾರ್ರಾ ಅವರನ್ನು ಆರೋಪಿ ಹಿಂಬಾಲಿಸುತ್ತಿದ್ದ ಎಂಬುದು ತನಿಖೆಯಲ್ಲಿ ತಿಳಿದುಬಂದಿದೆ. ಹತ್ಯೆ ನಡೆದ 6 ತಿಂಗಳ ಬಳಿಕ ಆರೋಪಿ ಭಾರತಕ್ಕೆ ಹಿಂದಿರುಗಿದ್ದಾನೆ ಎಂದು ಎಫ್‌ಬಿಐ ತಿಳಿಸಿದೆ.

ಹತ್ಯೆಗೆ ಸಂಬಂಧಿಸಿದಂತೆ ಆತನ ವಿರುದ್ಧ ಪ್ರಕರಣ ದಾಖಲಿಸಲಾಗಿದ್ದು, ಆತನನ್ನು ಅಮೆರಿಕಕ್ಕೆ ಕರೆತಂದು ಕಾನೂನು ಪ್ರಕ್ರಿಯೆಗಳಿಗೆ ಒಳಪಡಿಸಬೇಕಿದೆ. ಹೀಗಾಗಿ ಆತನ ಹಸ್ತಾಂತರಕ್ಕೆ ನೆರವು ನೀಡಿ ಎಂದು ಭಾರತೀಯ ರಾಯಭಾರ ಕಚೇರಿಗೂ ಎಫ್‌ಬಿಐ ಅಧಿಕಾರಿಗಳು ಮನವಿ ಮಾಡಿದ್ದಾರೆ.

ಬಾಗಲಕೋಟೆಯಲ್ಲಿ ಭೀಕರ ರಸ್ತೆ ಅಪಘಾತ: ನಾಲ್ವರ ದುರ್ಮರಣ

ಜಮಖಂಡಿ: ಬಾಗಲಕೋಟೆ ಜಿಲ್ಲೆಯ ಸಿದ್ದಾಪುರ ಪ್ರಭುಲಿಂಗೇಶ್ವರ ಸಕ್ಕರೆ ಕಾರ್ಖಾನೆ ಬಳಿ ರಾತ್ರಿ 12.30ಕ್ಕೆ ಕಬ್ಬಿನ ಟ್ರ್ಯಾಕ್ಟರ್‌ಗೆ ಕಾರು ಡಿಕ್ಕಿ ಹೊಡೆದ ಪರಿಣಾಮ ಕಾರಿನಲ್ಲಿದ್ದ ನಾಲ್ವರು ಯುವಕರು ಮೃತಪಟ್ಟಿದ್ದಾರೆ.



ಬಾಗಲಕೋಟೆ ಜಿಲ್ಲೆಯ ಜಮಖಂಡಿ ತಾಲೂಕಿನ ಸಿದ್ದಾಪುರ ಗ್ರಾಮದ ಸಿದ್ದಾಪುರ ಬಳಿ ತಡರಾತ್ರಿ ಈ ಭೀಕರ ರಸ್ತೆ ಅಪಘಾತ ಸಂಭವಿಸಿದ್ದು, ವಿಶ್ವನಾಥ್ ಕಂಬಾರ್ (17), ಪ್ರವೀಣ್ ಶೇಡಬಾಳ್ (22), ಗಣೇಶ ಅಳ್ಳಿಮಟ್ಟಿ (20), ಪ್ರಜ್ವಲ್ ಶೇಡಬಾಳ್ (17) ಎಂಬವರು ಸಾವಿಗೀಡಾಗಿದ್ದಾರೆ.

ಮೃತರೆಲ್ಲರೂ ಸಿದ್ದಾಪುರ ಗ್ರಾಮದ ನಿವಾಸಿಗಳು ಎಂದು ಗುರುತಿಸಲಾಗಿದೆ. ಸಿದ್ದಾಪುರದಿಂದ ಸ್ನೇಹಿತರು ತಡರಾತ್ರಿ ಶಿರೋಳ ಕಾಡಸಿದ್ಧೇಶ್ವರ ದೇವರ ಜಾತ್ರೆಗೆ ಹೋಗುತ್ತಿದ್ದ ಸಂದರ್ಭದಲ್ಲಿ ಘಟನೆ ನಡೆದಿದೆ. ಕಬ್ಬು ಹೊತ್ತೊಯ್ಯುತ್ತಿದ್ದ ಟ್ರ್ಯಾಕ್ಟರ್‌ಗೆ ಕಾರು ರಭಸವಾಗಿ ಹಿಂದಿನಿಂದ ಡಿಕ್ಕಿ ಹೊಡೆದಿದೆ. ಜಮಖಂಡಿ ಗ್ರಾಮೀಣ ಪೊಲೀಸರು ಪರಿಶೀಲನೆ ಮಾಡುತ್ತಿದ್ದಾರೆ.

ಸರ್ಕಾರದ ರೈತ ವಿರೋಧಿ ಧೋರಣೆ ವಿರೋಧಿಸಿ

ಬಿಜೆಪಿ ಜಿಲ್ಲಾ ರೈತ ಮೋರ್ಚಾ ಪ್ರತಿಭಟನೆ



ಕೊಡಗು ಜಿಲ್ಲಾ ಬಿಜೆಪಿಯ ರೈತ ಮೋರ್ಚಾ ನೇತೃತ್ವದಲ್ಲಿ ಪ್ರತಿಭಟನೆ ನಡೆಸಲಾಯಿತು.

ಮಡಿಕೇರಿ, ಡಿ.3–ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ 'ರೈತ ವಿರೋಧಿ ಧೋರಣೆ' ಅನುಸರಿಸುತ್ತಿದೆ ಎಂದು ಆರೋಪಿಸಿ, ಕೊಡಗು ಜಿಲ್ಲಾ ಬಿಜೆಪಿಯ ರೈತ ಮೋರ್ಚಾ ನೇತೃತ್ವದಲ್ಲಿ ನಗರದ ಜಿಲ್ಲಾಡಳಿತ ಭವನದ ಮುಂಭಾಗ ಪ್ರತಿಭಟನೆ ನಡೆಸಲಾಯಿತು.

ಜಿಲ್ಲಾ ಬಿಜೆಪಿ ಅಧ್ಯಕ್ಷ ನಾಪಂಡ ರವಿ ಕಾಳಪ್ಪ, ಮಾಜಿ ವಿಧಾನಸಭಾಧ್ಯಕ್ಷ ಕೆ.ಜಿ.ಬೋಪಯ್ಯ, ಮಾಜಿ ಸಚಿವ ಎಂ.ಪಿ.ಅಪ್ಪಚ್ಚು ರಂಜನ್ ನೇತೃತ್ವದಲ್ಲಿ ಬುಧವಾರ ಬೆಳಗ್ಗೆ ಜಿಲ್ಲಾಡಳಿತ ಭವನದ ಮುಂಭಾಗ ಸಮಾವೇಶಗೊಂಡ ಪಕ್ಷದ ಪ್ರಮುಖರು ಮತ್ತು ಸದಸ್ಯರು, ರಾಜ್ಯ ಸರ್ಕಾರದ ರೈತ ವಿರೋಧಿ ನೀತಿಗಳನ್ನು ಖಂಡಿಸಿ ಘೋಷಣೆಗಳನ್ನು ಮೊಳಗಿಸಿ ತಮ್ಮ ಆಕ್ರೋಶ ವ್ಯಕ್ತಪಡಿಸಿದರು.

ಶಾಸಕರ ವಿರುದ್ಧ: ಜಿಲ್ಲಾ ಬಿಜೆಪಿ ಅಧ್ಯಕ್ಷ ನಾಪಂಡ ರವಿ ಕಾಳಪ್ಪ ಮಾತನಾಡಿ, ಪ್ರಸಕ್ತ ಸಾಲಿನಲ್ಲಿ ಮುಂಗಾರು 5 ತಿಂಗಳುಗಳ ಹೆಚ್ಚಿನ ಕಾಲ ವಿಸ್ತರಿಸಿದ ಪರಿಣಾಮ ಕೊಡಗು ಸೇರಿದಂತೆ ರಾಜ್ಯದ ನಾನಾ ಭಾಗಗಳಲ್ಲಿ ವ್ಯಾಪಕವಾದ ಕೃಷಿ ಹಾನಿಯಾಗಿದೆ. ಜಿಲ್ಲೆಯ ಆರ್ಥಿಕ ಬೆನ್ನೆಲುಬಾಗಿರುವ ಕಾಫಿ, ಕರಿಮೆಣಸು ಕೃಷಿಗಳಿಗೆ ಶೇ.60ರಿಂದ 70 ರಷ್ಟು ನಷ್ಟ ಉಂಟಾಗಿದೆ. ಈ ಕುರಿತು ಸರ್ವೆ ನಡೆಸಿದ ಸರ್ಕಾರ ಕೇವಲ ಶೇ.30ರಷ್ಟು ಮಾತ್ರ ಕೃಷಿ ಹಾನಿಯಾಗಿದೆ ಎಂದು ವರದಿ ನೀಡಿದ ಹಿನ್ನೆಲೆಯಲ್ಲಿ ಜಿಲ್ಲೆಯ ಕೃಷಿಕರು ಪರಿಹಾರದಿಂದ ವಂಚಿತರಾಗುವ ಮೂಲಕ ಸಂಕಷ್ಟಕ್ಕೆ ಸಿಲುಕಿದ್ದಾರೆ.

ಜನ ವಿರೋಧಿ ಸುತ್ತೋಲೆಗಳು: ಮಾಜಿ ಸಚಿವ ಎಂ.ಪಿ.ಅಪ್ಪಚ್ಚು ರಂಜನ್ ಮಾತನಾಡಿ, ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ ಜಿಲ್ಲೆಯ ಕೃಷಿಕ ಸಮೂಹಕ್ಕೆ ಎಲ್ಲಾ ವಿಧದಲ್ಲೂ ತೊಂದರೆಗಳನ್ನು ನೀಡುತ್ತಲೆ ಬರುತ್ತಿದೆ. ಸರ್ಕಾರದ ಅರಣ್ಯ ಸಚಿವ ಈಶ್ವರ ಖಂಡ್ರೆ, ಸಿ ಮತ್ತು ಡಿ ಜಮೀನು, ಪ್ರಾಣಿ ಜನ್ಯ ಉತ್ಪನ್ನ ಗಳಾದ ಕೊಂಬು, ಗರಿಗಳನ್ನು ಇಟ್ಟುಕೊಳ್ಳುವುದಕ್ಕೆ ನಿಷೇಧ, ಆಯಾ ಪಂಚಾಯಿತಿ ವ್ಯಾಪ್ತಿಯ ಖಾಸಗಿ ಜಮೀನುಗಳಲ್ಲಿನ ಮರಗಳ ವಿವರ ಒದಗಿಸುವುದು, ಅರಣ್ಯ ಪ್ರದೇಶಕ್ಕೆ ದನ ಕರುಗಳು ಹೋದರೆ ಪ್ರಕರಣ ದಾಖಲಿಸುವುದು ಸೇರಿದಂತೆ ಜನ ವಿರೋಧಿಯಾದ 5 ಸುತ್ತೋಲೆಗಳನ್ನು ಹೊರಡಿಸಿದ್ದಾರೆ. ಇವುಗಳ ಬಗ್ಗೆ ಮುಖ್ಯಮಂತ್ರಿಗಳಿಗೆ ಮಾಹಿತಿ ನೀಡಿ ಸುತ್ತೋಲೆ ಗಳನ್ನು ಹಿಂಪಡೆಯುವ ಪ್ರಯತ್ನ ಜಿಲ್ಲೆಯ ಶಾಸಕರಿಂದ ನಡೆದಿಲ್ಲ ಎಂದು ಆಕ್ರೋಶಿಸಿದರು.

ಎಡಬಿಡಂಗಿ ಸರ್ಕಾರ: ಮಾಜಿ ವಿಧಾನಸಭಾಧ್ಯಕ್ಷ ಕೆ.ಜಿ.ಬೋಪಯ್ಯ ಮಾತನಾಡಿ, ಸಿ ಮತ್ತು ಡಿ ಜಾಗದ ಸಮಸ್ಯೆ ಕೇವಲ ಸೋಮವಾರಪೇಟೆ ತಾಲೂಕಿಗೆ ಮಾತ್ರ ಸೀಮಿತವಾಗಿಲ್ಲ. ಇಡೀ ಜಿಲ್ಲೆಯಲ್ಲಿ ಸಮಸ್ಯೆ ಉದ್ಭವಿಸಿದೆ. ಸಮಸ್ಯೆಯನ್ನು ಸಮರ್ಪಕವಾಗಿ ಪರಿಹರಿಸದ ಇದೊಂದು 'ಎಡಬಿಡಂಗಿ' ಸರ್ಕಾರ ಎಂದು ಟೀಕಿಸಿದರು.

ಪ್ರತಿಭಟನೆಯಲ್ಲಿ ಪಕ್ಷದ ಪ್ರಮುಖರಾದ ರಾಬಿನ್ ದೇವಯ್ಯ, ತಳೂರು ಕಿಶೋರ್ ಕುಮಾರ್, ಹಬ್ಬಳ್ಳಿ ರವೀಂದ್ರ, ಬಿ.ಬಿ.ಭಾರತೀಶ್, ಶಾಂತೆಯಂಡ ರವಿ ಕುಶಾಲಪ್ಪ, ಅನಿತಾ ಪೂವಯ್ಯ, ಮಹೇಶ್ ಜೈನಿ, ಬಿ.ಕೆ.ಅರುಣ್ ಕುಮಾರ್, ಬಿ.ಕೆ.ಜಗದೀಶ್, ಅರುಣ್ ಶೆಟ್ಟಿ, ಎಸ್.ಸಿ.ಸತೀಶ್, ಸುಬ್ರಾ, ಮಂಜುಳಾ, ಉಷಾ ಕಾವೇರಮ್ಮ, ಚಂದ್ರು, ನಾಗೇಶ್ ಕುಂದಲ್ಪಾಡಿ, ಉಮಾಪ್ರಭು, ಸಜಿಲ್ ಕೃಷ್ಣ, ಉಮೇಶ್ ಸುಬ್ರಮಣಿ, ಬಾಲಕೃಷ್ಣ ಪಾಲ್ಗೊಂಡಿದ್ದರು.

ತಿತಿಮತಿಯಲ್ಲಿ ಹನುಮನ ಆರಾಧನೆ

ಗೋಣಿಕೊಪ್ಪ, ಡಿ.3–ಹನುಮೋತ್ಸವ ಸಮಿತಿ, ಶ್ರೀ ರಾಮ ಮಂದಿರ ವತಿಯಿಂದ ಎರಡನೇ ವರ್ಷದ ಹನುಮೋತ್ಸವ ತಿತಿಮತಿ ಗ್ರಾಮದಲ್ಲಿ ಆರು ದಿನಗಳ ಕಾಲ ನಡೆಯಲಿದೆ.

ಸಮಿತಿ ಅಧ್ಯಕ್ಷ ಚಕ್ಕೇರ ಮನು ಕಾವೇರಪ್ಪ ತಿತಿಮತಿ ಚಿಮ್ಮಿ ಸಂಕೀರ್ಣದಲ್ಲಿ ಹನುಮೋತ್ಸವ ಸಮಿತಿಯ ಪೂರ್ವತಯಾರಿ ಸಭೆಯಲ್ಲಿ ಮಾಹಿತಿ ನೀಡಿ, ನಿನ್ನೆ ಹನುಮ ಮಾಲಧಾರಣೆ, ಅಂಜನೇಯ ಹೋಮ, ಇಂದು ನಿತ್ಯ ಪೂಜೆ ಹಾಗೂ ಹನುಮಂತನ ಭಜನ ನಡೆಯಿತು.

ಡಿ.6ರಂದು ಬೆಳಿಗ್ಗೆ ಗುಂಡು ಎಸೆತ, ಹಗ್ಗ ಜಗ್ಗಾಟ ಸೇರಿದಂತೆ ವಿವಿಧ ಕ್ರೀಡಾ ಸ್ಪರ್ಧೆಗಳು ನಡೆಯಲಿದೆ. ಸಂಜೆ 6 ಗಂಟೆಗೆ ದೀಪೋತ್ಸವ ಮತ್ತು ವಿವಿಧ ಕಲಾ ತಂಡಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿದೆ

ಡಿ.7ರ ಮಧ್ಯಾಹ್ನ 2 ಗಂಟೆಗೆ ಹನುಮ ಉತ್ಸವ ಮೂರ್ತಿಯನ್ನು ಹೊತ್ತು ಬೃಹತ್ ಶೋಭಾಯಾತ್ರೆ ನಡೆಯಲಿದೆ. ಸಹಸ್ರಾರು ಸಂಖ್ಯೆಯಲ್ಲಿ ಹನುಮ ಭಕ್ತರು, ಹಿಂದೂ ಬಾಂಧವರು ಯಾತ್ರೆಯಲ್ಲಿ ಪಾಲ್ಗೊಳ್ಳಲಿದ್ದಾರೆ. ಬಾಳುಮನಿ ಗಣಪತಿ ದೇವಸ್ಥಾನದಿಂದ ತಿತಿಮತಿ ಶ್ರೀರಾಮ ಮಂದಿರ ದವರೆಗೆ, ಭಜನೆ ಕುಣಿತ, ಡೊಳ್ಳು ಕುಣಿತ, ಚಂಡೆ ವಾದ್ಯ, ಜೊತೆಗೆ ಹನುಮನ ಸ್ತಬ್ಧ ಚಿತ್ರಗಳ ಶೋಭಾಯಾತ್ರೆ ಸಾಗಲಿದೆ.

ನ್ಯಾಯಾಧೀಕರಣಕ್ಕೆ ಚ್ಯುತಿ ಬಾರದಂತೆ ಕರ್ತವ್ಯ ನಿರ್ವಹಿಸಿ



ವಿರಾಜಪೇಟೆ, ಡಿ.3– ನ್ಯಾಯಾಂಗ ವ್ಯವಸ್ಥೆಯು ಸಮಾಜದ ಕಟ್ಟಕಡೆಯ ವ್ಯಕ್ತಿಯಿಂದ ಧನಿಕನವರೆಗೆ ಏಕಮುಖವಾಗಿದ್ದು, ವಕೀಲರು ನ್ಯಾಯಾಧೀಕರಣಕ್ಕೆ ಚ್ಯುತಿಬಾರದ ರೀತಿಯಲ್ಲಿ ಕಕ್ಷೀದಾರ ಹಾಗೂ ಸಮಾಜಕ್ಕೆ ಅನ್ಯಾಯವಾಗದ ರೀತಿಯಲ್ಲಿ ನ್ಯಾಯ ಒದಗಿಸುವಂತಾಗಬೇಕು ಎಂದು ಶಾಸಕ ಎ.ಎಸ್. ಪೊನ್ನಣ್ಣ ಅಭಿಮತ ವ್ಯಕ್ತಪಡಿಸಿದ್ದಾರೆ.

ಬಾರ್ ಅಸೋಸಿಯೆಷನ್ ವಿರಾಜಪೇಟೆ ವತಿಯಿಂದ ನಗರದ ಹೊರವಲಯದ ಮ್ಯಗ್ನೋಲಿಯ ಖಾಸಗಿ ರೆಸಾರ್ಟ್‌ನ ಸಭಾಂಗಣದಲ್ಲಿ ವಕೀಲರ ದಿನಾಚರಣೆಯಲ್ಲಿ ಮಾತನಾಡಿದ ಶಾಸಕರು, ನ್ಯಾಯಾಲಯದಿಂದ ವಿಶ್ವಾಸ ಕಳೆದುಕೊಂಡ ಸಂಧರ್ಭದಲ್ಲಿ ವಕೀಲರು ವಿಶ್ವಾಸವನ್ನು ಮರುಸ್ಥಾಪನೆ ಮಾಡಲು ಪ್ರಯತ್ನ ಮಾಡಬೇಕು. ಇಲ್ಲಿನ ಬಾರ್ ಕೌನ್ಸಿಲ್ ತುಂಬಾ ಹಳೆಯದಾಗಿದ್ದು, ಇದೇ ಕೌನ್ಸಿಲ್‌ನಲ್ಲಿ ನನ್ನ ತಂದೆ ಮತ್ತು ತಾತ ಈರ್ವರು ಸೇವೆ ಸಲ್ಲಿಸಿದ್ದಾರೆ. ಎಂದು ಗತಕಾಲದ ನೆನಪುಗಳು, ಮತ್ತು ವಕೀಲ ವೃತ್ತಿಯಲ್ಲಿ ಹೆಸರಾಂತ ವಕೀಲರೊಂದಿಗೆ ಒಡನಾಟ ಹಾಗೂ ಅವರೊಂದಿಗಿದ್ದ ಅನುಭವವನ್ನು ಮೆಲಕುಹಾಕಿ ಶುಭಕೋರಿದರು.

ಬಾರ್ ಕೌನ್ಸಿಲ್‌ನಲ್ಲಿ ಸೇವೆ ಸಲ್ಲಿಸಿದ ಹಿರಿಯ ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳನ್ನು ಸನ್ಮಾನಿಸಿದ 2ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶ ಎಸ್. ನಟರಾಜ್, ಬಾರ್ ಅಸೋಸಿಯೇಷನ್ ಅಧ್ಯಕ್ಷ ಸಿ.ಕೆ.ಪೊನ್ನಣ್ಣ ಮಾತನಾಡಿದರು. ಜೆ.ಎಂ.ಎಫ್.ಸಿ ಹಿರಿಯ ಸಿವಿಲ್ ನ್ಯಾಯಾಧೀಶರಾದ ಗೌ.ಆರ್. ಮಂಜುನಾಥ್, ಪ್ರಿನ್ಸಿಪಲ್ ಸಿವಿಲ್ ನ್ಯಾಯಾಧೀಶರು ಜೆಎಂಎಫ್‌ಸಿ ಗೌ.ಪ್ರದೀಪ್ ಪೋತೆದಾರ್, ಅಸೋಸಿಯೇಷನ್ ಉಪಾಧ್ಯಕ್ಷ ಬಿ.ಎಸ್. ಸುಬ್ಬಯ್ಯ, ಕಾರ್ಯದರ್ಶಿ ಎನ್.ಎಸ್ ಪ್ರಶಾಂತ್ ಉಪಸ್ಥಿತರಿದ್ದರು.

ಜನಸಾಗರದ ನಡುವೆ ಶೋಭಾಯಾತ್ರೆ ಮೆರಗು





ಕುಶಾಲನಗರದ ಶೋಭಾಯಾತ್ರೆಯಲ್ಲಿ ಪಾಲ್ಗೊಂಡಿದ್ದ ಭಕ್ತಸಮೂಹ ಮತ್ತು ಸ್ತಬ್ಧಚಿತ್ರ.

ಕುಶಾಲನಗರ, ಡಿ.3– ಪಟ್ಟಣದ ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನದಲ್ಲಿ ಹನುಮ ಜಯಂತಿ ಅಂಗವಾಗಿ ದಶ ಮಂಟಪಗಳ ಸಮಿತಿ ವತಿಯಿಂದ ಆಯೋಜಿಸಿದ್ದ ವಿವಿಧ ಉತ್ಸವ ಮಂಟಪಗಳ ಶೋಭಾಯಾತ್ರೆ ಭಕ್ತ ಸಾಗರವನ್ನು ಭಕ್ತಿಯ ಅಲೆಯಲ್ಲಿ ತೇಲಿಸಿತು.

ಶ್ರೀ ರಾಮಾಂಜನೇಯ ಉತ್ಸವ ಸಮಿತಿ, ದೇವಸ್ಥಾನ ಸೇವಾ ಸಮಿತಿ ವತಿಯಿಂದ ಶ್ರೀ ಆಂಜನೇಯ ವಿಗ್ರಹವನ್ನು ವಿದ್ಯುತ್ ಅಲಂಕೃತ ಮಂಟಪದಲ್ಲಿ ಪ್ರತಿಷ್ಠಾಪಿಸಿ ಪಟ್ಟಣದಲ್ಲಿ ವಾದ್ಯಗೋಷ್ಠಿಗಳೊಂದಿಗೆ ದೇವಸ್ಥಾನದಿಂದ ಅಂಜನೇಯ ಉತ್ಸವ ಮಂಟಪದ ಮೆರವಣಿಗೆ ರಥಬೀದಿಯಲ್ಲಿ ಸಾಗಿ ಗಣಪತಿ ದೇವಸ್ಥಾನದ ಮುಂಭಾಗ ಪ್ರದರ್ಶನ ನೀಡಿ ನಂತರ ಬೈಚನಹಳ್ಳಿ ಮಾರಿಯಮ್ಮ ದೇವಸ್ಥಾನದ ಮೂಲಕ ಮೂಲ ಸ್ಥಾನಕ್ಕೆ ತೆರಳಿತು.

ಶಾಸಕ ಡಾ.ಮಂತರ್ ಗೌಡ ವಿವಿಧ ಗ್ರಾಮಗಳ ಉತ್ಸವ ಮಂಟಪಗಳಿಗೆ ಪೂಜೆ ಸಲ್ಲಿಸುವ ಮೂಲಕ ಶೋಭಾಯಾತ್ರೆಗೆ ಚಾಲನೆ ನೀಡಿದರು. ಶ್ರೀ ರಾಮಾಂಜನೇಯ ಉತ್ಸವದೊಂದಿಗೆ ಪಟ್ಟಣದ ಹೆಚ್‌ಆರ್‌ಪಿ ಕಾಲೊನಿಯ ಅಂಜನಿಪುತ್ರ ಜಯಂತ್ಯುತ್ಸವ ಆಚರಣ ಟ್ರಸ್ಟ್, ಹಾರಂಗಿ ಗ್ರಾಮದ ವೀರ ಹನುಮ ಸೇವಾ ಸಮಿತಿ, ಗುಮ್ಮನಕೊಲ್ಲಿ ಗೋಪಾಲ್ ಸರ್ಕಲ್ ಕೇಸರಿ ಬಳಗ, ಮಾದ ಪಟ್ಟಣ ಶ್ರೀರಾಮ ಧೂತ ಜಯಂತಿ ಆಚರಣಾ ಸಮಿತಿ, ಇಂದಿರಾ ಬಡಾವಣೆಯ ಟೀಂ ಮಹಾ ವೀರ ಹನುಮಾನ್ ಸೇವಾ ಸಮಿತಿ, ಕೂಡುಮಂಗಳೂರು, ಕೂಡಿಗೆ ಹನುಮ ಸೇನಾ ಸಮಿತಿ, ಗುಡ್ಡೆ ಹೊಸೂರು ವೀರಾಂಜನೇಯ ಸೇವಾ ಸಮಿತಿಗಳ ವತಿಯಿಂದ ಹೊರಟ ಉತ್ಸವ ಮಂಟಪಗಳು ಗಣಪತಿ ದೇವಸ್ಥಾನದ ಬಳಿಗೆ ಆಗಮಿಸಿ ತಮ್ಮ ಅದ್ಭುತ ಮಂಟಪದ ಪ್ರದರ್ಶನ ನೀಡಿ, ಅಲ್ಲಿಂದ ಗುಂಡೂರಾವ್ ಬಡಾವಣೆ ತಲುಪಿತು. ವಿಶೇಷವಾಗಿ ಮುಸಲ್ಮಾನ ಬಾಂಧವರು ಮೆರವಣಿಗೆಯಲ್ಲಿ ಸಾಗಿಬಂದ ಹಿಂದೂ ಬಾಂಧವರಿಗೆ ಪಟ್ಟಣದ ಜಾಮಿಯ ಮಸೀದಿ ಮುಂಭಾಗ ತಂಪು ಪಾನೀಯ ವಿತರಣೆ ಮಾಡಲಾಯಿತು.

ಹನುಮ ಜಯಂತಿ ದಶಮಂಟಪಗಳ ಆಚರಣಾ ಸಮಿತಿ ಅಧ್ಯಕ್ಷ ಎಂ.ಡಿ.ಕೃಷ್ಣಪ್ಪ, ಉಪಾಧ್ಯಕ್ಷ ಎಚ್.ಟಿ. ವಸಂತ, ಟಿ.ವಿ.ಕಿಶೋರ್, ಬಾಲಕೃಷ್ಣ, ಪ್ರಧಾನ ಕಾರ್ಯದರ್ಶಿ ಪಿ.ಆರ್.ರಾಮನಾಥನ್, ಖಜಾಂಚಿ ಡಿ.ವಿ.ಗಿರೀಶ್, ಸಹ ಕಾರ್ಯದರ್ಶಿ ಎಸ್. ಸುನೀಲ್, ಶ್ರೀ ರಾಮಾಂಜನೇಯ ಉತ್ಸವ ಸಮಿತಿ ಅಧ್ಯಕ್ಷ ರಾಜೀವ, ಉಪಾಧ್ಯಕ್ಷ ನವನೀತ್ ಪೊನ್ನೆಟ್ಟಿ, ಟಿ.ವಿ.ಎಸ್, ಕಾರ್ಯದರ್ಶಿ ಕೆ.ವಿ.ಅನುದೀಪ್, ಸಮಿತಿ ಸಂಚಾಲಕ ಪ್ರವೀಣ್ ಓಂಕಾರ್, ಹರೀಶ್ ಎಲ್, ಖಜಾಂಚಿ ಚಂದ್ರಶೇಖರ್, ಸಹ ಕಾರ್ಯದರ್ಶಿ ಶರತ್, ಸಂಚಾಲಕ ಎಲ್. ಹರೀಶ್ ಇತರರು ಪಾಲ್ಗೊಂಡಿದ್ದರು.

ಡಿವೈಎಸ್ಪಿ ಪಿ.ಚಂದ್ರಶೇಖರ್, ವೃತ್ತ ನಿರೀಕ್ಷಕ ಬಿ.ಎಸ್.ದಿನೇಶ್ ಕುಮಾರ್ ಹಾಗೂ ಠಾಣಾಧಿಕಾರಿ, ಸಿಬ್ಬಂದಿ ಬಿಗಿ ಭದ್ರತೆ ಕಲ್ಪಿಸಿದ್ದರು.

ಬಹುಮಾನ ವಿಜೇತ ಸಮಿತಿ: ಶೋಭಾಯಾತ್ರೆಯಲ್ಲಿ ಗುಡ್ಡೆಹೊಸೂರು–ಬಸವನಹಳ್ಳಿಯ ವೀರಾಂಜನೇಯ ಸೇವಾ ಸಮಿತಿಗೆ ಪ್ರಥಮ ಬಹುಮಾನ ದೊರೆತಿದೆ. ಹಾರಂಗಿ ಗ್ರಾಮದ ವೀರ ಹನುಮ ಸೇವಾ ಸಮಿತಿಗೆ ದ್ವಿತೀಯ ಬಹುಮಾನ, ಹೆಚ್.ಆರ್.ಪಿ.ಕಾಲೊನಿಯ ಅಂಜನೀಪುತ್ರ ಸಮಿತಿಗೆ ತೃತೀಯ ಬಹುಮಾನ ಹಾಗೂ ಕೂಡಿಗೆ–ಕೂಡು ಮಂಗಳೂರಿನ ಹನುಮ ಸೇನೆಗೆ ನಾಲ್ಕನೇ ಬಹುಮಾನ ದೊರೆತಿದೆ.

ತಪ್ಪಿದ ಅನಾಹುತ

ಶೋಭಾಯಾತ್ರೆ ವೇಳೆ ಕೂಡುಮಂಗಳೂರು, ಕೂಡಿಗೆ ಹನುಮ ಸೇನಾ ಸಮಿತಿಯ ಉತ್ಸವ ಮಂಟಪಕ್ಕೆ ಬೆಂಕಿ ತಗುಲಿ ದೊಡ್ಡ ಅನಾಹುತ ತಪ್ಪಿದೆ. ಹನುಮ ಜಯಂತಿ ಅಂಗವಾಗಿ ಮಂಟಪಗಳ ಶೋಭಾಯಾತ್ರೆ ಸಂದರ್ಭ ಕೂಡಿಗೆ–ಕೂಡುಮಂಗಳೂರಿನ ಹನುಮ ಸೇನಾ ಸೇವಾ ಸಮಿತಿ ಮಂಟಪಕ್ಕೆ ಪ್ರದರ್ಶನ ಬಳಿಕ ಬೆಂಕಿ ಹೊತ್ತಿಕೊಂಡ ಘಟನೆ ಮುಂಜಾನೆ 3 ಗಂಟೆಗೆ ನಡೆದಿದೆ. ಪಟಾಕಿ ಸಿಡಿಸುವ ವೇಳೆ ಮೂರ್ತಿಯೊಂದರ ಕೈಯೊಳಗೆ ಹೊತ್ತಿದ ಪಟಾಕಿಯಿಂದ ಬೆಂಕಿ ಹೊತ್ತಿಕೊಂಡಿದೆ. ಸ್ಥಳಕ್ಕೆ ಅಗ್ನಿಶಾಮಕ ದಳ ಸಿಬ್ಬಂದಿ ಕೂಡಲೇ ಆಗಮಿಸಿ ಬೆಂಕಿ ನಂದಿಸಿ ಹೆಚ್ಚಿನ ಅನಾಹುತ ತಪ್ಪಿಸಿದರು.

ಇಂದು ಮಡಿಕೇರಿಯಲ್ಲಿ ಹುತ್ತರಿ ಹಬ್ಬ

ಮಡಿಕೇರಿ ಡಿ.3–ನಗರದ ಶ್ರೀ ಓಂಕಾರೇಶ್ವರ ದೇವಾಲಯದಲ್ಲಿ ಹುತ್ತರಿ ಹಬ್ಬವು ಡಿ.4 ರಂದು ರೋಹಿಣಿ ನಕ್ಷತ್ರ ಕರ್ಕಾಟಕ ಲಗ್ನದಲ್ಲಿ ನಡೆಯಲಿದೆ. ಅಂದು ರಾತ್ರಿ 8.40 ಗಂಟೆಗೆ ನೆರೆ ಕಟ್ಟುವುದು, 9.40 ಗಂಟೆಗೆ ಕದಿರು ಕುಯ್ಯುವುದು ನಂತರ ಪ್ರಸಾದ ವಿತರಣೆ ನಡೆಯಲಿದೆ.

ಹುತ್ತರಿ ಕೋಲಾಟವು ಡಿ.5 ರ ಮಧ್ಯಾಹ್ನ 3 ಗಂಟೆಗೆ ನಗರದ ಕೋಟೆ ಆವರಣದಲ್ಲಿ ನಡೆಯಲಿದೆ ಎಂದು ಓಂಕಾರೇಶ್ವರ ದೇವಾಲಯದ ಅಧ್ಯಕ್ಷ ಚುಮ್ಮಿ ದೇವಯ್ಯ ತಿಳಿಸಿದ್ದಾರೆ.

ಕುಶಾಲನಗರದಲ್ಲಿ ಇಂದು ಹುತ್ತರಿ ಆಚರಣೆ

ಕುಶಾಲನಗರ, ಡಿ.3–ಪಟ್ಟಣದ ಗೌಡ ಸಮಾಜದಲ್ಲಿ ಡಿ.4ರಂದು ಹುತ್ತರಿ ಹಬ್ಬ ಆಚರಣೆ ನಡೆಯಲಿದೆ ಎಂದು ಗೌಡ ಸಮಾಜದ ಅಧ್ಯಕ್ಷ ಚಿಲ್ಲನ ಗಣಿ ಪ್ರಸಾದ್ ತಿಳಿಸಿದ್ದಾರೆ.

ಗೌಡ ಸಮಾಜ, ಗೌಡ ಯುವಕ ಸಂಘ ಗೌಡ ಮಹಿಳಾ ಸ್ವಸಹಾಯ ಸಂಘ, ನಿವೃತ್ತ ಗೌಡ ಸೈನಿಕರ ಒಕ್ಕೂಟ ಸೇರಿದಂತೆ ಸಮಾಜದ ವಿವಿಧ ಅಂಗ ಸಂಸ್ಥೆಗಳ ಸಹಯೋಗದೊಂದಿಗೆ ರಾತ್ರಿ 8.40ಕ್ಕೆ ನೆರೆಕಟ್ಟುವುದು ತದನಂತರ ಗಣಪತಿ ದೇವಾಲಯಕ್ಕೆ ಮೆರವಣಿಗೆ ಮೂಲಕ ತೆರಳಿ ಪೂಜೆ ಸಲ್ಲಿಸಲಾಗುವುದು. 9.40ಕ್ಕೆ ಹಾರಂಗಿ ರಸ್ತೆಯಲ್ಲಿರುವ ಗೌಡ ಯುವಕ ಸಂಘ ಕಟ್ಟಡದ ಬಳಿ ಗದ್ದೆಯಿಂದ ಕದಿರು ತೆಗೆಯುವ ಕಾರ್ಯಕ್ರಮ ನಡೆಯಲಿದೆ. ಸ್ಥಳದಲ್ಲಿ ಸಮುದಾಯ ಬಾಂಧವರಿಗೆ, ಸಾರ್ವಜನಿಕರಿಗೆ ಕದಿರು ವಿತರಣೆ ಮಾಡಲಾಗುವುದು ಎಂದು ಅವರು ಪತ್ರಿಕಾಗೋಷ್ಠಿಯಲ್ಲಿ ಹೇಳಿದರು

ಸಮಾಜದ ಉಪಾಧ್ಯಕ್ಷ ಸೆಟ್ಟೇಜನ ದೊರೆ ಗಣಪತಿ, ಕುಲ್ಲಚೆಟ್ಟಿರ ಕಾಶಿ ಪೂವಯ್ಯ, ಗೌಡ ಯುವಕ ಸಂಘದ ಅಧ್ಯಕ್ಷ ಕೊಡಗನ ಹರ್ಷ, ಸಮಾಜದ ಕಾರ್ಯದರ್ಶಿ ಕುಲ್ಲಚನ ಹೇಮಂತ್ ಗೌಡ ಮಹಿಳಾ ಸ್ವಸಹಾಯ ಸಂಘದ ಪ್ರತಿನಿಧಿ ಕುದುಪಜೆ ದೇವಕಿ, ಪದ್ಮಾವತಿ ಗೌಡ ಮಹಿಳಾ ಒಕ್ಕೂಟ ಅಧ್ಯಕ್ಷೆ ಚೀಯಂಡಿ ಶಾಂತಿ, ಗೌಡ ಸಾಂಸ್ಕೃತಿಕ ಅಧ್ಯಕ್ಷ ಸೂದನ ಗೋಪಾಲ್, ನಿವೃತ್ತ ಗೌಡ ಸೈನಿಕರ ಒಕ್ಕೂಟದ ಅಧ್ಯಕ್ಷ ದೇವ ಜನ ಚಿನ್ನಪ್ಪ, ಗುಡ್ಡೆಮನೆ ವಿಶ್ವ ಕುಮಾರ್ ಇದ್ದರು.

ಇ–ಗಸ್ತು ತಂತ್ರಾಂಶದಲ್ಲಿ ಅರಣ್ಯ ಗಸ್ತು ನಿಗಾಕ್ಕೆ ಖಂಡ್ರೆ ಸೂಚನೆ

ಕೊಳ್ಳೇಗಾಲ, ಡಿ.3–ರಾಜ್ಯ ಅರಣ್ಯ ಇಲಾಖೆ ಅಭಿವೃದ್ಧಿಪಡಿಸಿರುವ ಇ–ಗಸ್ತು ತಂತ್ರಾಂಶದ ಮೂಲಕ ಇಲಾಖೆಯ ಮುಂಚೂಣಿ ಸಿಬ್ಬಂದಿ ದಿನವೊಂದಕ್ಕೆ ಎಷ್ಟು ಗಸ್ತು ತಿರುಗುತ್ತಾರೆ ಎಂಬ ಬಗ್ಗೆ ನಿಗಾ ಇಡುವಂತೆ ಅರಣ್ಯ ಸಚಿವ ಈಶ್ವರ ಬಿ ಖಂಡ್ರೆ ಸೂಚಿಸಿದ್ದಾರೆ.



ಅರಣ್ಯ ಸಚಿವ ಈಶ್ವರ ಖಂಡ್ರೆ ಕೊಳ್ಳೇಗಾಲದಲ್ಲಿ ಅಧಿಕಾರಿಗಳ ಸಭೆ ನಡೆಸಿದರು.

ಮಲೈ ಮಹದೇಶ್ವರ ವನ್ಯಜೀವಿ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಚಾಮರಾಜನಗರ ಮತ್ತು ಮೈಸೂರು ವೃತ್ತದ ಅರಣ್ಯಾಧಿಕಾರಿಗಳೊಂದಿಗೆ ಸಭೆ ನಡೆಸಿದ ಅವರು, ಹೊಸದಾಗಿ ರೂಪಿಸಲಾಗಿರುವ ಈ ತಂತ್ರಾಂಶದ ಬಗ್ಗೆ ಸೂಕ್ತ ಪ್ರತಿಕ್ರಿಯೆ ನೀಡಿ, ತಂತ್ರಾಂಶ ಅಭಿವೃದ್ಧಿ ಪಡಿಸಿ ಎಂದು ಆದೇಶಿಸಿದರು.

ಮಾನವ–ವನ್ಯಜೀವಿ ಸಂಘರ್ಷ ನಿಯಂತ್ರಿಸಲು ಗಸ್ತು ಅತ್ಯಂತ ಮುಖ್ಯವಾಗಿದ್ದು, ಇದನ್ನು ಬಲ ಪಡಿಸುವ ಅಗತ್ಯವಿದೆ. ಹುಲಿ ಸಂರಕ್ಷಿತ ಪ್ರದೇಶಗಳಲ್ಲಿ ಈಗಾಗಲೇ ಅಳವಡಿಸಲಾಗಿರುವ ಎಂ.ಸ್ಟ್ರೈಪ್ ಜೊತೆಗೆ ನಮ್ಮ ಇ–ಗಸ್ತು ತಂತ್ರಾಂಶವನ್ನು ಜಾರಿ ಮಾಡಿ ನಿಗಾ ಇಡುವಂತೆ ಸೂಚಿಸಿದರು.

ವಿದ್ಯಾರ್ಥಿಗಳಿಗೆ ಜಾಗೃತಿ ಮೂಡಿಸಿ: ಇಂದಿನ ಯುವ ಪೀಳಿಗೆಗೆ ಮತ್ತು ಮಕ್ಕಳಿಗೆ ಅರಣ್ಯ ಮತ್ತು ವನ್ಯಜೀವಿಗಳ ಸ್ವಭಾವದ ಬಗ್ಗೆ ಹೆಚ್ಚಿನ ಮಾಹಿತಿ ಇಲ್ಲ. ಈ ನಿಟ್ಟಿನಲ್ಲಿ ಇಲಾಖೆಯಲ್ಲಿರುವ ಉತ್ತಮ ವಾಗ್ಮಿಗಳು ಅಥವಾ ಆಸಕ್ತ ಎನ್.ಜಿ.ಓ. ಬಳಸಿ ಕೊಂಡು ಜಾಗೃತಿ ಮೂಡಿಸುವ ಕಾರ್ಯ ಮಾಡಿ, ಹುಲಿ ಪ್ರತಿಷ್ಠಾನದ ಹಣದಲ್ಲಿ 1/3ನೇ ಭಾಗವನ್ನು ಅರಣ್ಯದಂಚಿನ ಗ್ರಾಮಗಳಲ್ಲಿನ ಜನ ಸಂಪರ್ಕ ಕಾರ್ಯಕ್ಕೆ ವೆಚ್ಚ ಮಾಡಿ ಎಂದು ಸಚಿವರು ನಿರ್ದೇಶನ ನೀಡಿದರು. ಅದೇ ರೀತಿ ಹುಲಿ ಬಂದಾಗ ಏನು ಮಾಡಬೇಕು, ಚಿರತೆ, ಕರಡಿ, ಆನೆ ಬಂದರೆ ಹೇಗೆ ನಡೆದುಕೊಳ್ಳಬೇಕು, ಹಾವು ಕಂಡಾಗ ಏನು ಮಾಡಬೇಕು ಎಂಬ ಬಗ್ಗೆ ಕಾಡಿನಂಚಿನ ಮಕ್ಕಳಿಗೆ ತಿಳಿವಳಿಕೆ ಮೂಡಿಸಲು ಅಣಕು ಪ್ರದರ್ಶನಗಳನ್ನು ಏರ್ಪಡಿಸಿ ಎಂದು ಸಚಿವರು ತಿಳಿಸಿದರು.

ಅರಣ್ಯ ಸಿಬ್ಬಂದಿ ಗ್ರಾಮದಂಚಿನ ಜನರೊಂದಿಗೆ ಹೆಚ್ಚು ಸ್ನೇಹಪರವಾಗಿದ್ದಾಗ ಸಮಸ್ಯೆ ಪರಿಹರಿಸಲು ಸಾಧ್ಯ. ಗ್ರಾಮದ ಜನರಿಂದಲೇ ನಿಮಗೆ ಮಾಹಿತಿ ಲಭಿಸುತ್ತದೆ. ವನ್ಯಜೀವಿಗಳೂ ಸುರಕ್ಷಿತವಾಗಿರುತ್ತವೆ. ತಕ್ಷಣ ನೀವು ಸ್ಪಂದಿಸಿದರೆ ಜನರ ಜೀವ, ಬೆಳೆ ಉಳಿಯುತ್ತದೆ. ವನ್ಯಜೀವಿಗಳು ವಸತಿ ಪ್ರದೇಶದ ಬಳಿ ಬಂದಿರುವ ಬಗ್ಗೆ ಮಾಹಿತಿ ದೊರೆತ ಕೂಡಲೇ ಅಲ್ಲಿಗೆ ಧಾವಿಸಲು ವಾಹನ ಮತ್ತು ಸಿಬ್ಬಂದಿ ಸಜ್ಜಾಗಿರುವಂತೆ ನೋಡಿಕೊಳ್ಳಿ ಮತ್ತು ಹುಲಿ ಸಂಚಾರ ಇರುವ 100 ಕಿಮೀ ವ್ಯಾಪ್ತಿಯ ಗ್ರಾಮಗಳ ಬಳಿ ಪ್ರತಿ 5 ಕಿಮೀಗೆ ಒಂದು ತಾತ್ಕಾಲಿಕ ಶಿಬಿರ ಮಾಡಿ ಗಸ್ತು ಹೆಚ್ಚಿಸಿ ಹಿರಿಯ ಅಧಿಕಾರಿಗಳು ವನ್ಯ ಜೀವಿ–ಮಾನವ ಸಂಘರ್ಷ ಹೆಚ್ಚಿರುವ ಗ್ರಾಮಗಳಲ್ಲಿ ವಾಸ್ತವ್ಯ ಹೂಡಿ ಜನರ ಸಮಸ್ಯೆ ಆಲಿಸಿ ಪರಿಹಾರ ದೊರಕಿಸಬೇಕು ಎಂದರು. ಶಾಸಕರಾದ ಎ.ಆರ್.ಕೃಷ್ಣಮೂರ್ತಿ, ಎಂ.ಆರ್. ಮಂಜುನಾಥ್, ಜಿಲ್ಲಾಧಿಕಾರಿ ಶಿಲ್ಪಾನಾಗ್, ಜಿಪಂ ಸಿಇಓ ಮೋನಾ ರೋತ್, ಸಿಎಫ್‌ಓ ರವಿಶಂಕರ್, ಡಿಸಿಎಫ್ ಭಾಸ್ಕರ್, ಜಿಲ್ಲಾ ಪರಿಸರ ಅಧಿಕಾರಿ ಕೆ.ಎಲ್.ಸವಿತಾ, ಎಚ್.ವಿ. ಚಂದ್ರು ಇತರರು ಸಭೆಯಲ್ಲಿ ಉಪಸ್ಥಿತರಿದ್ದರು.

ಅಧಿವೇಶನದ ಬಳಿಕ ಯಸಳೂರಲ್ಲಿ ಅರ್ಜುನ ಸ್ಮಾರಕ ಉದ್ಘಾಟನೆ

ಕಾಡಾನೆ ಸೆರೆ ಕಾರ್ಯಾಚರಣೆ ವೇಳೆ ಹುತಾತ್ಮನಾದ ದಸರಾ ಆನೆ ಅರ್ಜುನನ ಸ್ಮಾರಕವನ್ನು ಅಧಿವೇಶನದ ಬಳಿಕ ಉದ್ಘಾಟನೆ ನೆರವೇರಿಸುವುದಾಗಿ ಅರಣ್ಯ ಸಚಿವ ಈಶ್ವರ ಖಂಡ್ರೆ ತಿಳಿಸಿದರು. ಯಸಳೂರಿನಲ್ಲಿ ಮತ್ತು ಅರ್ಜುನ ಇದ್ದ ಶಿಬಿರ ಬಳ್ಳೆಯಲ್ಲಿ ನಿರ್ಮಿಸುವುದಾಗಿ ಸರ್ಕಾರ ಹೇಳಿತ್ತು. ಅದರಂತೆ ಸ್ಮಾರಕ ನಿರ್ಮಾಣವಾಗಿದ್ದು, ಬಳ್ಳೆಯಲ್ಲಿ ಈಗಾಗಲೇ ಉದ್ಘಾಟನೆ ನೆರವೇರಿದೆ. ಶಾಸಕರ ಸಲಹೆಯಂತೆ ಕೆಲವೊಂದು ಮೂಲಭೂತ ಸೌಕರ್ಯವನ್ನು ಯಸಳೂರಿನಲ್ಲಿ ಕಲ್ಪಿಸಲಾಗುತ್ತಿದ್ದು, ಅಧಿವೇಶನದ ಬಳಿಕ ಉದ್ಘಾಟಿಸಲಾಗುವುದು.

ಆನೆ ರಕ್ಷಿಸಿದ ಸಿಬ್ಬಂದಿ ಸನ್ಮಾನಿಸಿದ ಖಂಡ್ರೆ



ನಾಲೆಯಲ್ಲಿ ಸಿಲುಕಿದ್ದ ಸಲಗವನ್ನು ಯಶಸ್ವಿಯಾಗಿ ರಕ್ಷಿಸಿದ ಅರಣ್ಯ ಸಿಬ್ಬಂದಿ ಮತ್ತು ಪಶುವೈದ್ಯರನ್ನು ಸಚಿವ ಖಂಡ್ರೆ ಸನ್ಮಾನಿಸಿದರು

ಕೊಳ್ಳೇಗಾಲ: ಇತ್ತೀಚೆಗೆ ಶಿವನ ಸಮುದ್ರದ ಜಲ ವಿದ್ಯುತ್‌ಗಾರದ ಜಲಾಶಯದ ಬಳಿಯ ನಾಲೆಯಲ್ಲಿ ಸಿಲುಕಿದ್ದ ಸಲಗವನ್ನು ಯಶಸ್ವಿಯಾಗಿ ರಕ್ಷಿಸಿದ ಅರಣ್ಯ ಸಿಬ್ಬಂದಿ ಮತ್ತು ಪಶುವೈದ್ಯರನ್ನು ಅರಣ್ಯ ಸಚಿವ ಈಶ್ವರ ಬಿ.ಖಂಡ್ರೆ ಸನ್ಮಾನಿಸಿದರು.

ಸಭೆಗೂ ಮುನ್ನ 40 ಅಡಿ ಆಳದಿಂದ ಆನೆಯನ್ನು ರಕ್ಷಿಸಿದ ತಂಡದಲ್ಲಿದ್ದ ಮಂಡ್ಯ ಪ್ರಾದೇಶಿಕ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ರಘು, ಎಸಿಎಫ್ ಮಹದೇವ ಸ್ವಾಮಿ, ಆರ್‌ಎಫ್‌ಓ ಗವಿಯಪ್ಪ ಪಶುವೈದ್ಯ ಆದರ್ಶ್ ಹಾಗೂ ಶಾರ್ಪ್ ಶೂಟರ್ ಅಕ್ರಮ್ ಅವರನ್ನು ಸನ್ಮಾನಿಸಿದರು.

ಉತ್ತಮ ಕಾರ್ಯ ಮಾಡಿದ ಸಿಬ್ಬಂದಿ ಪ್ರಶಂಸೆಗೆ ಮತ್ತು ಸನ್ಮಾನಕ್ಕೆ ಅರ್ಹರಾಗುತ್ತಾರೆ. ಅದೇ ರೀತಿ ತಪ್ಪು ಮಾಡುವ ಅಧಿಕಾರಿಗಳ ವಿರುದ್ಧ ನಿರ್ದಾಕ್ಷಿಣ್ಯವಾಗಿ ಕ್ರಮ ಜರುಗಿಸಲಾಗುವುದು ಎಂದು ಇದೇ ವೇಳೆ ತಿಳಿಸಿದರು.

ಗುಂಡ್ಲುಪೇಟೆಯಲ್ಲಿ ಹನುಮ ಜಯಂತಿ



ಗುಂಡ್ಲುಪೇಟೆ, ಡಿ.3 (ಸೋಮ್.ಜಿ)– ಪಟ್ಟಣದ ಚಾಮರಾಜನಗರ ರಸ್ತೆಯಲ್ಲಿರುವ ಆಂಜನೇಯಸ್ವಾಮಿ ದೇವಾಲಯದಲ್ಲಿ ಹನುಮ ಜಯಂತಿ ಕಾರ್ಯಕ್ರಮವನ್ನು ವಿಜೃಂಭಣೆಯಿಂದ ನೆರವೇರಿಸಲಾಯಿತು.

ಹನುಮ ಜಯಂತಿ ಪ್ರಯುಕ್ತ ದೇವಾಲಯವನ್ನು ತಳಿರು ತೋರಣ ಮತ್ತು ವಿದ್ಯುತ್ ದೀಪಗಳಿಂದ ಅಲಂಕರಿಸಲಾಗಿತ್ತು. ದೇವಾಲಯದಲ್ಲಿರುವ ಆಂಜನೇಯಸ್ವಾಮಿ ಮೂರ್ತಿಗೆ ಚಿನ್ನದ ಕವಚ ಧಾರಣೆ ಮಾಡಿ ವಿವಿಧ ಪುಷ್ಪ ಗಳಿಂದ ಅಲಂಕಾರ ಮಾಡಿ ಪೂಜೆ ನೆರವೇರಿಸಲಾಯಿತು.

ಪಟ್ಟಣದ ಪುರಸಭೆಯ ಮಾಜಿ ಅಧ್ಯಕ್ಷ ದಿವಂಗತ ಎಂ.ಪುಟ್ಟರಂಗನಾಯಕ್ ಕುಟುಂಬ ವರ್ಗದವರು ಆಯೋಜಿಸುವ ಈ ಹನುಮ ಜಯಂತಿಯಲ್ಲಿ ಪಟ್ಟಣದ ಹಾಗೂ ತಾಲೂಕಿನ ವಿವಿಧ ಗ್ರಾಮಗಳ ಸಹಸ್ರಾರು ಮಂದಿಗೆ ಅನ್ನಸಂತರ್ಪಣೆಯನ್ನು ನಡೆಸಲಾಯಿತು. ಭಕ್ತರು ಸರದಿ ಸಾಲಿನಲ್ಲಿ ನಿಂತು ದೇವರ ದರ್ಶನ ಪಡೆದರು. ಮಾಜಿ ಪುರಸಭೆ ಅಧ್ಯಕ್ಷ ಪಿ.ಗಿರೀಶ್ ಮತ್ತು ಹಿರಿಯ ಮುಖಂಡ ಎನ್.ಮಲ್ಲೇಶ್ ಇತರರು ಭಾಗವಹಿಸಿದ್ದರು.

ಬಿ.ಸೋಮಶೇಖರಪ್ಪ ನಿಧನ



ಚಾಮರಾಜನಗರ, ಡಿ.3–ಕೋಟಂಬಳ್ಳಿ ಗ್ರಾಮದ ನಿವಾಸಿ ದಬಾನ್ ಬಿ.ಸೋಮಶೇಖರಪ್ಪ(78) ಬುಧವಾರ ನಿಧನರಾದರು.

ಮೃತರಿಗೆ ಪತ್ನಿ, ಕಾಳಮ್ಮ, ಪುತ್ರ ಮಹೇಶ್ ಹಾಗೂ ಪುತ್ರಿ ಭಾರತಿ ಇದ್ದಾರೆ. ಮೃತರ ಅಂತ್ಯಕ್ರಿಯೆ ಗುರುವಾರ ಮಧ್ಯಾಹ್ನ ಅವರ ಜಮೀನಿನಲ್ಲಿ ನಡೆಯಲಿದೆ ಎಂದು ಕುಟುಂಬದವರು ತಿಳಿಸಿದ್ದಾರೆ.

ಚಾ.ನಗರದ ಹಳೆ ಬಸ್ ನಿಲ್ದಾಣದಲ್ಲಿ ಹನುಮ ಜಯಂತಿ


ಚಾಮರಾಜನಗರ, ಡಿ.3(ಎಸ್‌ಎಸ್)– ಹನುಮ ಜಯಂತಿ ಅಂಗವಾಗಿ ನಗರದ ಹಳೆ ಬಸ್ ನಿಲ್ದಾಣದ ಮಾರಿ ಗುಡಿ ಮುಂಭಾಗ ಇರುವ ಅಭಯ ಕಾರ್ಯ ಸಿದ್ಧಿ ಆಂಜನೇಯ ಸ್ವಾಮಿ ದೇವಸ್ಥಾನ, ಇತಿಹಾಸ ಪ್ರಸಿದ್ಧ ಹರಳುಕೋಟೆ ಆಂಜನೇಯ, ನಗರದ ಕೊಳದ ಬೀದಿಯಲ್ಲಿರುವ ವೀರಾಂಜನೇಯ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಿ ಮಹಾ ಮಂಗಳಾರತಿ ಮಾಡಿ, ಭಕ್ತರಿಗೆ ಪ್ರಸಾದ ವಿನಿಯೋಗ ಮಾಡಲಾಯಿತು.

ಬೆಳಗ್ಗೆ ಆಂಜನೇಯ ಸ್ವಾಮಿಗೆ ವಿವಿಧ ಬಗೆಯ ಅಭಿಷೇಕ ನಡೆಸಿ, ಮಂತ್ರ ಪಠಿಸಿ ನಂತರ ಮಹಾಮಂಗಳಾರತಿ ಮಾಡಿ, ಪ್ರಸಾದ ವಿನಿಯೋಗ ಮಾಡಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಅರ್ಚಕ ರಾಮಕೃಷ್ಣ ಭಾರದ್ವಾಜ್ ನಿರ್ದಿಷ್ಟ ಮಂತ್ರ ಪಠಣ ಮತ್ತು ಉಪವಾಸದಿಂದ ಜೀವನದಲ್ಲಿ ಶಕ್ತಿ, ಭಕ್ತಿ, ಯುಕ್ತಿ ಹೆಚ್ಚುತ್ತದೆ. ದುಷ್ಟಶಕ್ತಿಗಳಿಂದ ರಕ್ಷಣೆ, ಆತ್ಮವಿಶ್ವಾಸ ವೃದ್ಧಿ ಮತ್ತು ಉತ್ತಮ ಆರೋಗ್ಯ ಪ್ರಾಪ್ತಿಯಾಗುತ್ತದೆ ಎಂದರು.

ಹನುಮ ಜಯಂತಿಯ ದಿನದಂದು ನಿರ್ದಿಷ್ಟ ಆಚರಣೆಗಳನ್ನು ಕೈಗೊಳ್ಳಬೇಕು. ಈ ಆಚರಣೆಗಳಿಂದ ಆತ್ಮವಿಶ್ವಾಸ ಹೆಚ್ಚಾಗುತ್ತದೆ. ದೃಷ್ಟಿದೋಷಗಳು, ಮಾಟ ಮಂತ್ರಗಳು, ಅಥವಾ ಯಾವುದೇ ಕೆಟ್ಟ ಪ್ರಂಯೋಗಗಳು ಇದ್ದರೂ ಅವು ದೂರವಾಗುತ್ತವೆ ಎಂದು ಭಾರದ್ವಾಜ್ ತಿಳಿಸಿದರು.

ನರೇಗಾ ಉತ್ತಮ ಯೋಜನೆ: ಪಿಡಿಓ ವಸಂತ



ಗೂಳೀಪುರಜದಲ್ಲಿ ನಡೆದ ನರೇಗಾ ಗ್ರಾಮಸಭೆಯಲ್ಲಿ ಪಿಡಿಒ ವಸಂತ ಮಾತನಾಡಿದರು.

ಯಳಂದೂರು, ಡಿ.3 (ವಿ.ನಾಗರಾಜು)– ನರೇಗಾ ಯೋಜನೆ ಒಂದು ಉತ್ತಮ ಯೋಜನೆಯಾಗಿದೆ. ಪಂಚಾಯಿತಿ ವ್ಯಾಪ್ತಿಯ ಗ್ರಾಮಗಳಲ್ಲಿ ಅನೇಕ ಅಭಿವೃದ್ಧಿ ಕೆಲಸಗಳನ್ನು ಮಾಡಿಕೊಳ್ಳಲು ಇದರಿಂದ ಸಾಧ್ಯವಾಗುತ್ತದೆ ಎಂದು ಗ್ರಾಪಂ ಪಿಡಿಒ ವಸಂತ ಹೇಳಿದ್ದಾರೆ

ಪಂಚಾಯಿತಿ ಆವರಣದಲ್ಲಿ ನಡೆದ ನರೇಗಾ ಗ್ರಾಮಸಭೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು, ರೈತರಿಗೂ ಕೂಡ ನರೇಗಾ ಯೋಜನೆ ಒಂದು ವರದಾನವಾಗಿದೆ. ಈ ನಿಟ್ಟಿನಲ್ಲಿ ಸಾರ್ವಜನಿಕರು ಇದರ ಲಾಭವನ್ನು ಪಡೆದುಕೊಳ್ಳಬೇಕು ಎಂದು ಸಲಹೆ ನೀಡಿದರು.

ಗೂಳೀಪುರ ಗ್ರಾಪಂ ವ್ಯಾಪ್ತಿಯಲ್ಲಿ 33.10 ಲಕ್ಷ ರೂ. ಕಾಮಗಾರಿಯನ್ನು ಮಾಡಲಾಗಿದೆ. ಈ ಸಾಲಿನಲ್ಲಿ ಪಂಚಾಯಿತಿ ವ್ಯಾಪ್ತಿಯಲ್ಲಿ ಒಟ್ಟು 107 ಕಾಮಗಾರಿಗಳು ನಡೆದಿವೆ. ಇದರಲ್ಲಿ 27,28 ಲಕ್ಷ ರೂ. ಕೂಲಿ ಮೊತ್ತ ಹಾಗೂ 5.31 ಲಕ್ಷ ರೂ. ಸಾಮಾಗ್ರಿ ಮೊತ್ತ ಸೇರಿದಂತೆ ಒಟ್ಟು 33.10 ಲಕ್ಷ ರೂ.ಗಳ ಕಾಮಗಾರಿ ನಡೆದಿದೆ. ಇದರಲ್ಲಿ ಸಿಸಿ ರಸ್ತೆ, ಚರಂಡಿ, ಸಾಮೂಹಿಕ, ವೈಯುಕ್ತಿಕ ಕಾಮಗಾರಿಗಳು ಸೇರಿವೆ ಎಂದರು. ತಮ್ಮ ಜಮೀನುಗಳಿಗೆ ತೆರಳುವ ರಸ್ತೆ ಅಭಿವೃದ್ಧಿ, ಬದು–ಕಾಲುವೆಗಳ ದುರಸ್ತಿ, ನೀರಿನ ಹೊಂಡ, ಕೊಟ್ಟಿಗೆ ನಿರ್ಮಾಣ ಸೇರಿದಂತೆ ಅನೇಕ ಕೆಲಸಗಳನ್ನು ಮಾಡಿಕೊಳ್ಳಲು ಇದರಿಂದ ಸಾಧ್ಯವಾಗುತ್ತದೆ ಎಂದು ತಿಳಿಸಿದರು.

ಗ್ರಾಪಂ ಅಧ್ಯಕ್ಷೆ ರೇಖಾ ಅಶ್ವಥ್, ಉಪಾಧ್ಯಕ್ಷೆ ಮಹೇಶ್ವರಿ, ಸದಸ್ಯರಾದ ಬೂದುಂಬಳ್ಳಿ ಗಿರೀಶ್, ನಾಗಣ್ಣ ಶಂಕರ್, ಜಡೇಸ್ವಾಮಿ, ರವಿಶಂಕರ ಮೂರ್ತಿ, ಚಿನ್ನಮ್ಮ ಕಾರ್ಯದರ್ಶಿ ನಾಗರಾಜು, ರಾಜೇಂದ್ರ, ಮಂಜು, ಸ್ವಾಮಿ, ಸಾಮಾಜಿಕ ಲೆಕ್ಕ ಪರಿಶೋಧಕ ಪ್ರಸನ್ನ ಅರಣ್ಯ ಇಲಾಖೆಯ ನುಜುಂಡಯ್ಯ, ತೋಟಗಾರಿಕೆ ಇಲಾಖೆಯ ಮಂಜುಳಾ, ನೂತನ್, ಮಧು ಸೇರಿದಂತೆ ಅನೇಕರು ಇದ್ದರು.

ಮಕ್ಕಳ ಪ್ರತಿಭೆ ಗುರುತಿಸುವುದು ಶಿಕ್ಷಕರ ಬಹುದೊಡ್ಡ ಜವಾಬ್ದಾರಿ

ಚಾಮರಾಜನಗರ: ಮಕ್ಕಳಲ್ಲಿ ಅಡಗಿರುವ ಸುಪ್ತ ಪ್ರತಿಭೆ ಗುರುತಿಸಲು ಪ್ರತಿಭೆ ಪೂರಕವಾಗಿದ್ದು, ಓದಿನ ಜೊತೆಗೆ ಪಠ್ಯೇತರ ಚಟುವಟಿಕೆಗಳಲ್ಲೂ ಗುರುತಿಸಿ ಪ್ರೋತ್ಸಾಹಿಸುವುದು ಶಿಕ್ಷಕರ ಬಹುದೊಡ್ಡ ಜವಾಬ್ದಾರಿಯಾಗಿದೆ ಎಂದು ಬಿಆರ್‌ಸಿ ರಾಜೀವ್ ಹೇಳಿದರು.

ತಾಲೂಕಿನ ಮಂಗಲ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ತಾಪಂ, ಜಿಪಂ, ಶಾಲಾ ಶಿಕ್ಷಣ ಇಲಾಖೆ, ಸಮಗ್ರ ಶಿಕ್ಷಣ ಕರ್ನಾಟಕ ಸಮೂಹ ಸಂಪನ್ಮೂಲ ಕೇಂದ್ರದ ವತಿಯಿಂದ ನಡೆದ ಕ್ಲಸ್ಟರ್ ಮಟ್ಟದ ಪ್ರತಿಭಾ–ಕಲೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಶಾಲೆಯಲ್ಲಿ ನಡೆಯುವ ಕ್ರೀಡೋತ್ಸವದಲ್ಲಿ ಮಕ್ಕಳ ಕ್ರೀಡಾಪ್ರತಿಭೆ ಗುರುತಿಸುವ ವೇದಿಕೆಯಾಗಿ ಮಾಡಿಕೊಳ್ಳಬೇಕು ಮಕ್ಕಳಲ್ಲಿ ಓದಿನ ಜೊತೆಗೆ ಪಠ್ಯೇತರ ಚಟುವಟಿಕೆಗಳಲ್ಲೂ ಪ್ರತಿಭೆಗಳನ್ನು ಗುರುತಿಸಿ ಪ್ರೋತ್ಸಾಹಿಸುವುದು ಶಿಕ್ಷಕರ ಬಹುದೊಡ್ಡ ಜವಾಬ್ದಾರಿಯಾಗಿದೆ ಎಂದರು.

ಕಾರ್ಯಕ್ರಮದಲ್ಲಿ ನಾರಾಯಣಸ್ವಾಮಿ, ಸುಮ, ಸುರೇಶ್, ಸಿ.ಕೆ.ರಾಮಸ್ವಾಮಿ, ಗಿರಿಜಾ, ಜ್ಯೋತಿ, ಸುಮ, ವಾಣಿಶ್ರೀ, ಸುನಿತ, ಸಿಆರ್.ಪಿ.ಶಿವಮೂರ್ತಿ, ಸವಿತ, ಇಸಿಓ ರೇವಣ್ಣ, ಎಂ.ಪುಟ್ಟಸ್ವಾಮಿ ನಂಜುಂಡಸ್ವಾಮಿ, ರಾಜು, ವಿವಿಧ ಶಾಲೆಯ ಶಿಕ್ಷಕರು, ಪೋಷಕರು,

3 ಲಕ್ಷ ಅನುದಾನದ ಚೆಕ್ ಹಸ್ತಾಂತರ



ಸಮೀಪದ ಬೆಟ್ಟದಮಾದಹಳ್ಳಿ ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದ ಸಭಾಭವನಕ್ಕೆ ಚಾಮುಲ್‌ನಿಂದ ಮಂಜೂರಾದ 3 ಲಕ್ಷ ಅನುದಾನದ ಚೆಕ್‌ನ್ನು ಜಿಲ್ಲಾ ಸಹಕಾರ ಒಕ್ಕೂಟದ ಅಧ್ಯಕ್ಷ ಎಚ್.ಎಸ್.ನಂಜುಂಡ ಪ್ರಸಾದ್, ಚಾಮುಲ್ ನಿರ್ದೇಶಕ ಎಂ.ಪಿ.ಸುನೀಲ್ ಜೊತೆಗೂಡಿ ಸಂಘದ ಅಧ್ಯಕ್ಷ ಬಿ.ಸಿ.ಮಹದೇವ ಸ್ವಾಮಿಗೆ ಹಸ್ತಾಂತರಿಸಿದರು. ಸಂಘದ ನಿರ್ದೇಶಕ ಮಲ್ಲು, ಕೋಟೆಕೆರೆ ಫ್ಯಾಕ್ಸ್ ಅಧ್ಯಕ್ಷ ಕೆ.ಎಂ.ಮಹದೇವಸ್ವಾಮಿ, ಸಂಘದ ವಿಸ್ತರಣಾಧಿಕಾರಿಗಳಾದ ರಂಜಿತ, ಪ್ರಕಾಶ್, ಸಿದ್ದಲಿಂಗೇಶ್ ಕೋರಿ ಸೇರಿದಂತೆ ಹಲವರಿದ್ದರು.

ಟೀಂ ಇಂಡಿಯಾ ವಿರುದ್ಧ ಹರಿಣ ಪಡೆಗೆ ರೋಚಕ ಜಯ



ದಕ್ಷಿಣ ಆಫ್ರಿಕಾ ತಂಡದ ಆಟಗಾರರ ಸಂಭ್ರಮ.

ಪಂದ್ಯಶ್ರೇಷ್ಠ: ಏಡೆನ್ ಮಾರ್ಕ್ರಂ

ರಾಯ್‌ಪುರ, ಡಿ.3(ಪಿಟಿಐ)– ಇಲ್ಲಿನ ಶಾಹೀದ್ ವೀರ್ ನಾರಾಯಣ್ ಸಿಂಗ್ ಕ್ರೀಡಾಂಗಣದಲ್ಲಿ ನಡೆದ ಭಾರತ ಹಾಗೂ ದಕ್ಷಿಣ ಆಫ್ರಿಕಾ ತಂಡಗಳ ನಡುವಿನ 2ನೇ ಏಕದಿನ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ 4 ವಿಕೆಟ್‌ಗಳ ರೋಚಕ ಗೆಲುವು ಸಾಧಿಸಿದೆ. ಈ ಮೂಲಕ ಮೊದಲ ಪಂದ್ಯದ ಸೋಲಿನ ಅವಮಾನಕ್ಕೆ ಪ್ರತೀಕಾರ ತೀರಿಸಿಕೊಂಡಿದ್ದು, 3 ಪಂದ್ಯಗಳ ಸರಣಿಯಲ್ಲಿ ಈ ತಂಡಗಳು 1–1 ಅಂತರದ ಸಮಬಲ ಸಾಧಿಸಿವೆ. ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಭಾರತ ವಿರಾಟ್ ಕೊಹ್ಲಿ ಹಾಗೂ ರುತುರಾಜ್ ಗಾಯಕ್ವಾಡ್ ಶತಕದ ನೆರವಿನಿಂದ 50 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 358 ರನ್ ಬಾರಿಸಿ ದಕ್ಷಿಣ ಆಫ್ರಿಕಾಗೆ 359 ರನ್‌ಗಳ ಸವಾಲಿನ ಗುರಿಯನ್ನು ನೀಡಿತ್ತು. ಈ ಗುರಿ ಬೆನ್ನಟ್ಟುವಲ್ಲಿ ಯಶಸ್ವಿಯಾದ ದಕ್ಷಿಣ ಆಫ್ರಿಕಾ 49.2 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 359 ರನ್ ಕಲೆಹಾಕಿತು.

ಮೊದಲು ಬ್ಯಾಟ್ ಮಾಡಿದ ಭಾರತ ತಂಡದ ಪರ ಋತುರಾಜ್ ಗಾಯಕ್ವಾಡ್ 83 ಎಸೆತಗಳಲ್ಲಿ 105 ರನ್ ಬಾರಿಸಿದರೆ, ವಿರಾಟ್ ಕೊಹ್ಲಿ 93 ಎಸೆತಗಳಲ್ಲಿ 102 ರನ್ ಬಾರಿಸಿದರು. ಉಳಿದಂತೆ ನಾಯಕ ಕೆಎಲ್ ರಾಹುಲ್ ಅಜೇಯ 66, ವಾಷಿಂಗ್ಟನ್ ಸುಂದರ್ 1, ಜಡೇಜಾ ಅಜೇಯ 24 ರನ್ ಬಾರಿಸಿದರು. ದಕ್ಷಿಣ ಆಫ್ರಿಕಾದ ಪರ ಮಾರ್ಕೋ ಯಾನ್ಸೆನ್ 2, ನಾಂಡ್ರೆ ಬರ್ಗರ್ ಮತ್ತು ಎನ್‌ಗಿಡಿ ತಲಾ ಒಂದೊಂದು ವಿಕೆಟ್ ಪಡೆದರು. ಈ ಮೊತ್ತ ಬೆನ್ನತ್ತಿದ ಹರಿಣ ಪಡೆಗೆ ಏಡನ್ ಮಾರ್ಕ್ರಮ್ ಶತಕದಾಟ ನೆರವಾಯಿತು. ಮಾರ್ಕ್ರಂ 110 ರನ್ ಬಾರಿಸಿ, ಗೆಲುವು ಸುಲಭಗೊಳಿಸಿದರು. ಉಳಿದಂತೆ ಟೆಂಬಾ ಬವುಮಾ 46, ಮ್ಯಾಥ್ಯೂ ಬ್ರೀಟ್ಜ್ಕೆ 68 ರನ್ ಹಾಗೂ ಡಿವಾಲ್ಡ್ ಬ್ರೆವಿಸ್ 54, ಕಾರ್ಬಿನ್ ಬಾಷ್ ಅಜೇಯ 26, ಕೇಶವ್ ಮಹಾರಾಜ್ ಅಜೇಯ 10 ರನ್ ಗಳಿಸಿ ತಂಡಕ್ಕೆ ಗೆಲುವು ತಂದುಕೊಟ್ಟರು. ಭಾರತದ ಪರ ಅರ್ಷ್‌ದೀಪ್ ಸಿಂಗ್ ಹಾಗೂ ಪ್ರಸಿದ್ಧ್ ಕೃಷ್ಣ ತಲಾ ಎರಡು ವಿಕೆಟ್, ಹರ್ಷಿತ್ ರಾಣಾ ಹಾಗೂ ಕುಲ್‌ದೀಪ್ ಯಾದವ್ ತಲಾ ಒಂದೊಂದು ವಿಕೆಟ್ ಪಡೆದರು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಸೈಟ್ ಬೇಕಾಗಿದೆ
ನಿರ್ಮಾಣ್ ನಗರ ಬಸವೇಶ್ವರ ನಗರ ವರುಣ. ಮಾಲೀಕರು ಸಂಪರ್ಕಿಸಿ
96631 18699

ಬೇಕಾಗಿದ್ದಾರೆ
ಹಸು ಫಾರಂನಲ್ಲಿ ಕೆಲಸ ಮಾಡಲು ಎರಡು ಫ್ಯಾಮಿಲಿ (ಕುಟುಂಬ) ಬೇಕಾಗಿದ್ದಾರೆ. ಆಕರ್ಷಕ ವೇತನ & ಉಚಿತ ವಸತಿ ಸೌಲಭ್ಯವಿದೆ.
Mob: 9663503333

SITE REQUIRED
NIRRMAN NAGAR, BASAVESHWARA NAGAR, VARUNA
OWNERS ARE INVITED TO CONTACT
96631 18699

ಬೇಕಾಗಿದ್ದಾರೆ
ಹೊಸ ಹೋಟೆಲ್‌ಗೆ ಮಾಂಸಾಹಾರ (Non-Veg) ಅಡುಗೆ ಮಾಡಲು ನುರಿತ ಭಟ್ಟರು ಹಾಗೂ ಕೆಲಸಗಾರರು ಬೇಕಾಗಿದ್ದಾರೆ. ಬಸವನಗುಡಿ, ಹೆಬ್ಬಾಳು, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಹತ್ತಿರ.
Mob: 88844 44075

ನಿವೇಶನ ಮಾರಾಟಕ್ಕಿದೆ
1) 30x40 S/F ತಳೂರು
2) 30x40 N/F ಆಲನಹಳ್ಳಿ
Art of Living ಆಶ್ರಮ ಎದುರು
9008570086, 9591810822

ಸೈಟು ಮಾರಾಟಕ್ಕಿದೆ
30x40 W/F, 86 Lakhs
ರಾಜರಾಜೇಶ್ವರಿನಗರ, ದಟ್ಟಗಳ್ಳಿ ಪಕ್ಕ
30x40 E/F, 34 Lakhs
ಸುವರ್ಣನಗರ.
Mob: 9845765573

WE DO
MODULAR KITCHENS & WARDROBES
Call : 98867 22751
www.spacedizin.com

ಬೇಕಾಗಿದ್ದಾರೆ
ಆಶ್ರಮದಲ್ಲಿ ಉಳಿದುಕೊಂಡು ಕೆಲಸ ಮಾಡುವಂಥವರು , ಮಹಿಳೆಯರು ಬೇಕಾಗಿದ್ದಾರೆ. ಎಸ್‌ಎಸ್‌ಎಲ್‌ಸಿ, ಪಿಯುಸಿ, ಫೇಲ್ /ಪಾಸ್ ಊಟ ವಸತಿ ದೊರೆಯುತ್ತದೆ
9110455297

SITE FOR SALE
40x60 W/F
Vishwa Prajna Layout Near New RT Nagar
Direct registration only
Mob: 9740088990

SITE FOR SALE
MUDA Approved - North Facing Site Pre-University Layout Attached To KHB, Kenchalagudu, H.D. Kote Road, Mysuru, Contact
7899181775

ಶ್ರೀ ಸಂಜೀವಿನಿ ಗೋಲ್ಡ್ ಕಂಪನಿ
ನೀವು ಗಿರವಿ ಇಟ್ಟ ಚಿನ್ನಾಭರಣ ಬಿಡಿಸಿ ಉಳಿದ ಹಣವನ್ನು ನಿಮ್ಮ ಸ್ಥಳದಲ್ಲೇ ನೀಡಲಾಗುತ್ತದೆ. ಒಂದು ಗ್ರಾಂ ಚಿನ್ನಕ್ಕೆ–
Rs. 11,700 (24 CT)
9108146123

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

OPEN FASHION SHOW CONTEST
STYLISH KID CONTEST 3.0
Mysore 2025 Age 2 to 6 years
13th SATURDAY 4 pm REGISTER NOW
ORGANIZED BY Alpha International School Mysore
+91 7829937469 +91 7899744799 +91 9108351235 +91 8971087059

RAI ESTATES
RERA APPROVED · MUDA APPROVED · E-KHATA
ಮೈಸೂರಿನ ಸುತ್ತ ರೈ ಎಸ್ಟೇಟ್ ನಿರ್ಮಿಸಿರುವ ಲೇಔಟ್‌ಗಳಲ್ಲಿ ಸೈಟ್ ಕೊಳ್ಳಲು ಸಂಪರ್ಕಿಸಿ
- King City
- Golden Palms
- Green Park
- Vardaman Nagar
- Paradise Enclave
- Green Acres
- Spring Meadows
- Dream City
- Dream Valley
- Eastern Hills

9448181488, 9945061604
#10, 1st Floor, New Sayyaji Rao Road, Bamboo Bazar, Mysuru - 570 001

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ತಕ್ಷಣ ಬೇಕಾಗಿದ್ದಾರೆ
ಲಾರಿ ಚಾಲಕರು (32 ಅಡಿ ಸಿಂಗಲ್ XL ಕಂಟೇನರ್) ಕ್ಯಾಂಟೀನ್, ಪಿಎಫ್ ಮತ್ತು ಇಎಸ್‌ಐ ಸೌಲಭ್ಯ ಲಭ್ಯವಿದೆ. ಸಂಪರ್ಕಿಸಿ:
9341623350

IMKTA - PRE-SCHOOL TEACHER TRAINING
Diploma Courses for SSLC, PU or any Degree Candidates.
Regular / Saturday / Correspondence Courses with practical training. www: imkta.in
ALPHA INTERNATIONAL SCHOOL @ Srirampura
Call: 7829937469
ONLINE TRAINING AVAILABLE

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 9535361279

ಬೇಕಾಗಿದ್ದಾರೆ
ಕರ್ನಾಟಕದಾದ್ಯಂತ ಪ್ರತಿಷ್ಠಿತ ಕಂಪನಿ ಮತ್ತು ಆಫೀಸ್ ಕೆಲಸಗಳಿಗೆ 7th, 10th, ITI, B.Com., B.Sc., BE, Any Degree ಪಾಸ್ / ಫೇಲ್ ಆದಂತಹ ಯುವಕ, ಯುವತಿಯರು, ವಿದ್ಯಾರ್ಥಿಗಳು ಇಂದೇ ಬೇಕಾಗಿದ್ದಾರೆ. ESI, PF ನೊಂದಿಗೆ ಊಟ, ವಸತಿ ಇರುತ್ತದೆ. ಸಂಬಳ 20,000 ರಿಂದ 75,000.
Mob: 9916788422

ನೇರ ಆಯ್ಕೆ ಉದ್ಯೋಗವಕಾಶ
ವರ್ಕ್ ಫ್ರಮ್ ಹೋಂ ಮನೆಯಿಂದಲೇ ಕೆಲಸ ಪಾರ್ಟ್ ಟೈಮ್ & ಫುಲ್ ಟೈಮ್ ವರ್ಕ್‌ಗಳಿಗೆ ವಿದ್ಯಾರ್ಥಿಗಳಿಗೆ + ಮಹಿಳೆಯರಿಗೆ ಹಾಗೂ ವಯಸ್ಕರಿಗೆ ಮೊದಲ ಆದ್ಯತೆ. ಕೊರಿಯರ್ ಸೌಲಭ್ಯವಿದೆ. 7th, 10th, PUC, Any Degree ಪಾಸ್, ಫೇಲ್ ಆದವರು. 20,000 ದಿಂದ 25,000. ಸಂಪರ್ಕಿಸಿ:
Mob: 8095133188

Glow Up Saloon
We are looking for ladies hairdressers & beautician. Mysore. Contact:
Mob: 6362035922

WANTED
AUTO CADD with Office Asst.,
Area: Kumarabeedu, Gaddige Main Road.
Call: 94480-59802

ಉಚಿತ ವೃದ್ಧಾಶ್ರಮ(ಚಾರಿಟೇಬಲ್ ಟ್ರಸ್ಟ್)
ನಿಮ್ಮ ವಯಸ್ಸಾದ ವೃದ್ಧರನ್ನು ಸುಸಜ್ಜಿತವಾದ ಜಾಗದಲ್ಲಿ ಇರಿಸಲು ನಮ್ಮನ್ನು ಇಂದೇ ಸಂಪರ್ಕಿಸಿ, ಸ್ಥಳ: ನಾಯ್ಡು ನಗರ, ಮೈಸೂರು,
9916905188

ಬೇಕಾಗಿದ್ದಾರೆ
ಫ್ಯಾಕ್ಟರಿ ಕೆಲಸಕ್ಕೆ ಹೆಲ್ಪರ್ ಆಗಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ಆಸಕ್ತಿ ಉಳ್ಳವರು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ, ಆಲನಹಳ್ಳಿ (ನಂದಿನಿ ಬಡಾವಣೆ) ಮೈಸೂರು
9900515650

100% ಉದ್ಯೋಗವಕಾಶ ವರ್ಕ್ ಫ್ರಂ ಹೋಂ
ಮನೆಯಿಂದಲೇ ಕೆಲಸ ವಿದ್ಯಾರ್ಥಿಗಳಿಗೆ, ಮಹಿಳೆಯರಿಗೆ ಹಾಗೂ ಪುರುಷರಿಗೆ ವಯಸ್ಸು 18 ರಿಂದ 65 ರವರೆಗೆ. ಆಫೀಸ್‌ಗಳಿಗೆ 4th, 7th, 10th, ITI, Any Degree Pass / Fail ಆದ ಯುವಕ, ಯುವತಿಯರಿಗೆ ಹಾಗೂ ESI, PF ನೊಂದಿಗೆ. ಇಂದೇ ಕರೆ ಮಾಡಿ. ಸಂಬಳ: 22,000 – 45000.
6362024878, 9019593297

Wanted Technicians
An industry located in Metagalli, Mysore, is looking for Technicains with following qualifications. * Qualification: ITI or Diploma in Electrical or Electronics * Gender: Male candidates only. * Age Limit: 18 to 35 years. For more details, contact:
Mob: 9901178588
Call between 10 am to 5 pm only.

ಶಾಲೆಗೆ ಆಯ/ ಹೆಲ್ಪರ್
ಶಾಲೆಯಲ್ಲಿ ಕಸಗುಡಿಸಲು ಮತ್ತು ಅಡುಗೆ ಕೆಲಸ ಹೆಲ್ಪರ್, 40 ವಯಸ್ಸು ಮೀರದ ಮಹಿಳೆ ಇಬ್ಬರು ಬೇಕಾಗಿದ್ದಾರೆ. ಸಂಬಳ 9000 ಬೆಳಿಗ್ಗೆ 9 ರಿಂದ ಸಂಜೆ. 5.30. ತಕ್ಷಣ ಆಧಾರ್ ಕಾರ್ಡ್ ಸಹಿತ ಬಂದು ವಿಚಾರಿಸಿ ಜ್ಞಾನ ಗಂಗೋತ್ರಿ ಕಾನ್ವೆಂಟ್ ರಾಜೇಂದ್ರ ನಗರ, ಮೈಸೂರು.
Mob: 9113980741

ಬೇಕಾಗಿದ್ದಾರೆ
ಅನುಭವವುಳ್ಳ ಅಕೌಂಟೆಂಟ್‌ಗಳು, ಟೈಲರ್, ಹೆಲ್ಪರ್‌ಗಳು (ಹುಡುಗರು, ಹುಡುಗಿಯರು) ಬೇಕಾಗಿದ್ದಾರೆ. ಸಂಪರ್ಕಿಸಿ:
8105248880, 7795285485

ತಿರುಪತಿ–ಕಾಳಹಸ್ತಿ ಪ್ಯಾಕೇಜ್
ಡಿಸೆಂಬರ್ 12ಕ್ಕೆ ಹೊರಡುವುದು, ಗೋ ಮೈಸೂರು ಹಾಲಿಡೇಸ್, ಕೆ.ಡಿ. ಸರ್ಕಲ್, ವಿಜಯನಗರ
Mob: 9448738617, 9731255916, 9036154301

ಉದ್ಯೋಗ ಅವಕಾಶ
ಕರ್ನಾಟಕದಾದ್ಯಂತ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ ಮತ್ತು ವೇರ್‌ಹೌಸ್ / ಬ್ಯಾಂಕ್ / ಆಫೀಸ್ ಕೆಲಸಗಳಿಗೆ 4th, SSLC, PUC, ITI, B.Com, B.Sc, BE, B.Tech, Any Degree ಪಾಸ್/ಫೇಲ್ ಆದ ಯುವಕ/ಯುವತಿಯರು ಹಾಗೂ ಚಾಲಕರು ಇಂದೇ ಬೇಕಾಗಿದ್ದಾರೆ. ESI, PF ನೊಂದಿಗೆ ಊಟ ವಸತಿಯಿರುತ್ತದೆ. ಸಂಬಳ+ಟಿಎ, 15200 – 86000
7406996362

ಕೇರ್ ಟೇಕರ್
ವಯಸ್ಸಾದವರನ್ನು ನೋಡಿಕೊಳ್ಳಲು ಅನುಭವ ಇರುವ ಇಲ್ಲದೆ ಇರುವ ಪುರುಷರು ಹಾಗೂ ಮಹಿಳೆಯರು ಬೇಕಾಗಿದ್ದಾರೆ. day/ night, 24 hrs ನಿಮ್ಮ ಹತ್ತಿರದಲ್ಲೇ ಕೆಲಸ ಲಭ್ಯ. ಹಿಂದಿ ಕನ್ನಡ ಮಾತನಾಡುವವರು ಸಂಪರ್ಕಿಸಿ
8951717070

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 7975101020

WANTED
30x40 Site, any face, near Vijayanagar 4th Stage, Mysore.
Mob: 8431050069
BROKERS EXCUSE

ಟೈಲರಿಂಗ್ ತರಬೇತಿ ಉಚಿತ / ಉಚಿತ
ವಿಳಾಸ: ಗಾನವಿ ಇಂಟರ್‌ನ್ಯಾಷನಲ್, ಉದಯಗಿರಿ
9620476665, 9620436665, 9620546665, 0821-2977765

Properties for Sale
@ Chamarajapuram, Vijayanagar 4th Stage, V.V. Mohalla.
Mob: 93421-25252



SUNZONE SOLAR SYSTEM
VM Double Road, Kuvempunagar, Mysuru
9845175443

ಬೇಕಾಗಿದ್ದಾರೆ
ಪೆಟ್ರೋಲ್ ಬಂಕ್‌ನಲ್ಲಿ ಹೆಲ್ಪರ್ ಮತ್ತು ಕ್ಯಾಷಿಯರ್ ಕೆಲಸ ಮಾಡಲು ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ ಸ್ಥಳ: ವಿಜಯನಗರ ವಾಟರ್ ಟ್ಯಾಂಕ್ ಹತ್ತಿರ, ಮೈಸೂರು ನಗರ
6364748485

ಬೇಕಾಗಿದ್ದಾರೆ
ಹುದ್ದೆ : 1) ಲೋಡರ್ & ಅನ್‌ಲೋಡರ್ 2) ಡ್ರೈವರ್ (ಗ್ರಾಸರಿ ಕಂಪನಿ) ಸ್ಥಳ : ಮೈಸೂರು, ಅರ್ಹತೆ : ಪುರುಷರು, ಆಕರ್ಷಕ ವೇತನ – ಅನುಭವನದ ಮೇಲೆ. 3) ಕೆಲಸಕ್ಕೆ ಒಂದು ಕುಟುಂಬ ಬೇಕಾಗಿದ್ದಾರೆ. ಸಂಪರ್ಕಿಸಿ
9845700612, 7829668666

FOR SALE
30x40 Sites Near RT Nagar BSNL Layout @ Just 22 Lakhs
20x30, 30x40 MUDA Approved Sites Near Rainbow School Bogadi
30x40|30x50 MUDA Sites KHB Attach, HD Kote Road. | 2 & 3 BHK Apartments @ Ramakrishna Ngr
Commercial Properties Also Available
PRAKRUTHI PROPERTIES
95386 90359, 90359 90359

FOR SALE
20x30 Old Houses @ Kuvempunagar, RK Nagar
40x120 Site@ 80 Feet Road in Dattagalli
20x30 New Duplex House @ Utthanahalli & Dattagalli
40x60@ JP Ngr, Shardha Lyt
20x30/30x45/35x60/40x60 Properties @ Srirampura
20x30 Properties @ VijayaNagar
PRAKRUTHI PROPERTIES
95386 90359, 90359 90359

Sri Chamundeshwari & Sri Karumariamma Temple Trust
Vidyaranyapuram Mysuru-570008
96069 18636
Wanted Immediately
Office Assistant - Male Only.
Age 40-60 Years
Qualification: PUC/Any Degree
Resume / Photo Xerox / Copy of Aadhar Card
(Drop your resume at temple office)

ಉದ್ಯೋಗ ಅವಕಾಶ
ಮೈಸೂರಿನಲ್ಲಿರುವ Pvt Limited A.W.G ಕಂಪನಿಗೆ Fresher + Experience ಆದ 229 ಕನ್ನಡಬಲ್ಲ ಅಭ್ಯರ್ಥಿಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ : SSLC - PUC, ITI, Dip any Degree ವಯೋಮಿತಿ : 18-32 years ತಿಂಗಳಿಗೆ : 21000 – 26000, (ಉಚಿತ ಊಟ+ ವಸತಿ+ಮೆಡಿಕಲ್ ಸೌಲಭ್ಯವಿದೆ) ಕೂಡಲೇ ಕರೆಮಾಡಿ
7090212014, 7349699460

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್ ಹಾಗೂ ಸೋಲಾರ್ ಸರ್ವೀಸ್
Mob: 9964733988

ಕೆಲಸಕ್ಕೆ ತಕ್ಷಣ ಬೇಕಾಗಿದ್ದಾರೆ
ಇಂಡಿಯನ್ ಆಯಿಲ್ ಪೆಟ್ರೋಲ್ ಬಂಕ್ ಸಯ್ಯಾಜಿರಾವ್ ರಸ್ತೆ, RMC ಹತ್ತಿರ, ಮೈಸೂರು ಮಾರ್ನಿಂಗ್ ಮತ್ತು ನೈಟ್ ಶಿಫ್ಟ್ ಪುರುಷ ಮತ್ತು ಮಹಿಳೆ, ವಯೋಮಿತಿ: 20 ರಿಂದ 40
9164777336, 9902179776
(ಮೈಸೂರು ಟೌನ್ ಅವರಿಗೆ ಮೊದಲ ಆದ್ಯತೆ)

ಬೇಕಾಗಿದ್ದಾರೆ
ಮೈಸೂರು ಜಿಲ್ಲೆಯಲ್ಲಿ ನೂತನವಾಗಿ ಪ್ರಾರಂಭವಾಗಿರುವ ಕಾರ್ ಶೋರೂಮ್ ಹಾಗೂ ಬೈಕ್ ಶೋರೂಮ್‌ಗಳಿಗೆ, CASHIER, RECEPTIONIST, HR, ADMIN, ACCOUNT, ಕೆಲಸಕ್ಕೆ, ತಕ್ಷಣ ಯುವಕ, ಯುವತಿಯರು ಬೇಕಾಗಿದ್ದಾರೆ, (18k -38k), SSLC, PUC, DEGREE
6366718368, 9739121355

ಬಂಡವಾಳ ಬೇಕಿದೆ
ದಿನನಿತ್ಯ ಆದಾಯ ಬರುವ ವ್ಯಾಪಾರಕ್ಕೆ ಬಂಡವಾಳ ಹಾಕುವರು ಬೇಕಾಗಿದ್ದಾರೆ. ಪ್ರತಿನಿತ್ಯ ಉತ್ತಮ ಆದಾಯವನ್ನು ನೀಡಲಾಗುವುದು.
8088063609, 8722582235

ಶ್ರೀ ಸಾಯಿ ಎಲೆಕ್ಟ್ರಾನಿಕ್ಸ್
LED ಟಿವಿ (24 inch, 32 inch ಮತ್ತು 43 inch), ವಾಷಿಂಗ್ ಮಷಿನ್, UPS, ವಾಟರ್ ಪ್ಯೂರಿಫೈಯರ್ ಮತ್ತು ಫ್ರಿಡ್ಜ್ ಸುಲಭ ವಾರದ ಕಂತುಗಳಲ್ಲಿ ನೀಡಲಾಗುವುದು. ಕಾರ್ ಬಾಡಿಗೆಗೆ ಬೇಕಾಗಿದೆ ಪೆಟ್ರೋಲ್ ಅಥವಾ ಡೀಸೆಲ್ ತಿಂಗಳಿಗೆ 10,000 ರೂ ನೀಡಲಾಗುವುದು.
Mob: 8660845940

ಬೇಕಾಗಿದ್ದಾರೆ
ನಮ್ಮ ಹೊಸ ನಾಟಿ ನಾನ್‌ವೆಜ್ ಸ್ಟೈಲ್. ಫುಡ್ ಟ್ರಕ್‌ಗೆ ಕೆಲಸದ ಖಾಲಿ ಹುದ್ದೆಗಳು ಇವೆ. ಶಿಫ್ಟ್ ವೇಳೆಗಳು: ಬೆಳಗ್ಗೆ: 11:00 AM - 3:30 PM. ಸಂಜೆ: 6:00 PM - 10:30 PM. ಸ್ತ್ರೀ ಹಾಗೂ ಪುರುಷರು (ವಯಸ್ಸು 20 ರಿಂದ 35 ವರ್ಷ) ಇಬ್ಬರೂ ಅರ್ಜಿ ಹಾಕಬಹುದು. ಉತ್ತಮ ವೇತನ ನೀಡಲಾಗುತ್ತದೆ. ಫುಡ್ ಟ್ರಕ್ ಓಡಿಸಲು ಡ್ರೈವರ್‌ಗಳು ಬೇಕಾಗಿದ್ದಾರೆ. ಆಸಕ್ತ ಅಭ್ಯರ್ಥಿಗಳು ದಯವಿಟ್ಟು ಸಂಪರ್ಕಿಸಿ:
Mob: 7019600596

ಬೇಕಾಗಿದ್ದಾರೆ
ಸ್ಟಿಕ್ಕರ್ ಪೇಸ್ಟ್ ಮಾಡಲು ಹುಡುಗಿಯರು ಬೇಕಾಗಿದ್ದಾರೆ
ಸಂಬಳ 13000-15000/-
Ph.7406 369 369

ಸದ್ಗುರು ಮ್ಯಾರೇಜಸ್
ಎಲ್ಲಾ ಜಾತಿಯ ವಧುವರರು ವಿಧುರರು ವಿಧವೆಯರು ವಿಚ್ಛೇದಿತರು ನೇರ ಸಂಪರ್ಕಿಸಿ, ಒಂದು ಫೋನಿನ ಕರೆ ನಿಮ್ಮ ಬದುಕನ್ನೇ ಬದಲಾಯಿಸಬಹುದು.
9448229184, 7899625268

ಕೆಲಸಕ್ಕೆ ತಕ್ಷಣ ಬೇಕಾಗಿದ್ದಾರೆ
ಟೀ ಅಂಗಡಿಯಲ್ಲಿ ಕೆಲಸ ಮಾಡಲು ಸಿಬ್ಬಂದಿ/ಕೆಲಸಗಾರರು ಬೇಕಾಗಿದ್ದಾರೆ.
Address: 555/T Kavitha bakery circle, Kavitha bakery building Paduvana road, T.K layout Kuvempu nagar, Mysore-570017
Owner name: Anand
Mobile : 9980101988

ಯುವಕರು ಬೇಕಾಗಿದ್ದಾರೆ
ಮೇಟಗಳ್ಳಿ ಕೈಗಾರಿಕಾ ಪ್ರದೇಶದಲ್ಲಿರುವ ಕಾರ್ಖಾನೆಗೆ ಯುವಕರು ಬೇಕಾಗಿದ್ದಾರೆ ವಯಸ್ಸು : 18 ರಿಂದ 30 ವರ್ಷ ವೇತನ : 15 ಸಾವಿರ ರೂಪಾಯಿಗಳು ವಿದ್ಯಾರ್ಹತೆ : 7ನೇ ತರಗತಿ ಯಿಂದ SSLC, PUC, ITI ವರೆಗೆ ಕೆಲಸದ ಸಮಯದಲ್ಲಿ ಊಟ ದೊರೆಯುತ್ತದೆ.
7760913433

ಬೇಕಾಗಿದ್ದಾರೆ
ಮೈಸೂರಿನ ಪ್ರಸಿದ್ಧ ಸಸ್ಯಾಹಾರಿ ಹೋಟೆಲ್‌ಗೆ ಅನುಭವವುಳ್ಳ ಸಿಬ್ಬಂದಿಗಳು ಬೇಕಾಗಿದ್ದಾರೆ.
1. ಕ್ಯಾಪ್ಟನ್, 2. Supervisor
ತಕ್ಷಣ ಸಂಪರ್ಕಿಸಿ
9591649450, 9148648485

ಜಮೀನು ಬಾಡಿಗೆಗೆ
3– ಎಕರೆ ಜಮೀನು ಶುಂಠಿ ಬೆಳೆ ಬೆಳೆಯಲು ಅಥವಾ ಬಾಳೆ ಬೆಳೆ ಬೆಳೆಯಲು ಬಾಡಿಗೆಗೆ ದೊರೆಯುತ್ತದೆ. ಈ ಜಮೀನು ಮೈಸೂರು To ಕೆ.ಆರ್.ಎಸ್ ರಸ್ತೆಯಲ್ಲಿರುತ್ತದೆ ಮತ್ತು ರಾಯಲ್ ಇನ್ ಹೋಟೆಲ್ ರಿಂಗ್ ರಸ್ತೆಯಿಂದ 6. K.M. ದೂರದಲ್ಲಿರುತ್ತದೆ. ಸಂಪರ್ಕಿಸಿ : ಪ್ರದೀಪ್ ಬಿ.ಎಸ್
9916157831

WANTED
Electrical Engineer
Qualification: Diploma / BE in Electrical Engineering (02 Male & 01 Female) (2 years+ experience in handling ESCOM GK,WS and Linkline works)
Civil Site Engineer
(01 Male & 01 Female) (Min 3-4yrs Exp.as Site Engineer) Contact:
6366366388/ 9620624999
Call between: 10AM to 5PM
Mail your C.V to: acpltd123@gmail.com

ತಕ್ಷಣ ಬೇಕಾಗಿದ್ದಾರೆ
ಕುವೆಂಪುನಗರ ಸರಸ್ವತಿಪುರಂ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ ವಿದ್ಯಾರ್ಹತೆ : SSLC ಮೇಲ್ಪಟ್ಟು, ವಯೋಮಿತಿ : 50 ವರ್ಷದೊಳಗೆ ಸಂಬಳ : 20,500/- (26 days) ಊಟ ತಿಂಡಿ ಸೌಲಭ್ಯವಿರುತ್ತದೆ.
9620777819, 9880727819

ತಕ್ಷಣ ಬೇಕಾಗಿದ್ದಾರೆ
ನಂಜನಗೂಡಿನ ಕಲ್ಲಹಳ್ಳಿ ಇಂಡಸ್ಟ್ರಿಯಲ್ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ ವಿದ್ಯಾರ್ಹತೆ : SSLC ಮೇಲ್ಪಟ್ಟು, ವಯೋಮಿತಿ : 50 ವರ್ಷದೊಳಗೆ ಸಂಬಳ : 16500/- (8 hours, 26 days) ESI, PF ಸೌಲಭ್ಯವಿರುತ್ತದೆ.
9620667819, 9880727819

Part Time / Full Time ಡ್ರೈವರ್ ಬೇಕಾಗಿದ್ದಾರೆ
ಡ್ರೈವಿಂಗ್ ಶಾಲೆಯಲ್ಲಿ ತರಬೇತಿ ನೀಡಲು ಡ್ರೈವರ್ ಬೇಕಾಗಿದ್ದಾರೆ. ಹೆಬ್ಬಾಳ್ ಸಮೀಪದಲ್ಲಿ ವಾಸಿಸುವವರು ಮಾತ್ರ ಸಂಪರ್ಕಿಸಿ
9880181918

ಸೈಟುಗಳು ಮಾರಾಟಕ್ಕಿವೆ
@ ಬೋಗಾದಿ ರಸ್ತೆ
* DTCP ಮತ್ತು RERA Approved ಮನೆ ನಿರ್ಮಾಣಕ್ಕೆ ಸಿದ್ಧವಾಗಿದೆ
Mob : 9740407921

TO-LET
Ground Floor, 2300 sft, Gaganachumbi Double Road, KuvempuNagar, Mysuru for Showroom, Super Market, Corporate offices, Clinics, etc. Contact:
8861484737

ಬೇಕಾಗಿದ್ದಾರೆ
ಮನೆಗೆ ಬಂದು ಕೆಲಸ ಮಾಡಲು ಪಾರ್ಟ್ ಟೈಂ ಡಿಟಿಪಿ ಆಪರೇಟರ್ ತುರ್ತಾಗಿ ಬೇಕಾಗಿದ್ದಾರೆ. ಪೇಜ್ ಮೇಕರ್, ಫೋಟೋಶಾಪ್ ಇತ್ಯಾದಿ ಗೊತ್ತಿದ್ದರೆ ಅನುಕೂಲ. ಬೆ. 6 ರಿಂದ ಮಧ್ಯಾಹ್ನ 12, ಸಂಜೆ 6 ರಿಂದ ರಾತ್ರಿ 9ರವರೆಗೆ ಕೆಲಸದ ಸಮಯ. ಆಸಕ್ತರು ಡಿ. 6ರಂದು ಬೆಳಿಗ್ಗೆ 10 ರಿಂದ 12 ಗಂಟೆಯೊಳಗೆ ಕೆಳಗಿನ ವಿಳಾಸಕ್ಕೆ ಸಂದರ್ಶನಕ್ಕೆ ಬರಬಹುದು. ವಿಳಾಸ : ಎನ್.ವಿ. ರಮೇಶ್, 2210, ಪಚ್ಚೆ ರಸ್ತೆ 4ನೇ ಕ್ರಾಸ್, ಕುವೆಂಪುನಗರ, ಕೆ. ಬ್ಲಾಕ್, ಮೈಸೂರು–23
9845565238

WANTED
ಫರ್ನಿಷಿಂಗ್ ಅಂಗಡಿಯಲ್ಲಿ ಅಕೌಂಟೆಂಟ್ ಕೆಲಸಕ್ಕೆ 1 Year Experience ಇರುವವರು ಬೇಕಾಗಿದ್ದಾರೆ
Near Ashoka Road
9916514950

ಬೇಕಾಗಿದ್ದಾರೆ
ಮೈಸೂರಿನ ಸುವ್ಯವಸ್ಥಿತ ಹೋಟೆಲ್‌ಗೆ– ಸೌತ್ ಅಸಿಸ್ಟೆಂಟ್ (Assistant for South Master) ಕ್ಲೀನಿಂಗ್ / ವಾಷಿಂಗ್, ಸಪ್ಲೈಯರ್ / ವೆಯಿಟರ್, ಕೌಂಟರ್– ಪ್ಯಾಕಿಂಗ್ (Counter) Helper for Conti, ಸಂಪರ್ಕಿಸಿ
8884066266

FOR RENT
1500 Sq ft Godown Space available for Rent in K.N. Agrahara Location: Behind Govt School & Gayatri Theater Bus Stop, Contact
9845129141

ಬೇಕಾಗಿದ್ದಾರೆ
ಕುವೆಂಪುನಗರದಲ್ಲಿರುವ ಪಾರ್ಸೆಲ್ ಹೋಟೆಲ್‌ಗೆ
ಚಪಾತಿ ಬೇಯಿಸುವವರು – 14000/–
ಹಿಟ್ಟು ಕಲಸುವವರು – 13100/–
ಕಿಚನ್ ಹೆಲ್ಪರ್ಸ್ – 12000/–
ಸಂಬಳದೊಂದಿಗೆ ಊಟ, ವಸತಿ ಉಚಿತ
7204404170

ಶ್ರೀಮೂರ್ತಿ ಟೂರಿಸ್ಟ್
24/12/25 ಬೆಳಿಗ್ಗೆ 4.30ಕ್ಕೆ ಹೊರಟು 1 ದಿನದಲ್ಲಿ "3 ಶ್ರೀರಂಗನಾಥ" (ಆದಿ, ಮಧ್ಯ, ಅಂತ್ಯರಂಗನ) ದರ್ಶನ, 25/12/25 ಬೆಳಿಗ್ಗೆ 11ಕ್ಕೆ ವಾಪಸ್ ಬರುವುದು. (24 ರಂದು ಬೆಳಗಿನ ತಿಂಡಿ, ಕಾಫೀ, 1 ಊಟ ಸೇರಿದೆ) K.S.R.T.C Ordinary Busನಲ್ಲಿ
9480733069
Tickets At your Door Step

ಉದ್ಯೋಗ ಅವಕಾಶಗಳು
1) ಸೆಕ್ಯೂರಿಟಿ ಗಾರ್ಡುಗಳು (ನಂಜುಮಳಿಗೆ, ಬಲ್ಲಾಳ್ ಸರ್ಕಲ್)
2) ಹೌಸ್ ಕೀಪಿಂಗ್ (ಹೆಂಗಸರು) (ಕುಂಬಾರ ಕೊಪ್ಪಲು, BM ಶ್ರೀ ನಗರ, ಮೇಟಗಳ್ಳಿ)
ಸುತ್ತ ಮುತ್ತ, ವಾರದ ರಜೆ, ESI, PF(8 hours)
Contact : 8217563349, 8867197599, 9148975329

ಕೇರಳ ಪ್ರವಾಸ (4 ದಿನಗಳು)
ದಿನಾಂಕ: 25/Dec/2025
ಅಲ್ಲಪಿ, ಕೋವಲಂ ಬೀಚ್, ಗುರುವಾಯೂರು, ಕೊಚ್ಚಿನ್ ಡಿ ಜೆ ಬೋಟ್, ಜಟಾಯು ಅರ್ಥ್ ಸೆಂಟರ್, ಅನಂತಪದ್ಮನಾಭ ದೇವಸ್ಥಾನ ಅತೀರಪಿಲ್ಲಿ ಜಲಪಾತ, ಎಲಿಫೆಂಟ್ ಕ್ಯಾಂಪ್. ಊಟ, ತಿಂಡಿ ಸೇರಿರುತ್ತದೆ. ಪ್ರತ್ಯೇಕ ರೂಮುಗಳು ಒಬ್ಬರಿಗೆ 9000/– ಮಾತ್ರ
7022271023

WANTED
A person of age 50-60 years even a Retired person is required for a shop in APMC yard, Bandipalya to Look after, Knowing English & Kannada to Write & Road Timings 10.30 Am to 6.30pm having a 2 Wheeler and to bring Lunch. Interested may Contact
9886363489

ಹೊಸ ಲೇಔಟ್ಸ್ ಆರಂಭವಾಗಿದೆ
- T.N ಪುರ ರಸ್ತೆ – ಸಪ್ತಮಾತೃಕ, ಪ್ರಶಾಂತ ಛಾಯ ಹೌಸಿಂಗ್ ಪ್ರಾಜೆಕ್ಟ್ ಪಕ್ಕ 14–25 ಲಕ್ಷ
- ಬನ್ನೂರು ರಸ್ತೆ – ಮಾನಸಿ ನಗರ ಹಿಂಭಾಗ ವಿದ್ಯಾವಿಕಾಸ್ ಕಾಲೇಜ್ ಎದುರು 25–40 ಲಕ್ಷ
- ಬೋಗಾದಿ ರಸ್ತೆ – ಹೊಸ ಕ್ರಿಕೆಟ್ ಸ್ಟೇಡಿಯಂ ಜಟ್ಟಿ ಹುಂಡಿ ಹಿಂಭಾಗ 29 ಲಕ್ಷ
- 30X50 ಮರಟಿಕ್ಯಾತನಹಳ್ಳಿ 42 ಲಕ್ಷ

Brokers Excuse
81230 75038

ಮೈಸೂರು ಮಿತ್ರ 46 ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಬಲಿಷ್ಠ ವೀರಶೈವ ಲಿಂಗಾಯತ ಸಮಾಜವನ್ನು ಒಡೆಯಲಾಗದು

ನವೀಕೃತ ಸಭಾಭವನ ಉದ್ಘಾಟನೆಯಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಪ್ರತಿಪಾದನೆ

ತಿ.ನರಸೀಪುರ, ಡಿ.3– ರಾಜ್ಯದಲ್ಲಿ ಬಲಿಷ್ಠವಾಗಿರುವ ವೀರಶೈವ ಲಿಂಗಾಯತ ಸಮಾಜವನ್ನು ಯಾವುದೇ ದುಷ್ಟ ಶಕ್ತಿಗಳು ಷಡ್ಯಂತ್ರ, ಕುತಂತ್ರದಿಂದ ಒಡೆಯಲು ಸಾಧ್ಯವಿಲ್ಲ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಪ್ರತಿಪಾದಿಸಿದ್ದಾರೆ.

ಪಟ್ಟಣದ ವಿವೇಕಾನಂದ ನಗರದಲ್ಲಿ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ವತಿಯಿಂದ ನವೀಕರಣಗೊಂಡಿರುವ ಸಭಾಭವನ ಉದ್ಘಾಟಿಸಿ ಎಪಿಎಂಸಿ ಆವರಣದಲ್ಲಿ ಆಯೋಜಿಸಲಾಗಿದ್ದ ವೇದಿಕೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ರಾಜ್ಯದಲ್ಲಿ ವೀರಶೈವ ಲಿಂಗಾಯತ ಸಮಾಜವನ್ನು ಒಡೆದಾಳುವ ನೀತಿ ಹಲವಾರು ವರ್ಷಗಳಿಂದಲೂ ಚಾಲನೆಯಲ್ಲಿರುವುದನ್ನು ಕಂಡಿದ್ದೇನೆ. ಯಾವ ಸಂದರ್ಭದಲ್ಲಿ ವೀರಶೈವ ಲಿಂಗಾಯತರಲ್ಲಿ ಒಡಕು ಉಂಟು ಮಾಡಿದರೆ, ರಾಜ್ಯದಲ್ಲಿ ಸಮಾಜವನ್ನು ಒಡೆದು ಹಾಕುವ ಪ್ರಯತ್ನ ಮಾಡಿದರೆ ತಮ್ಮ ರಾಜಕೀಯ ಬೇಳೆ ಬೇಯಿಸಿಕೊಳ್ಳಬಹುದು ಎಂಬ ಕುತಂತ್ರದಿಂದ ಕಾಣದ ಕೈಗಳು ಕುತಂತ್ರ, ಷಡ್ಯಂತ್ರದಿಂದ ಅನೇಕ ಬಾರಿ ಸಮಾಜದ ಮೇಲೆ ದಾಳಿ ಮಾಡಲು ಯತ್ನಿಸಿರುವುದನ್ನೂ ನಾವೆಲ್ಲರೂ ಕಂಡಿದ್ದೇವೆ, ಆದರೆ ಸಮಾಜ ಒಡೆಯುವ ದುಸ್ಸಾಹಸಕ್ಕೆ ಮುಂದಾಗಿರುವರಿಗೆ ಹೇಳಲು ಬಯಸುತ್ತೇನೆ ಎಂತದ್ದೇ ಷಡ್ಯಂತ್ರ ಕುತಂತ್ರ ನಡೆದರೂ ಸಹ ರಾಜ್ಯದ ಬಲಿಷ್ಠ ವೀರಶೈವ ಸಮಾಜವನ್ನು ಒಡೆಯಬೇಕೆಂಬ ಯಾವ ದುಷ್ಟ ಶಕ್ತಿಗಳ ಪ್ರಯತ್ನ ಯಶಸ್ವಿಯಾಗುವುದಿಲ್ಲ ಎಂದರು.

ಶಿಕ್ಷಣದೊಂದಿಗೆ ಸಂಸ್ಕಾರ ಬೇಕು

ಮಕ್ಕಳಿಗೆ ಶಿಕ್ಷಣ ಕೊಟ್ಟರೆ ಸಾಲದು, ಸಂಸ್ಕಾರವನ್ನು ಕೂಡ ಕೊಡಬೇಕು. ಇಂದಿನ ಸನ್ನಿವೇಶದಲ್ಲಿ ಇದು ಅತ್ಯಗತ್ಯ ಕೂಡ ಆಗಿದೆ. ರಾಜ್ಯದಲ್ಲಿ ಹಲವಾರು ಮಠಗಳು ಶಿಕ್ಷಣ ಕ್ರಾಂತಿಯನ್ನು ಮಾಡಿವೆ ಇಂಥ ಮಠಮಾನ್ಯಗಳಿಗೆ ಹಾಗೂ ಸಮುದಾಯದ ಸಂಘಟನೆಗೆ ಸಮುದಾಯದ ಮುಖಂಡರು ಶಕ್ತಿ ತುಂಬುವ ಕೆಲಸ ಮಾಡಬೇಕು.

– ವಿಜಯೇಂದ್ರ



ತಿ.ನರಸೀಪುರ ಪಟ್ಟಣದಲ್ಲಿಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ವತಿಯಿಂದ ನಿರ್ಮಿಸಲಾಗಿರುವ ನವೀಕೃತ ಸಭಾಭವನವನ್ನು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಉದ್ಘಾಟಿಸಿದರು.

ಚಿರತೆ ಸಮಸ್ಯೆಗೆ ಪರಿಹಾರ

ಟಿ.ನರಸೀಪುರ ತಾಲೂಕಿನಲ್ಲಿ ಚಿರತೆಯ ಸಮಸ್ಯೆ ಇದೆ. ಮಾನವ–ಚಿರತೆ ಸಂಘರ್ಷ ಹೆಚ್ಚಾಗಿರುವ ತಾಲೂಕುಗಳಲ್ಲಿ ಟಿ.ನರಸೀಪುರ ಕೂಡ ಒಂದಾಗಿದೆ. ಚಿರತೆ ವಸತಿ ಪ್ರದೇಶ ಅಥವಾ ಹೊಲ, ಗದ್ದೆಗಳ ಬಳಿ ಕಾಣಿಸಿಕೊಂಡಾಗ ಬೋನು ಇಟ್ಟು ತಕ್ಷಣ ಅದನ್ನು ಸೆರೆ ಹಿಡಿದು ರಕ್ಷಿಸಲು ಹೆಚ್ಚುವರಿ ಬೋನುಗಳ ಅಗತ್ಯವಿದ್ದು ಈ ಬಗ್ಗೆ ಕ್ರಮ ಕೈಗೊಳ್ಳಲಾಗುವುದು.

– ಈಶ್ವರ್ ಖಂಡ್ರೆ

ವೀರಶೈವ ಸಮಾಜಕ್ಕೆ ಸಾವಿರಾರು ವರ್ಷಗಳ ಇತಿಹಾಸವಿದೆ. ಪರಮಪೂಜ್ಯರು, ಜಗದ್ಗುರುಗಳು, ಸ್ವಾಮೀಜಿಗಳ ತಪಸ್ಸಿದೆ, ವಿವಿಧ ದಾಸೋಹದ ಮೂಲಕ ರಾಜ್ಯದಲ್ಲಿ ಅನ್ನದಾಸೋಹ, ಅಕ್ಷರ ಹಾಗೂ ಜ್ಞಾನ ದಾಸೋಹವನ್ನು ನಾಡಿಗೆ ಉಣಬಡಿಸುವ ಯಾವುದೇ ಸಮಾಜ ಇದೆಯೆಂದರೆ ಅದು ನಮ್ಮ ಹೆಮ್ಮೆಯ ವೀರಶೈವ ಸಮಾಜದ ಮಠ ಮಾನ್ಯಗಳು. ಪರಮ ಪೂಜ್ಯರು ಎನ್ನುವುದನ್ನು ಮರೆಯುವಂತಿಲ್ಲ, ಹಾಗಾಗಿ ವೀರಶೈವ ಸಮಾಜವನ್ನು ಯಾವುದೇ ಷಡ್ಯಂತ್ರಗಳ ಮೂಲಕ ಒಡೆಯಲು ಸಾಧ್ಯವಿಲ್ಲ, ನಾವೆಲ್ಲರೂ ಒಗ್ಗಟ್ಟಾಗಿದ್ದರೆ ಬಲಿಷ್ಠವಾಗಿರುತ್ತದೆ ಎಂದು ನುಡಿದರು.

ನಮ್ಮ ವೀರಶೈವ ಸಮಾಜ ಇತರೆ ಸಮಾಜಗಳಿಗೆ ನೆರಳು, ಆಶ್ರಯ ಕೊಟ್ಟಿದೆ, ಸುತ್ತೂರು, ಸಿದ್ದಗಂಗಮಠಗಳು ಶಿಕ್ಷಣ ಕ್ರಾಂತಿಯನ್ನೇ ಮಾಡಿ ಸಾವಿರಾರು ವಿದ್ಯಾರ್ಥಿಗಳಿಗೆ ಬದುಕು ಕಟ್ಟಿಕೊಡುವ ಕೆಲಸ ಮಾಡುತ್ತಿವೆ. ಮಠ ಮಾನ್ಯಗಳು ಕೇವಲ ವೀರಶೈವ ಲಿಂಗಾಯತ ಸಮಾಜಕ್ಕೆ ಸೀಮಿತವಾಗಿಲ್ಲ. ಆಶ್ರಯ ಹುಡುಕಿ ಬರುವವರ ಯಾವುದೇ ಧರ್ಮ, ಜಾತಿ, ಕುಲವನ್ನು ಪ್ರಶ್ನಿಸದೇ ಅವರಿಗೆ ಆಶ್ರಯ ದೊರಕಿಸಿಕೊಟ್ಟಿದೆ ಎಂದ ವಿಜಯೇಂದ್ರ ವೀರಶೈವ ಲಿಂಗಾಯತ ಸಮಾಜದಲ್ಲಿ ಬಡತನ ಇರಬಹುದು ಆದರೆ ಸ್ವಾಭಿಮಾನಕ್ಕೆ ಯಾವುದೇ ಕೊರತೆ ಇಲ್ಲ ಎಂದರು.

ಮುಖ್ಯಮಂತ್ರಿ ಆಗಿದ್ದ ಯಡಿಯೂರಪ್ಪನವರು ರಾಜ್ಯದಲ್ಲಿನ ಎಲ್ಲ ಮಠಗಳಿಗೂ ಆರ್ಥಿಕ ಶಕ್ತಿಯನ್ನು ತುಂಬುವ ಕೆಲಸ ಮಾಡಿದ್ದಾರೆ. ಹಾಗಾಗಿ ಅವರನ್ನು ನಾನು ಪ್ರತಿ ವೇದಿಕೆಯಲ್ಲಿ ನೆನೆಸಿಕೊಳ್ಳುತ್ತೇನೆ. ಸಮುದಾಯದಲ್ಲಿ ಜಾಗೃತಿ ಮೂಡಿಸುವ ಕೆಲಸವಾಗಬೇಕಾಗಿದೆ ನಮ್ಮ ಕುಟುಂಬವನ್ನು ರಕ್ಷಿಸುವಂತಹ ಕೆಲಸ ನಾವೇ ಮಾಡಬೇಕಿದೆ ಎಂದು ಅವರು ತಿಳಿಸಿದರು.

ರಾಜ್ಯ ಅರಣ್ಯ ಮತ್ತು ಪರಿಸರ ಖಾತೆ ಸಚಿವ ಬಿ.ಈಶ್ವರ ಖಂಡ್ರೆ ಮಾತನಾಡಿ, ಇಂದು ಕರ್ನಾಟಕ ಐಟಿ, ಬಿಟಿ ರಾಜ್ಯವಾಗಿ ಪ್ರಖ್ಯಾತಿ ಪಡೆಯುವುದರ ಹಿಂದೆ ವೀರಶೈವ ಲಿಂಗಾಯತ ಮಠಮಾನ್ಯಗಳ ಕೊಡುಗೆ ಅಪಾರವಾಗಿದೆ. ಎಲ್ಲ ಜಾತಿ, ಜನಾಂಗದವರಿಗೂ ಉಚಿತವಾಗಿ ಆಶ್ರಯ, ಅಕ್ಷರ ಮತ್ತು ಅನ್ನ ದಾಸೋಹದ ಮೂಲಕ ಶಿಕ್ಷಣ ನೀಡುವ ಮೂಲಕ ಜ್ಞಾನಾಧಾರಿತ ಸಮಾಜದ ನಿರ್ಮಾಣಕ್ಕೆ ನಮ್ಮ ಮಠಮಾನ್ಯಗಳು ಕೊಡುಗೆ ನೀಡಿವೆ ಎಂದು ವಿವರಿಸಿದರು.

ಸಮಾಜ ಕಲ್ಯಾಣ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಮಾತನಾಡಿ ಬಸವಣ್ಣನವರದ್ದು ಉದಾತ್ತವಾದ ವ್ಯಕ್ತಿತ್ವ, ಎನಗಿಂತ ಕಿರಿಯರಿಲ್ಲ ಎಂದು ಹೇಳುತ್ತಾರೆ. ಸಮುದಾಯವನ್ನು ಪ್ರತಿನಿಧಿಸುವ ಬುದ್ಧ, ಬಸವ, ಅಂಬೇಡ್ಕರ್ ಜನ ಸಮುದಾಯಗಳು ಒಟ್ಟಿಗೆ ಕುಳಿತು ಶಾಂತಿ ಸಂದೇಶವನ್ನು, ಸೋದರತ್ವ ಸಂಕೇತವನ್ನು ಸಾರುವ ಅನ್ಯ ಧರ್ಮೀಯರನ್ನು ಗೌರವಿಸುವಂತೆ ಸಂವಿಧಾನದ ಮೂಲಕ ಹೇಳಲಾಗಿದೆ. ಬಸವಣ್ಣನವರ ಸಮ ಸಮಾಜದ ಪರಿಕಲ್ಪನೆಯನ್ನು ನಾವೆಲ್ಲಾ ಅಭ್ಯಸಿಸಿ ಯುವ ಸಮಾಜವನ್ನು ಸೈದ್ಧಾಂತಿಕ ನೆಲೆಗಟ್ಟಿನ ಕೆಳಗಡೆ ನೈತಿಕತೆಯಿಂದ ಕೂಡಿರುವ ಯುವ ಶಕ್ತಿಯನ್ನು ಕಟ್ಟುವುದು ಇವತ್ತಿನ ಸಂಧರ್ಭದಲ್ಲಿ ಅನಿವಾರ್ಯ ಮತ್ತು ಅವಶ್ಯಕತೆಯಾಗಿದೆ. ಆ ಮೂಲಕ ಬಸವ ಕಂಡಂತಹ ಸುಖೀರಾಜ್ಯದ ಸ್ಥಾಪನೆ ಮಾಡುವಂತಹ ಕೆಲಸ ಮಾಡಬೇಕಿದೆ ಎಂದರು.

ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶೀಕೇಂದ್ರ ಮಹಾಸ್ವಾಮಿ, ಸಿದ್ದಗಂಗ ಮಠದ ಕಿರಿಯ ಶ್ರೀಗಳು, ವಾಟಾಳು ಮಠದ ಸಿದ್ದಲಿಂಗಶಿವಾಚಾರ್ಯ ಮಹಾಸ್ವಾಮಿಗಳು, ಸಾಲೂರು ಬೃಹನ್ಮಠದ ಶಾಂತ ಮಲ್ಲಿಕಾರ್ಜುನ ಸ್ವಾಮಿ, ಹಲವಾರ ಮುಡುಕನಪುರ ಮಠದ ಷಡಕ್ಷರ ದೇಶೀಕೇಂದ್ರ ಸ್ವಾಮಿ, ಮಾದ್ರಹಳ್ಳಿ ಪಟ್ಟದ ಶಾಂತ ಮಲ್ಲಿಕಾರ್ಜುನ ಸ್ವಾಮಿ ಆಶೀರ್ವಚನ ನೀಡಿದರು.

ವಿಧಾನಪರಿಷತ್ ಸದಸ್ಯ ಯತೀಂದ್ರ ಸಿದ್ದರಾಮಯ್ಯ, ಶಾಸಕ ಗಣೇಶ್‌ಪ್ರಸಾದ್, ಮೈಸೂರು ಜಿಲ್ಲಾ ಗ್ರಾಮಾಂತರ ಬಿಜೆಪಿ ಅಧ್ಯಕ್ಷ ಕುಂಬ್ರಹಳ್ಳಿ ಸುಬ್ಬಣ್ಣ, ಕೃಷ್ಣರಾಜ ಶಾಸಕ ಟಿ.ಎಸ್.ಶ್ರೀವತ್ಸ, ಮಾಜಿ ಶಾಸಕ ಎಂ.ಅಶ್ವಿನ್ ಕುಮಾರ್, ಸಿರಮೇಶ್, ತಾಲೂಕು ಅಧ್ಯಕ್ಷ ಪ್ರಕಾಶ್, ಕೊಶಾಧ್ಯಕ್ಷ ನಂಜುಂಡಸ್ವಾಮಿ, ಅಖಿಲ ಭಾರತ ವೀರಶೈವ ಯುವ ಘಟಕದ ಅಧ್ಯಕ್ಷ ಅಶೋಕ್, ಉಪಾಧ್ಯಕ್ಷ ಎಸ್.ಕೆ.ಕಿರಣ್, ಪ್ರಧಾನ ಕಾರ್ಯದರ್ಶಿ ಕುರುಬೂರು ಶಿವು, ತೊಂಟೇಶ್, ಮೂಗೂರು ಕುಮಾರ ಸ್ವಾಮಿ, ಪೂಜಿತ್ ಮೆಡಿಕಲ್ ಕುಮಾರ್, ಮಹಿಳಾ ಘಟಕದ ರೂಪ ಪರಮೇಶ್, ಅಂಬಿಕಾ ಲೋಕೇಶ್, ಸುಧಾ ರಮೇಶ್, ಜ್ಞಾನೇಶ್ವರಿ, ಮಾಜಿ ಜಿಪಂ ಸದಸ್ಯರಾದ ಸದಾನಂದ, ಗುರುಸ್ವಾಮಿ, ಜೆಡಿಎಸ್ ಕ್ಷೇತ್ರ ಅಧ್ಯಕ್ಷ ಚಿನ್ನಸ್ವಾಮಿ, ಗ್ರಾಪಂ ಮಾಜಿ ಅಧ್ಯಕ್ಷ ರಮೇಶ್, ಡಾ.ರೇವಣ್ಣ, ವಿದ್ಯೋದಯ ಶಿಕ್ಷಣ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಕೆ.ಪಿ.ಮಹದೇವಸ್ವಾಮಿ, ದಯಾನಂದ್ ಪಟೇಲ್, ಪರಮೇಶ್ ಪಟೇಲ್, ಪ್ರಧಾನ ಕಾರ್ಯದರ್ಶಿ ವಿನಯ್ ಕುಮಾರ್, ಫ್ರೆಂಡ್ಸ್ ವಿಜಯೇಂದ್ರ ಅಭಿಮಾನಿ ಬಳಗದ ಅಧ್ಯಕ್ಷ ಮಹೇಶ್, ಬೆನಕನಹಳ್ಳಿ ವಿಜಯ ಕುಮಾರ್, ಹೋಟೆಲ್ ರಾಜಣ್ಣ ಕುಮಾರ್, ಆಡಿಟರ್ ಮಂಜುನಾಥ್, ಪಿಎಸಿಸಿಎಸ್ ಅಧ್ಯಕ್ಷ ನಟರಾಜು, ಕಾವೇರಿಪುರ ಮಲ್ಲು, ನಿರ್ದೇಶಕ ನೆರೆಗ್ಯಾತನಹಳ್ಳಿ ಪುಟ್ಟಸ್ವಾಮಿ, ಅಡುಗೆ ಪ್ರಭು, ನವೀನ್, ನಿಲಸೋಗೆ ಮಹದೇವ್ ಪ್ರಸಾದ್, ಯೋಗೇಶ್, ಹಾಜರಿದ್ದರು.

ಮಾನವ-ಕಾಡು ಪ್ರಾಣಿಗಳ ಸಂಘರ್ಷ ತಪ್ಪಿಸಲು

ಹಗಲಿನಲ್ಲಿಯೇ ರೈತರಿಗೆ ಗುಣಮಟ್ಟದ ವಿದ್ಯುತ್ ಪೂರೈಕೆ

ನಂಜನಗೂಡು: ಮಾನವ ಮತ್ತು ಕಾಡು ಪ್ರಾಣಿಗಳ ಸಂಘರ್ಷಕ್ಕೆ ಶಾಶ್ವತ ಪರಿಹಾರ ಕಂಡುಕೊಳ್ಳಲು ಹಾಗೂ ರೈತರು ರಾತ್ರಿ ವೇಳೆ ಜಮೀನಿಗೆ ಹೋಗುವುದನ್ನು ತಪ್ಪಿಸಲು ಹಗಲಿನಲ್ಲೇ ಗುಣಮಟ್ಟದ ವಿದ್ಯುತ್ ಪೂರೈಸುವ ಸಲುವಾಗಿ ಖಾಸಗಿ ಸಂಸ್ಥೆಯ ಸಹಭಾಗಿತ್ವದ ಕುಸುಮ್ ಯೋಜನೆಯಡಿ ತಾಲೂಕಿನ ಮುದ್ದಹಳ್ಳಿ–ಸಿಂಧುವಳ್ಳಿ ಗ್ರಾಮದ ಬಳಿ 12 ಕೋಟಿ ವೆಚ್ಚದಲ್ಲಿ ಸೋಲಾರ್ ವಿದ್ಯುತ್ ಉತ್ಪಾದನಾ ಘಟಕಕ್ಕೆ ಚಾಲನೆ ನೀಡಲಾಗಿದೆ ಎಂದು ಶಾಸಕ ದರ್ಶನ್ ಧ್ರುವನಾರಾಯಣ ತಿಳಿಸಿದರು.



ಸೋಲಾರ್ ವಿದ್ಯುತ್ ಉತ್ಪಾದನೆಗೆ ಚಾಲನೆ ನೀಡಿದ ಶಾಸಕ ದರ್ಶನ್.

ತಾಲೂಕಿನ ಮುದ್ದಹಳ್ಳಿ ಗ್ರಾಮದ ಬಳಿಯಲ್ಲಿ 12 ಕೋಟಿ ವೆಚ್ಚದಲ್ಲಿ ಕುಸುಮ್ ಯೋಜನೆಯಡಿ ನಿರ್ಮಾಣವಾಗಲಿರುವ ಸೋಲಾರ್ ವಿದ್ಯುತ್ ಉತ್ಪಾದನಾ ಘಟಕಕ್ಕೆ ಗುದ್ದಲಿ ಪೂಜೆ ನೆರವೇರಿಸಿ ಅವರು ಮಾತನಾಡಿದರು. ಕಾಡಂಚಿನ ಪ್ರದೇಶದ ಗ್ರಾಮಗಳಲ್ಲಿ ವಿದ್ಯುತ್ ರಾತ್ರಿ ವೇಳೆ ಪೂರೈಸಿರುವುದರಿಂದ ರೈತರು ಜಮೀನಿಗೆ ನೀರು ಹಾಯಿಸುವ ಸಲುವಾಗಿ ರಾತ್ರಿ ವೇಳೆ ತೆರಳುತ್ತಿದ್ದರು, ಇದರಿಂದ ಆನೆ, ಚಿರತೆ, ಹುಲಿ ಸೇರಿದಂತೆ ಕಾಡು ಪ್ರಾಣಿಗಳಿಂದ ಹಾನಿಯಾಗುವ ಆತಂಕ ರೈತರಲ್ಲಿ ಆವರಿಸಿತ್ತು, ಆದ್ದರಿಂದ ಕಾಡಂಚಿನ ಪ್ರದೇಶಗಳಲ್ಲಿ ಹಗಲಿನ ವೇಳೆಯೇ ಗುಣಮಟ್ಟದ ವಿದ್ಯುತ್ ಪೂರೈಸುವ ಸಲುವಾಗಿ ಕುಸುಮ್ ಯೋಜನೆ ಅಡಿ ಆರ್.ಸಿ.ಸಿ.ಎಲ್ ಎಂಬ ಖಾಸಗಿ ಸಂಸ್ಥೆಯ ಸಹಭಾಗಿತ್ವದಲ್ಲಿ ತಾಲೂಕಿನ ರಾಜು ಗ್ರಾಮದಲ್ಲಿ 14 ಕೋಟಿ ವೆಚ್ಚದಲ್ಲಿ ಈಗಾಗಲೇ ಸೋಲಾರ್ ವಿದ್ಯುತ್ ಉತ್ಪಾದನಾ ಘಟಕವನ್ನು ಗುದ್ದಲಿ ಪೂಜೆ ನೆರವೇರಿಸಿ ಚಾಲನೆ ನೀಡಲಾಗಿದೆ. ಶೀಘ್ರದಲ್ಲೇ ಸೋಲಾರ್ ವಿದ್ಯುತ್ ಉತ್ಪಾದನೆಯಾಗಲಿದೆ ಎಂದರು.

ಚೆಸ್ಕಾಂ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ದೇವರಾಜಯ್ಯ ಮಾತನಾಡಿದರು. ಇದೇ ಸಂದರ್ಭದಲ್ಲಿ ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕುರಹಟ್ಟಿ ಕೆ.ಜಿ.ಮಹೇಶ್, ನವಿಲೂರು ಗ್ರಾಪಂ ಅಧ್ಯಕ್ಷ ಮಹದೇವಯ್ಯ, ಸಿಂದುವಳ್ಳಿ ಗ್ರಾಪಂ ಅಧ್ಯಕ್ಷ ಹೊಣಕಾರ ನಾಯಕ, ಚೆಸ್ಕಾ ಮುಖ್ಯ ಕಾರ್ಯಪಾಲಕ ಇಂಜಿನಿಯರ್ ಆನಂದ್, ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಕಿರಣ್ ಕುಮಾರ್, ದೇವರಾಜಯ್ಯ, ಆರ್‌ಸಿಸಿಎಲ್ ಸಂಸ್ಥೆಯ ಸಿಬ್ಬಂದಿಗಳು ಮತ್ತು ಚೆಸ್ಕಾಂ ಸಂಸ್ಥೆಯ ಸಿಬ್ಬಂದಿಗಳು ಉಪಸ್ಥಿತರಿದ್ದರು.

ಮುಳ್ಳೂರು–ಬಿರ್ವಾಳ್ ರಸ್ತೆ ಕಾಮಗಾರಿ ಆರಂಭ

ಮನವಿಗೆ ಸ್ಪಂದಿಸಿದ ಶಾಸಕ ಅನಿಲ್ ಚಿಕ್ಕಮಾದುಗೆ ಗ್ರಾಮಸ್ಥರ ಅಭಿನಂದನೆ

ಸರಗೂರು: ಹಲವಾರು ವರ್ಷಗಳಿಂದ ನೆನೆಗುದಿಗೆ ಬಿದ್ದಿದ್ದ ಮುಳ್ಳೂರು–ಬಿರ್ವಾಳ್ ರಸ್ತೆ ಕಾಮಗಾರಿ ಇಂದು ಮುಳ್ಳೂರು ಗ್ರಾಮದಲ್ಲಿ ಆರಂಭವಾಗಿದೆ.

ಹಲವಾರು ವರ್ಷಗಳಿಂದ ನೆನೆಗುದಿಗೆ ಬಿದ್ದಿದ್ದ ರಸ್ತೆ ಕಾಮಗಾರಿ ಕಾಣದೆ ಸಾರ್ವಜನಿಕರಿಗೆ ಇನ್ನಿಲ್ಲದ ತೊಂದರೆಯಾಗಿತ್ತು, ಮುಳ್ಳೂರು–ಬಿರ್ವಾಳ್ ಗ್ರಾಮಸ್ಥರು, ಮುಖಂಡರು, ರಸ್ತೆ ದುರಸ್ತಿ ಮಾಡಿಸಲು ತಾಲೂಕಿನ ಶಾಸಕರಾದ ಅನಿಲ್ ಚಿಕ್ಕಮಾದು ಅವರಲ್ಲಿ ಮನವಿ ಮಾಡಿದ್ದರು. ಈ ಹಿನ್ನೆಲೆಯಲ್ಲಿ ಕಾಮಗಾರಿಗೆ ಶಾಸಕ ಅನಿಲ್ ಚಿಕ್ಕಮಾದು ಭೂಮಿ ಪೂಜೆ ನೆರವೇರಿಸಿದ್ದರು, ಇಂದು ರಸ್ತೆ ಕಾಮಗಾರಿ ಪ್ರಾರಂಭಗೊಂಡಿದೆ. ಗುಣಮಟ್ಟದ ರಸ್ತೆ ನಿರ್ಮಿಸುವಂತೆ ಶಾಸಕರು ಗುತ್ತಿಗೆದಾರರಿಗೆ ತಿಳಿಸಿದ್ದಾರೆ.

ಮುಳ್ಳೂರು ಗ್ರಾಮವು ಹತ್ತಾರು ಗ್ರಾಮಗಳಿಗೆ ಹೃದಯ ಭಾಗವಾಗಿದ್ದು, ಜನಸಂಖ್ಯೆಯು ಹೆಚ್ಚಿದೆ. ಇಲ್ಲಿಂದ ನೂರಾರು ವಿದ್ಯಾರ್ಥಿಗಳು ನಂಜನಗೂಡು, ಸರಗೂರು, ಹೆಡಿಯಾಲಕ್ಕೆ ಹೋಗಿ ಬರಲು ಸರಿಯಾದ ರಸ್ತೆ ಇಲ್ಲದೆ ಬಹಳ ತೊಂದರೆಯಾಗಿತ್ತು, ಇದೀಗ ಶಾಸಕರು ರಸ್ತೆ ಅಭಿವೃದ್ಧಿಗೆ ಕಾಮಗಾರಿ ಪ್ರಾರಂಭಗೊಂಡಿರುವುದು ಇಲ್ಲಿನ ಗ್ರಾಮಸ್ಥರು ಸಂತಸ ವ್ಯಕ್ತಪಡಿಸಿದ್ದಾರೆ. ಶಾಸಕರಾದ ಅನಿಲ್ ಚಿಕ್ಕಮಾದು ಅವರಿಗೆ ಅಭಿನಂದನೆ ಸಲ್ಲಿಸಿದ್ದಾರೆ.



ಕೆ–ಸೆಟ್ ಪರೀಕ್ಷೆಯಲ್ಲಿ ನಂಜನಗೂಡಿನ ಕಾವ್ಯ ಸಾಧನೆ



ನಂಜನಗೂಡು: ನ.2 ರಂದು ನಡೆದ ಕೆ–ಸೆಟ್ ಪರೀಕ್ಷೆಯಲ್ಲಿ ನಂಜನಗೂಡಿನ ಸತೀಶ್ ಮತ್ತು ಹೇಮಲತಾ ದಂಪತಿಗಳ ಪುತ್ರಿ ಕಾವ್ಯ 170 ಅಂಕಗಳನ್ನು ಪಡೆಯುವ ಮೂಲಕ ಅದ್ವಿತೀಯ ಸಾಧನೆ ಮಾಡಿದ್ದಾರೆ. ಮೈಸೂರಿನ ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾನಿಲಯದಲ್ಲಿ ಎಂಎಸ್ಸಿ ಬಯೋಟೆಕ್ನಾಲಜಿ ಅಂತಿಮ ವರ್ಷದಲ್ಲಿ ವ್ಯಾಸಂಗ ಮಾಡುತ್ತಿರುವ ಕಾವ್ಯ ಮೊದಲ ಪ್ರಯತ್ನದಲ್ಲಿಯೇ ಯಾವುದೇ ತರಬೇತಿ ಇಲ್ಲದೆ ಜೀವ ವಿಜ್ಞಾನದಲ್ಲಿ ಕೆ–ಸೆಟ್ ಪರೀಕ್ಷೆಯಲ್ಲಿ ತೇರ್ಗಡೆಯಾಗಿರುವುದು ವಿಶೇಷವಾಗಿದ್ದು, ಕೆ–ಸೆಟ್ ಪರೀಕ್ಷೆಯಲ್ಲಿ ಸಾಧನೆ ಮಾಡುವ ಮೂಲಕ ಸಹಾಯಕ ಪ್ರಾಧ್ಯಾಪಕರಿಗೆ ಅರ್ಹರಾಗಿದ್ದಾರೆ.

ಹಿರಿಯ ಪತ್ರಕರ್ತ ಕೆಟಿಆರ್‌ಗೆ ಶ್ರದ್ಧಾಂಜಲಿ



ಹಿರಿಯ ಪತ್ರಕರ್ತ ಕೆ.ಟಿ.ರಮೇಶ್ ಶ್ರದ್ಧಾಂಜಲಿ ಸಭೆಯಲ್ಲಿ ಅವರ ಭಾವಚಿತ್ರಕ್ಕೆ ಸಂಘದ ಅಧ್ಯಕ್ಷ ಮತ್ತು ಸದಸ್ಯರು ಪುಷ್ಪಾರ್ಚನೆ ನೆರವೇರಿಸಿದರು.

ಕೆ.ಆರ್.ನಗರ: ಎಂಬತ್ತರ ದಶಕದಿಂದ ಪತ್ರಕರ್ತರಾಗಿ ಪಟ್ಟಣದ ಅಭಿವೃದ್ಧಿಗೆ ಶ್ರಮಿಸುವ ಮೂಲಕ ಚಿರಪರಿಚಿತರಾದವರು ಹಿರಿಯ ಪತ್ರಕರ್ತ ದಿವಂಗತ ಕೆ.ಟಿ.ರಮೇಶ್ ಅವರ ಅಗಲಿಕೆ ಪತ್ರಿಕೋದ್ಯಮಕ್ಕೆ ತುಂಬಲಾರದ ನಷ್ಟವಾಗಿದೆ ಎಂದು ತಾಲೂಕು ಪತ್ರಕರ್ತರ ಸಂಘದ ಅಧ್ಯಕ್ಷ ವಿನಯ್ ದೊಡ್ಡಕೊಪ್ಪಲು ಹೇಳಿದರು.

ಪಟ್ಟಣದ ಪತ್ರಕರ್ತರ ಭವನದಲ್ಲಿ ತಾಲೂಕು ಪತ್ರಕರ್ತರ ಸಂಘದಿಂದ ಹಮ್ಮಿಕೊಂಡಿದ್ದ ಕೆ.ಟಿ.ರಮೇಶ್ ಶ್ರದ್ಧಾಂಜಲಿ ಸಭೆಯಲ್ಲಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಅವರುಮಾತನಾಡಿದರು.

ದಿವಂಗತ ಕೆ.ಟಿ.ರಮೇಶ್ ಅವರು ಎಂಬತ್ತರ ದಶಕದಿಂದ 'ಮೈಸೂರು ಮಿತ್ರ' ವರದಿಗಾರರಾಗಿ ಹಾಗೂ ತಾಲೂಕು ಪತ್ರಕರ್ತ ಸಂಘದ ಅಧ್ಯಕ್ಷರಾಗಿ, ಪಟ್ಟಣದ ವರ್ತಕರ ಸಂಘದ ಅಧ್ಯಕ್ಷರಾಗಿ, ಕಾಲೇಜು ಸಮಿತಿಯ ಸಿಡಿಸಿ ಅಧ್ಯಕ್ಷರಾಗಿ ಕೂಡ ಸೇವೆ ಸಲ್ಲಿಸಿದ್ದರಲ್ಲದೆ ಪಟ್ಟಣದ ಅಭಿವೃದ್ಧಿಗೆ ಸ್ಥಳೀಯ ಶಾಸಕರು, ಪುರಸಭಾ ಸದಸ್ಯರು, ಚುನಾಯಿತ ಪ್ರತಿನಿಧಿಗಳ ಜೊತೆ ಕೈ ಜೋಡಿಸಿದ್ದರು ಎಂದು ಬಣ್ಣಿಸಿದರು.

ಹುಟ್ಟು ಸಾವಿನ ನಡುವೆ ಒಬ್ಬ ವ್ಯಕ್ತಿ ಸಮಾಜದಲ್ಲಿ ಬದುಕಿದ ರೀತಿ ಗಳಿಸಿದ ಪ್ರೀತಿ ಮಾತ್ರ ಶಾಶ್ವತ. ಪ್ರತಿಭಾವಂತ ಪತ್ರಕರ್ತನನ್ನು ನಾವು ಕಳೆದುಕೊಂಡಿದ್ದೇವೆ. ಎಲ್ಲರನ್ನು ಪ್ರೀತಿಸುವ ಆಕರ್ಷಿಸುವ ವ್ಯಕ್ತಿತ್ವ ದಿವಂಗತ ಕೆ.ಟಿ.ರಮೇಶ್ ಅವರದಾಗಿತ್ತು ಎಂದರು. ಬಳಿಕ ಸಂಘದ ಸದಸ್ಯರು ಒಂದು ಮೌನಾಚರಣೆ ಮೂಲಕ ಶ್ರದ್ಧಾಂ ಜಲಿ ಅರ್ಪಿಸಲಾಯಿತು.

ಸಂಘದ ಪ್ರಧಾನ ಕಾರ್ಯದರ್ಶಿ ಭೇರ್ಯ ಮಹೇಶ್, ಹಿರಿಯ ಪತ್ರಕರ್ತ ರಾಮಕೃಷ್ಣೇಗೌಡ, ಪತ್ರಕರ್ತರಾದ ನಾಗೇಶ್, ಎಂ.ಎಸ್.ರವಿಕುಮಾರ್, ಪಂಡಿತ್ ನಾಟಿಕರ್, ಶಿಲ್ಪ ಶ್ರೀನಿವಾಸ್ ಇದ್ದರು.

ಅಭಿವೃದ್ಧಿ ಕಾಮಗಾರಿಗಳಿಗೆ 200 ಕೋಟಿ ರೂ. ಬಿಡುಗಡೆ

ತಿ.ನರಸೀಪುರ, ಡಿ.3– ತಿ.ನರಸೀಪುರ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ 200 ಕೋಟಿ ರೂ.ಗಳ ಅನುದಾನ ಬಿಡುಗಡೆಯಾಗಿದ್ದು ಹಂತ ಹಂತವಾಗಿ ಅಭಿವೃದ್ಧಿ ಕಾಮಗಾರಿ ನಡೆಯಲಿದೆ ಎಂದು ಸಮಾಜ ಕಲ್ಯಾಣ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಹೇಳಿದರು.

ತಿ.ನರಸೀಪುರ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯ ಟಿ.ದೊಡ್ಡಪುರ ಗ್ರಾಮದ ಸಾಮಾನ್ಯ ವರ್ಗದ ಬೀದಿ ಹಾಗೂ ಪ.ಜಾತಿ ಬೀದಿಯಲ್ಲಿ ಮುಖ್ಯಮಂತ್ರಿಗಳ ವಿಶೇಷ ಮಂಜೂರಾತಿ ಯೋಜನೆಯಡಿ 70 ಲಕ್ಷ ರೂ.ಗಳ ವೆಚ್ಚದಲ್ಲಿ ಅಭಿವೃದ್ಧಿ ಪಡಿಸಲಾಗುವ ರಸ್ತೆ ಮತ್ತು ಚರಂಡಿ ಅಭಿವೃದ್ಧಿ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಅವರು ಮಾತನಾಡಿದರು.

ಕ್ಷೇತ್ರದಲ್ಲಿ ಪ್ರಸಕ್ತ ಅವಧಿಯಲ್ಲಿ ನಿರೀಕ್ಷೆಗೂ ಮೀರಿದ ಅಭಿವೃದ್ಧಿ ಕೆಲಸಗಳು ಆಗಿದ್ದು, ಕ್ಷೇತ್ರದ ಸಮಗ್ರ ಅಭಿವೃದ್ಧಿಯತ್ತ ಮುಂದಡಿ ಇಟ್ಟಿರುವುದಾಗಿ ಅವರು ತಿಳಿಸಿದರು.

ಪ್ರಸಕ್ತ ವಿಧಾನ ಸಭಾ ಕ್ಷೇತ್ರದ ವಿವಿಧ ಗ್ರಾಮಗಳಲ್ಲಿ ರಸ್ತೆ ಮತ್ತು ಚರಂಡಿ ಅಭಿವೃದ್ಧಿ ಕಾಮಗಾರಿಗಾಗಿ 200 ಕೋಟಿಯಷ್ಟು ಅನುದಾನ ಬಿಡುಗಡೆ ಮಾಡಲಾಗಿದೆ.ಪ.ಜಾತಿ,ಪ.ವರ್ಗ ಹಾಗು ಸಾಮಾನ್ಯ ವರ್ಗದ ಜನರು ವಾಸಿಸುವ ಗ್ರಾಮೀಣ ಪ್ರದೇಶದ ಅಭಿವೃದ್ಧಿಗೆ ಹೆಚ್ಚಿನ ಒತ್ತು ನೀಡಿ ಕಾಮಗಾರಿ ಮಾಡಿ ಅನುಕೂಲ ಕಲ್ಪಿಸಿಕೊಡಲಾಗುತ್ತದೆ.

ಕ್ಷೇತ್ರದ ಜನತೆ ಕಳೆದ 40 ವರ್ಷಗಳಿಂದ ನನಗೆ ಆಶೀರ್ವಾದ ಮಾಡುವ ಮೂಲಕ ರಾಜಕೀಯ ಜೀವನ ನೀಡಿದ್ದೀರಾ, ನೀವು ಆಯ್ಕೆ ಮಾಡಿದಾಗಲೆಲ್ಲಾ ಸರ್ಕಾರ ಅಧಿಕಾರಕ್ಕೆ ಬಂದು ನಾನು ಸಚಿವನಾಗಿ ಆಯ್ಕೆಯಾಗುತ್ತಾ ಬಂದಿದ್ದೇನೆ. ಪ್ರತಿ ಬಾರಿಯು ನನ್ನ ಮೇಲೆ ವಿಶ್ವಾಸವಿರಿಸಿ ನನ್ನನ್ನು ಆಯ್ಕೆ ಮಾಡಿದ ನಿಮ್ಮ ಋಣವನ್ನು ಕ್ಷೇತ್ರದಲ್ಲಿ ಅಭಿವೃದ್ಧಿ ಕಾಮಗಾರಿ ಮೂಲಕ ತೀರಿಸುತ್ತೇನೆ. ಹಾಗಾಗಿ ಕ್ಷೇತ್ರದ ಜನತೆಯ ಸಹಕಾರ ನಾನೆಂದಿಗೂ ಮರೆಯುವುದಿಲ್ಲ. ನನ್ನಂತೆಯೇ ನನ್ನ ಮಗನಿಗೂ ರಾಜಕೀಯದಲ್ಲಿ ನೆಲೆ ಕಲ್ಪಿಸಿಕೊಡಲು ಕ್ಷೇತ್ರದ ಜನರು ಸಹಕಾರ ನೀಡಿದ್ದೀರಾ ನಿಮ್ಮ ಪ್ರೀತಿ ವಿಶ್ವಾಸಕ್ಕೆ ನಾವಿಬ್ಬರೂ ಆಭಾರಿಯಾಗಿದ್ದು, ಮುಂದೆ ನಾನು ಮತ್ತು ಸುನೀಲ್ ಬೋಸ್ ಇಬ್ಬರೂ ಸೇರಿ ಕ್ಷೇತ್ರಕ್ಕೆ ಮತ್ತಷ್ಟು ಅಭಿವೃದ್ಧಿಯ ಕೊಡುಗೆ ನೀಡಲಿದ್ದೇವೆ ಮುಂದೆಯೂ ಇದೇ ರೀತಿಯ ಸಹಕಾರವನ್ನು ಕ್ಷೇತ್ರದ ಜನತೆಯಿಂದ ಬಯಸುತ್ತೇವೆ ಎಂದರು.



ಅಭಿವೃದ್ಧಿ ಕಾಮಗಾರಿಗಳಿಗೆ ಸಮಾಜ ಕಲ್ಯಾಣ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಭೂಮಿಪೂಜೆ ನೆರವೇರಿಸಿದರು

ಇದೇ ವೇಳೆ ಸಚಿವರು ಟಿ.ದೊಡ್ಡಪುರ ಗ್ರಾಮದಲ್ಲಿ 70 ಲಕ್ಷ, ಜಯಪುರ 20ಲಕ್ಷ, ಕಲಿಯೂರು 35 ಲಕ್ಷ, ಹೊಸಕುಕ್ಕೂರು 20 ಲಕ್ಷ,ವಿಜಾಪುರ 10 ಲಕ್ಷ ಹಾಗು ಬಣವೆ ಗ್ರಾಮದಲ್ಲಿ 20 ಲಕ್ಷ ರೂ.ಗಳ ವೆಚ್ಚದಲ್ಲಿ ಅಭಿವೃದ್ಧಿ ಪಡಿಸಲಾಗುವ ರಸ್ತೆ ಮತ್ತು ಚರಂಡಿ ಅಭಿವೃದ್ಧಿ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿದರು.

ಈ ವೇಳೆ ಕಾಂಗ್ರೆಸ್ ಕಾರ್ಮಿಕ ವಿಭಾಗದ ತಾಲೂಕು ಅಧ್ಯಕ್ಷ ಪರಶಿವಮೂರ್ತಿ, ಜಿಲ್ಲಾ ಕಾರ್ಯದರ್ಶಿ ನಂಜಯ್ಯ, ಪುಟ್ಟಸ್ವಾಮಿ, ಸದಸ್ಯ ಜಯ ಬಸವಣ್ಣ, ಮುಖಂಡರಾದ ಮಂಚಯ್ಯ, ಬಿ.ಮಹದೇವಸ್ವಾಮಿ, ಡಿಎಸ್‌ಎಸ್ ಮುಖಂಡ ಉಮೇಶ್ ಮತ್ತಿತರರಿದ್ದರು.

ಬೆಟ್ಟದಪುರದ ದೇವರಾಜ ಅರಸು ಹಿಂದುಳಿದ ವಿದ್ಯಾರ್ಥಿ ನಿಲಯಕ್ಕೆ ಅಧಿಕಾರಿಗಳ ದಿಢೀರ್ ಭೇಟಿ



ಬೆಟ್ಟದಪುರ: ಪಿರಿಯಾಪಟ್ಟಣ ತಾಲೂಕಿನ ಬೆಟ್ಟದಪುರ ಗ್ರಾಮದ ಡಿ ದೇವರಾಜ ಅರಸು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯಕ್ಕೆ ಸೋಮವಾರ ರಾತ್ರಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ರಾಘವೇಂದ್ರ ಅವರು ದಿಢೀರನೆ ಭೇಟಿ ನೀಡಿ ಪರಿಶೀಲಿಸಿದರು.

ಹಾಸ್ಟೆಲಿನ ಮೂಲಭೂತ ಸೌಕರ್ಯಗಳ ಬಗ್ಗೆ ಪರಿಶೀಲನೆ ನಡೆಸಿದರು. ಆಹಾರದ ಉಗ್ರಾಣ ಕೊಠಡಿಯನ್ನು ಪರಿಶೀಲನೆ ನಡೆಸಿದರು. ವಿದ್ಯಾರ್ಥಿಗಳಿಗೆ ನೀಡುವ ಸಂಕೀರ್ಣ ವಸ್ತುಗಳು, ಸರ್ಕಾರದಿಂದ ಸಿಗುವ ಲೇಖನಿ ಸಾಮಗ್ರಿಗಳು, ತಟ್ಟೆ ಲೋಟಗಳು, ಮೆನು ಚಾರ್ಟ್ ಪ್ರಕಾರ ವಿದ್ಯಾರ್ಥಿಗಳಿಗೆ ಆಹಾರ, ತಿಂಡಿಗಳನ್ನು ನೀಡಲಾಗುತ್ತಿದೆಯೇ ಎಂದು ವಿದ್ಯಾರ್ಥಿಗಳನ್ನು ಕೇಳಿ ಖಾತ್ರಿಪಡಿಸಿಕೊಂಡರು. ವಿದ್ಯಾರ್ಥಿಗಳು ಮಲಗುವ ಕೊಠಡಿಯಲ್ಲಿ ಸೊಳ್ಳೆಗಳು ಒಳಗೆ ಪ್ರವೇಶಿಸದಂತೆ ಸೊಳ್ಳೆ ಪರದೆ ಹಾಕಿರುವುದನ್ನು ಪರಿಶೀಲನೆ ನಡೆಸಿದರು.

ವಿದ್ಯಾರ್ಥಿಗಳ ಕಲಿಕಾ ಗುಣ ಮಟ್ಟವನ್ನು ಪರೀಕ್ಷಿಸಿ, ನಂತರ ನಿಲಯ ಮೇಲ್ವಿಚಾರಕ ಕೃಷ್ಣಪ್ಪರವರಿಗೆ ವಿದ್ಯಾರ್ಥಿಗಳ ಕಲಿಕೆಯಲ್ಲಿ ಇನ್ನೂ ಸುಧಾರಣೆಯಾಗಬೇಕು. ವಿಜ್ಞಾನ, ಗಣಿತ ಮತ್ತು ಆಂಗ್ಲ ವಿಷಯಗಳಿಗೆ ಶಿಕ್ಷಕರಿಂದ ಬೋಧನೆ ಮಾಡಿಸುವಂತೆ ತಿಳಿಸಿದರು. ಹಾಸ್ಟೆಲ್ ವಿದ್ಯಾರ್ಥಿಗಳಿಗೆ ಯಾವುದೇ ತೊಂದರೆಯಾಗದಂತೆ ನೋಡಿಕೊಳ್ಳುವಂತೆ ಕಟ್ಟುನಿಟ್ಟಾಗಿ ಸೂಚನೆ ನೀಡಿದರು. ಈ ಸಂದರ್ಭದಲ್ಲಿ ತಾಲೂಕು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಕಲ್ಯಾಣಾಧಿಕಾರಿ ಕೃಷ್ಣೇಗೌಡ, ಹಾಸ್ಟೆಲ್ ಸಿಬ್ಬಂದಿಗಳು ಹಾಜರಿದ್ದರು.


ಇಂದು ಹುಣಸೂರಲ್ಲಿ ಅದ್ದೂರಿ ಹನುಮಂತೋತ್ಸವ ಮೆರವಣಿಗೆ

ಸಾರ್ವಜನಿಕರಿಗೆ ಅಭಯ ನೀಡಿದ ಪೊಲೀಸರ ಪಥ ಸಂಚಲನ

ಹುಣಸೂರು, ಡಿ.3– ಹುಣಸೂರಿನ ಹನುಮಂತೋತ್ಸವ ಸಮಿತಿ ಮತ್ತು ಅಂಜನಾದ್ರಿ ಚಾರಿಟಬಲ್ ಟ್ರಸ್ಟ್ ಸಹಯೋಗದಲ್ಲಿ ನಾಳೆ (ಡಿ.4) ಅದ್ದೂರಿ ಹನುಮಂತೋತ್ಸವ ಮೆರವಣಿಗೆ ನಡೆಯಲಿದ್ದು ಸುಮಾರು ಹತ್ತರಿಂದ ಹದಿನೈದು ಸಾವಿರ ಹನುಮ ಭಕ್ತರು ಭಾಗವಹಿಸುವ ನಿರೀಕ್ಷೆ ಇರುವುದರಿಂದ ಪಟ್ಟಣದಲ್ಲಿ ಪೊಲೀಸರು ಪಥ ಸಂಚಲನ ನಡೆಸುವ ಮೂಲಕ ಸಾರ್ವಜನಿಕರಿಗೆ ನಿಮ್ಮೊಂದಿಗೆ ನಾವಿದ್ದೇವೆ ಎಂದು ಅಭಯ ನೀಡಿದರು.

ಇಂದು ಬೆಳಿಗ್ಗೆ ನಗರದ ಪ್ರಮುಖ ರಸ್ತೆಗಳಲ್ಲಿ ಮತ್ತು ಹನುಮಂತೋತ್ಸವ ಮೆರವಣಿಗೆ ಸಾಗುವ ಮಾರ್ಗದ ರಸ್ತೆಗಳಲ್ಲಿ ಪೊಲೀಸರು ಪಥ ಸಂಚಲನ ನಡೆಸಿ ಗಮನ ಸೆಳೆದರು.

ಹನುಮಂತೋತ್ಸವ ಮೆರವಣಿಗೆಯ ಬಂದೋ ಬಸ್ತ್‌ಗಾಗಿ ಹಾಸನ, ಚಾಮರಾಜನಗರ, ಮಂಡ್ಯ ಹಾಗೂ ಕೊಡಗು ಸೇರಿದಂತೆ ನಾಲ್ಕು ಜಿಲ್ಲೆಗಳಿಂದ ಸಾವಿರಾರು ಪೊಲೀಸರನ್ನು ನಿಯೋಜಿಸಲಾಗಿದ್ದು ಹಿರಿಯ ಅಧಿಕಾರಿಗಳ ಸೂಚನೆಯಂತೆ ಆಯಕಟ್ಟಿನ ಸ್ಥಳದಲ್ಲಿ ಬೀಡುಬಿಟ್ಟಿದ್ದಾರೆ.



ಹನುಮಂತ ಜಯಂತೋತ್ಸವ ಅಂಗವಾಗಿ ಹುಣಸೂರಿನಲ್ಲಿ ಪೊಲೀಸರು ಪಥ ಸಂಚಲನ ನಡೆಸಿದರು.

ಗುರುವಾರ ನಡೆಯಲಿರುವ ಹನುಮಂತೋತ್ಸವ ಮೆರವಣಿಗೆಯ ಬಂದೋಬಸ್ತ್‌ಗಾಗಿ ಒಬ್ಬರು ಎಸ್ಪಿ, ಮೂವರು ಜನ ಎಎಸ್‌ಪಿ, 6 ಮಂದಿ ಡಿವೈಎಸ್‌ಪಿ, 22 ಮಂದಿ ಸಿಪಿಐಗಳು, 71 ಪಿಎಸ್‌ಐಗಳು, 735 ಮುಖ್ಯ ಪೇದೆ ಮತ್ತು ಪಿಸಿಗಳು ಹಾಗು 200 ಮಹಿಳಾ ಪೊಲೀಸರು, 250 ಗೃಹ ರಕ್ಷಕ ದಳ, ಡಿಅರ್ 6 ತುಕಡಿ, ಕೆಎಸ್‌ಅರ್‌ಪಿ 8 ತುಕಡಿ, 5 ಡ್ರೋಣ್ ಕ್ಯಾಮರಗಳು ಕಾರ್ಯ ನಿರ್ವಹಿಸಲಿವೆ.

ಅಲ್ಲದೆ ನಗರಕ್ಕೆ ಹೊರಗಿನವರು ಪ್ರವೇಸಿಸಬಹುದೆಂದು ನಗರದ ಹೊರವಲಯಗಳಾದ ಹಾಳಗೆರೆ, ಚಿಕ್ಕ ಹುಣಸೂರು, ರತ್ನಪುರಿ ಸರ್ಕಲ್, ಎಪಿಎಂಸಿ, ಶಬ್ಬಿರ್‌ನಗರ, ಕೆ.ಅರ್.ನಗರ ರಸ್ತೆಯ ಶನಿದೇವರ ದೇವಸ್ಥಾನ ಸರ್ಕಲ್ ಸೇರಿದಂತೆ ಆರು ಕಡೆಗಳಲ್ಲಿ ಚೆಕ್‌ಪೋಸ್ಟ್ ನಿರ್ಮಿಸಿ ಹೊರಗಿನಿಂದ ಬರುವವರ ತಪಾಸಣೆ ಮತ್ತು ವಿಡಿಯೊ ಚಿತ್ರಿಕರಣ ಮಾಡುವ ವ್ಯೆವಸ್ಥೆ ಮಾಡಲಾಗಿದೆ

ಹನುಮಂತೋತ್ಸವ ಮೆರವಣಿಗೆಯು ನಗರದ ರಂಗನಾಥ ಬಡಾವಣೆಯಿಂದ ಬೆಳಿಗ್ಗೆ 11 ಗಂಟೆಗೆ ಹೊರಡಲಿದ್ದು ಮೆರವಣಿಗೆಗೆ ಸಂಸದ ಯದುವೀರ್ ಒಡೆಯರ್, ಶಾಸಕ ಜಿ.ಡಿ.ಹರೀಶ್‌ಗೌಡ, ಎಂಎಲ್ಸಿ ಹೆಚ್.ವಿಶ್ವನಾಥ್, ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್, ಮಾಜಿ ಸಂಸದ ಪ್ರತಾಪ್ ಸಿಂಹ ಹಾಗೂ ವಿವಿಧ ಗಣ್ಯರು ಚಾಲನೆ ನೀಡಲಿದ್ದಾರೆ. ಮೆರವಣಿಗೆಯಲ್ಲಿ ಹನುಮಂತ, ದತ್ತಾತ್ರೇಯ, ಶ್ರೀರಾಮದೇವರು ಸೇರಿದಂತೆ ವಿವಿಧ ಗರಡಿ ರಾಮಮಂದಿರಗಳಿಂದ ಅಪರೂಪದ ಉತ್ಸವ ಮೂರ್ತಿಗಳು ಹಾಗೂ ರಾಜ್ಯದ ವಿವಿಧೆಡೆಯಿಂದ ಬರುವ 17 ಕಲಾ ತಂಡಗಳು, 18 ಉತ್ಸವ ಮೂರ್ತಿಗಳು ಮೆರವಣಿಗೆಯಲ್ಲಿ ಬಾಗವಹಿಸಲಿವೆ.

ಮೆರವಣಿಗೆಯು ರಂಗನಾಥ ಬಡಾವಣೆಯಿಂದ ಹೊರಟು ಕಲ್ಕುಣಿಕೆ ಸರ್ಕಲ್, ಶಬರಿ ಪ್ರಸಾದ, ಹಳೆ ಸೇತುವೆ, ರೋಟರಿ ವೃತ್ತ, ಎಸ್.ಜೆ.ರಸ್ತೆ, ಕೋಟೆ ಸರ್ಕಲ್, ಜೆಎಲ್‌ಬಿ ರಸ್ತೆ, ಲಕ್ಷ್ಮಿ ವಿಲಾಸ್ ಸರ್ಕಲ್, ಬಜಾರ್ ರಸ್ತೆ, ಕಾರ್ಖಾನೆ ರಸ್ತೆ, ಅಕ್ಷಯ ಭಂಡಾರ್, ಹೊಸ ಬಸ್‌ನಿಲ್ದಾಣ, ಕಲ್ಪತರು ವೃತ್ತ ಮಾರುತಿ ಪೆಟ್ರೋಲ್ ಬಂಕ್ ಮೂಲಕ ಅಂಜನೇಯ ಸ್ವಾಮಿ ದೇವಾಲಯವನ್ನು ತಲುಪಲಿದೆ. ಮೆರವಣಿಗೆಯ ಉದ್ದಕ್ಕೂ ಅಲ್ಲಲ್ಲಿ ವಿವಿಧ ಸಂಘಟನೆಗಳು ತಿಂಡಿ ತಿನಿಸು ಉಪಹಾರ ಅನ್ನದಾನ ಹಣ್ಣು ಹಂಪಲು ವಿತರಣೆ ಮಾಡಲಿದ್ದಾರೆ ಅದರಲ್ಲಿ ಜೆಎಲ್‌ಬಿ ರಸ್ತೆಯ ಚರ್ಚ್ ಹತ್ತಿರ ಮೆರವಣಿಗೆಯಲ್ಲಿ ಸಾಗುವ ಹನುಮ ಭಕ್ತರಿಗೆ 8 ಕ್ವಿಂಟಾಲ್ ಅಕ್ಕಿ ಬಳಸಿ ಅನ್ನದಾನ ಮಾಡಲಿದ್ದಾರೆ.

ಕೆ.ಆರ್.ನಗರದ ಕಾಲುವೆಯಲ್ಲಿ ಹುಣಸೂರಿನ ಯುವಕರಿಬ್ಬರ ಮೃತದೇಹ ಪತ್ತೆ

ಕೆ.ಆರ್.ನಗರ, ಡಿ.3– ಯುವಕರಿಬ್ಬರ ಮೃತ ದೇಹ ಪಟ್ಟಣದ ಹಾಸನ ರಸ್ತೆಯಲ್ಲಿರುವ ಚಾಮರಾಜ ಬಲದಂಡೆ ನಾಲೆಯಲ್ಲಿ ದೊರೆತಿವೆ.

ಹುಣಸೂರು ತಾಲೂಕು ಚಿಕ್ಕಾಡಿಗನಹಳ್ಳಿ ಗ್ರಾಮದ ಬಸವರಾಜು ಎಂಬುವವರ ಪುತ್ರ ಭರತ್ (20) ಹಾಗೂ ಹುಚ್ಚಪ್ಪ ಎಂಬುವವರ ಪುತ್ರ ಪ್ರತಾಪ್ (22) ಮೃತರು.

ಇಬ್ಬರೂ ಭಾನುವಾರ ಬೆಳಗ್ಗೆ ಮನೆಯಿಂದ ಹೊರ ಹೋದವರು ರಾತ್ರಿಯಾದರೂ ವಾಪಸ್ ಬಾರದ ಕಾರಣ ಕುಟುಂಬದವರು ಎಲ್ಲೆಡೆ ಹುಡುಕಾಟ ನಡೆಸಿ ನಂತರ ಕಾಣೆಯಾಗಿರುವ ಬಗ್ಗೆ ಪೊಲೀಸರಿಗೆ ದೂರು ನೀಡಿದ್ದರು.

ಹುಡುಕಾಟ ನಡೆಸಿದಾಗ ಪಟ್ಟಣದಲ್ಲಿ ಹಾದುಹೋಗಿರುವ ಚಾಮರಾಜ ಬಲದಂಡೆಯ ಕುವೆಂಪು ಬಡಾವಣೆ ಸಮೀಪ ನಾಲಾ ಏರಿ ಮೇಲೆ ಇವರ ದ್ವಿಚಕ್ರ ವಾಹನ ಮತ್ತು ಚಪ್ಪಲಿಗಳು ಕಂಡು ಬಂದವು. ಅನುಮಾನಗೊಂಡ ಕುಟುಂಬದವರು ನೀರಾವರಿ ಇಲಾಖೆಯವರಿಗೆ ಮನವಿ ಮಾಡಿ ನಾಲೆಯ ನೀರಿನ ಹರಿವನ್ನು ಕಡಿಮೆ ಮಾಡಿ ಹುಡುಕಾಟ ನಡೆಸಿದರು.



ಭರತ್



ಪ್ರತಾಪ್

ಹಾಸನ ರಸ್ತೆ ಬಳಿ ಇರುವ ನಾಲೆಯ ಸೇತುವೆಯಡಿಯಲ್ಲಿ ತುಂಬಿದ್ದ ಹೂಳನ್ನು ಹೊರತೆಗೆಸಿ ಹುಡುಕಾಟ ನಡೆಸಿದಾಗ ಬೆಳಗ್ಗೆ ಒಬ್ಬನ ಮೃತದೇಹ ಸಿಕ್ಕಿತು. ಮಧ್ಯಾಹ್ನ ಮತ್ತೊಬ್ಬನ ಮೃತದೇಹ ದೊರೆಯಿತು.

ಭರತ್ ಪದವಿ ವಿದ್ಯಾರ್ಥಿಯಾಗಿದ್ದು, ಪ್ರತಾಪ್ ಕೂಲಿ ಕೆಲಸ ಮಾಡಿಕೊಂಡಿದ್ದ ಎನ್ನಲಾಗಿದೆ. ಇವರ ಸಾವಿಗೆ ಕಾರಣ ತಿಳಿದು ಬಂದಿಲ್ಲ. ಕುಟುಂಬದವರು ನೀಡಿದ ದೂರಿನ ಮೇರೆಗೆ ಕೆ.ಆರ್.ನಗರ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಮೈಸೂರು ಮಿತ್ರ ಗುರುವಾರ 4 ಡಿಸೆಂಬರ್ 2025

ನೈಪುಣ್ಯ ಕಾಲೇಜಿನ 'ನೈಪುಣ್ಯೋತ್ಸವ-ಜಾನಪದ ತೇರು' ವಾರ್ಷಿಕೋತ್ಸವ ವಿಶಿಷ್ಟ ಆಚರಣೆ

ಪಾಶ್ಚಾತ್ಯ ಶಿಕ್ಷಣದ ಜೊತೆಗೆ ಭಾರತೀಯರ ಮೂಲ ಬದುಕು ಪರಿಚಯಿಸುತ್ತಿರುವುದು ಶ್ಲಾಘನೀಯ

- ನೈಪುಣ್ಯ ಶಾಲೆಯ ಶಿಕ್ಷಣ ಪದ್ಧತಿಗೆ ಮಾರುಹೋದ ಕಿರುತೆರೆ ನಟಿ ಯಮುನಾ ಶ್ರೀನಿಧಿ
- ಮನಸೂರೆಗೊಂಡ ಮಕ್ಕಳ 'ಜಾನಪದ ಹೆಜ್ಜೆ', 'ಜನಪದ ಮರುಗು' ಉತ್ಸವ



ನೈಪುಣ್ಯ ಸ್ಕೂಲ್ ಆಫ್ ಎಕ್ಸಲೆನ್ಸ್ 'ನೈಪುಣ್ಯೋತ್ಸವ-ಜನಪದ ತೇರು' ವಾರ್ಷಿಕೋತ್ಸವವನ್ನು ಕಿರುತೆರೆ ನಟಿ ಯಮುನಾ ಶ್ರೀನಿಧಿ ಉದ್ಘಾಟಿಸಿದರು.



'ರಾಜ್ಯೋತ್ಸವ ಪ್ರಶಸ್ತಿ' ಪುರಸ್ಕೃತ ಹಿರಿಯ ಪತ್ರಕರ್ತರಾದ ಸಿದ್ದರಾಜು ಹಾಗೂ ಅಂಶಿ ಪ್ರಸನ್ನಕುಮಾರ್ ಅವರಿಗೆ 'ನೈಪುಣ್ಯ ಗೌರವ' ಪುರಸ್ಕಾರ ನೀಡಿ ಗೌರವಿಸಲಾಯಿತು.

ನೈಪುಣ್ಯ ಸ್ಕೂಲ್ ಆಫ್ ಎಕ್ಸಲೆನ್ಸ್ ಸಂಸ್ಥೆಯ ಕನಕದಾಸನಗರ ಹಾಗೂ ಆರ್.ಟಿ.ನಗರದ ಕ್ಯಾಂಪಸ್‌ಗಳ ವಿದ್ಯಾರ್ಥಿಗಳು ತಮ್ಮ ಜಾನಪದ ಪ್ರತಿಭೆಯನ್ನು ಅನಾವರಣಗೊಳಿಸಿದರು. ಚಿಣ್ಣರ ವಿಭಾಗದಿಂದ (ಕಿಂಡರ್‌ಗಾರ್ಟನ್) 'ಜನಪದ ಹೆಜ್ಜೆ' ಹಾಗೂ ಹೆಸರಾಂತ ಜನಪದ ಕಲಾವಿದ ದೇವಾನಂದ ವರಪ್ರಸಾದ ಅವರ ನಿರ್ದೇಶನದಲ್ಲಿ ಆರ್.ಟಿ.ನಗರ ಕ್ಯಾಂಪಸ್‌ನ ಐಸಿಎಸ್‌ಇ ಪಠ್ಯಕ್ರಮದ ವಿದ್ಯಾರ್ಥಿಗಳು 'ಜನಪದ ಮೆರಗು' ಕಾರ್ಯಕ್ರಮವನ್ನು ಪ್ರದರ್ಶಿಸಿದರು. ಪುಟ್ಟ ಮಕ್ಕಳು, ವಿದ್ಯಾರ್ಥಿಗಳ ಜಾನಪದ ಸೊಗಡಿನ ನೃತ್ಯಕ್ಕೆ ನೆರೆದಿದ್ದ ಪ್ರೇಕ್ಷಕರು ಸಮೂಹ ಶಿಳ್ಳೆ, ಚಪ್ಪಾಳೆಗಳ ಸುರಿಮಳೆಗೈದರು. ಮತ್ತೊಂದೆಡೆ ತಮ್ಮ ಮಕ್ಕಳನ್ನು ಜಾನಪದ ಉಡುಗೆ ತೊಡುಗೆಯಲ್ಲಿ ಕಣ್ತುಂಬಿಕೊಂಡ ಪೋಷಕರು, ಮಕ್ಕಳಿಗೆ ಉತ್ತೇಜನ ನೀಡುತ್ತಾ ಕಾರ್ಯಕ್ರಮಕ್ಕೆ ಮತ್ತಷ್ಟು ಮೆರಗು ನೀಡಿದರು.

ಮೈಸೂರು, ಡಿ.3(ವಿವಿಹೆಚ್)- ಅಮೆರಿಕ, ಇಂಗ್ಲೆಂಡ್ ದೇಶಗಳಲ್ಲಿ ಮಕ್ಕಳಿಗೆ ನೀಡುವ ಗುಣಮಟ್ಟದ, ಮೌಲ್ಯಯುತ ಶಿಕ್ಷಣವನ್ನು ಭಾರತದಲ್ಲೂ ನೀಡುತ್ತಿರುವ ಹೆಗ್ಗಳಿಕೆ ಆರ್.ರಘು (ರಘು ಕೌಟಿಲ್ಯ) ಅವರ ನೈಪುಣ್ಯ ಸ್ಕೂಲ್ ಆಫ್ ಎಕ್ಸಲೆನ್ಸ್‌ಗೆ ಸಲ್ಲುತ್ತದೆ ಎಂದು ಕಿರುತೆರೆ ನಟಿ ಯಮುನಾ ಶ್ರೀನಿಧಿ ಸಂತಸ ವ್ಯಕ್ತಪಡಿಸಿದರು.

ನೈಪುಣ್ಯ ಸ್ಕೂಲ್ ಆಫ್ ಎಕ್ಸಲೆನ್ಸ್ ವತಿಯಿಂದ ನಗರದ ರಂಗಾಯಣ ಆವರಣದಲ್ಲಿ ಬುಧವಾರ ಆಯೋಜಿಸಲಾಗಿದ್ದ ಎರಡು ದಿನಗಳ 'ನೈಪುಣ್ಯೋತ್ಸವ- ಜನಪದ ತೇರು' ವಾರ್ಷಿಕೋತ್ಸವ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ವಿದೇಶಗಳ ಶಿಕ್ಷಣ ವ್ಯವಸ್ಥೆಯನ್ನು ನೈಪುಣ್ಯ ಶಾಲೆಗಳ ಮೂಲಕ ಆರ್.ರಘು ಅವರು ಕರ್ನಾಟಕಕ್ಕೆ ಪರಿಚಯಿಸಿದ್ದಾರೆ. ಬಾಲ್ಯದಿಂದಲೇ ತಮಗೆ ಇಷ್ಟವಾದ ಕ್ಷೇತ್ರವನ್ನು ಆಯ್ಕೆ ಮಾಡಿಕೊಂಡು, ಪರಿಣಿತಿ ಹೊಂದಿ ಅದರಲ್ಲೇ ಮುಂದುವರಿಯಲು ವಿದೇಶಿ ಶಿಕ್ಷಣ ಪದ್ಧತಿಯನ್ನು ಇಲ್ಲಿನ ಮಕ್ಕಳಲ್ಲಿ ಬಿತ್ತುತ್ತಿರುವುದು ನಿಜಕ್ಕೂ ಶ್ಲಾಘನೀಯ ಕೆಲಸ ಎಂದರು.

ಜನಪದವೇ ನಮ್ಮ ಮೂಲ ಶೈಲಿಯಾಗಿದ್ದು, ಉದಾಹರಣೆಗಳ ಜೊತೆಗೆ ಮಕ್ಕಳಲ್ಲಿ ಅರಿವು ಮೂಡಿಸುವ ಕೆಲಸ ಮಾಡುತ್ತಿರುವುದು ಪಾಶ್ಚಾತ್ಯ ಶಿಕ್ಷಣ ವ್ಯವಸ್ಥೆಯ ಜೊತೆಗೆ ನಮ್ಮ ಮೂಲ ಬದುಕನ್ನು ಪರಿಚಯಿಸುತ್ತಿರುವುದು ಉತ್ತಮ ಬೆಳವಣಿಗೆ ಎಂದರು. ಜನಪದ, ಸಂಸ್ಕೃತಿ, ಆಚಾರ ವಿಚಾರ, ಪದ್ಧತಿಗಳ ಜೊತೆಗೆ, ದೇಶಭಕ್ತಿ, ಶಿಸ್ತು, ಸಾಮಾಜಿಕ ಪರಿಸರ, ಪ್ರಕೃತಿ ಬಗೆಗೂ ಮಕ್ಕಳಲ್ಲಿ ಆಳವಾದ ಅರಿವು ಮೂಡಿಸುತ್ತಿರುವುದು ಮೆಚ್ಚುಗೆಯ ಸಂಗತಿಯಾಗಿದೆ ಎಂದರು.

ಇಂದಿನ ದಿನಗಳಲ್ಲಿ ಬಹುತೇಕ ಶಿಕ್ಷಣ ಸಂಸ್ಥೆಗಳು ಅಂಕಗಳೊಂದಿಗೆ, ಆಧುನಿಕ ತಂತ್ರಜ್ಞಾನದೊಂದಿಗೆ ಪೈಪೋಟಿಗೆ ಇಳಿದಿವೆ. ಇದು ಆಯಾ ಸಂಸ್ಥೆ ಮೇಲಿನ ಹೊರೆಗಿಂತ ಅಲ್ಲಿ ಕಲಿಯುವ ವಿದ್ಯಾರ್ಥಿಗಳ ಮೇಲೆ ಹೆಚ್ಚಿನ ಪರಿಣಾಮ ಬೀರುತ್ತಿದೆ. ಆದರೆ ಇದ್ಯಾವುದರ ಜೊತೆಗೂ ಪೈಪೋಟಿಗೆ ಇಳಿಯದೇ ನಮ್ಮ ಮಕ್ಕಳನ್ನು ಮೂಲ ಜನಪದ ಸಂಸ್ಕೃತಿಯೆಡೆಗೆ ಕರೆದೊಯ್ಯುತ್ತಿರುವುದು ಮೌಲ್ಯಯುತ ಶಿಕ್ಷಣಕ್ಕೆ ಹಿಡಿದ ಕೈಗನ್ನಡಿಯಾಗಿದೆ ಎಂದರು.

ಮಕ್ಕಳು ಕಲಿಕಾ ಹಂತದಲ್ಲಿ ಮನೆಯ ವಾತಾವರಣಕ್ಕಿಂತ ಶಾಲೆಗಳಲ್ಲಿ ಹೆಚ್ಚಾಗಿ ಬೆಳೆಯುತ್ತಾರೆ. ತಮ್ಮ ಮಕ್ಕಳ ಉಜ್ವಲ ಭವಿಷ್ಯಕ್ಕಾಗಿ ಶಾಲೆಗಳ ಆಯ್ಕೆ ಇಂದಿನ ದಿನಮಾನದಲ್ಲಿ ಪ್ರಮುಖವಾಗಿರುತ್ತದೆ. ಇದರಲ್ಲಿ ಮಕ್ಕಳಿಗೆ ಶಿಕ್ಷಣದೊಂದಿಗೆ ಶಿಸ್ತು, ಸಂಸ್ಕೃತಿಯನ್ನು ಜೊತೆ ಜೊತೆಯಾಗಿ ಕೊಂಡೊಯ್ಯುವ ಕೆಲಸ ನೈಪುಣ್ಯ ಮಾಡುತ್ತಿದ್ದು, ಮಕ್ಕಳ ಭವಿಷ್ಯಕ್ಕೆ ಶೈಕ್ಷಣಿಕವಾಗಿ ಈ ಸಂಸ್ಥೆ ಉತ್ತಮ ಆಯ್ಕೆ ಎಂದು ನುಡಿದರು.

ನೈಪುಣ್ಯ ಸ್ಕೂಲ್ ಆಫ್ ಎಕ್ಸಲೆನ್ಸ್ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಆರ್. ರಘು ಮಾತನಾಡಿ, ನಮ್ಮ ಸಂಸ್ಕೃತಿ- ಸಂಪ್ರದಾಯ, ಆಚಾರ- ವಿಚಾರವನ್ನು ನಾವು ಮರೆಯಬಾರದು. ಅದನ್ನು ಮಕ್ಕಳಿಗೆ ತಿಳಿಸುವ ಉದ್ದೇಶದಿಂದಲೇ 'ಜಾನಪದ ತೇರು' ಪರಿಕಲ್ಪನೆಯಲ್ಲಿ ಎರಡು ದಿನಗಳ ಕಾರ್ಯಕ್ರಮ ರೂಪಿಸಲಾಗಿದೆ. ಶಿಕ್ಷಣ ಕಲಿಕೆಯ ಜೊತೆಗೆ ವ್ಯಕ್ತಿತ್ವ ವಿಕಸನ ಆಗಬೇಕು. ಮಕ್ಕಳಿಗೆ ಉತ್ತಮ ಬಾಲ್ಯ ಸಿಗಬೇಕು. ಪ್ರಾಥಮಿಕ ಶಿಕ್ಷಣ ಗಟ್ಟಿಯಾಗಿದ್ದರೆ ಏನನ್ನಾದರೂ ಸಾಧಿಸಬಲ್ಲರು ಎಂದರು.

ಪ್ರತಿಯೊಬ್ಬರಿಗೂ ಶುದ್ಧ ಗಾಳಿ- ಬೆಳಕು- ನೀರು ಅತ್ಯಗತ್ಯ. ಹೀಗಾಗಿಯೇ ಮಕ್ಕಳಿಗೆ ಪರಿಸರದ ಬಗ್ಗೆ ಅರಿವು ಮೂಡಿಸುವ ಕೆಲಸ ಮಾಡುತ್ತಿದ್ದೇವೆ. ಜೊತೆಗೆ ತೋಟಗಾರಿಕೆಯ ಮೂಲಕ ಉತ್ತಮ ಆಹಾರದ ಬಗ್ಗೆಯೂ ತಿಳಿಸುತ್ತಿದ್ದೇವೆ. ಇದ ಲ್ಲದೇ ದೇಶಪ್ರೇಮ, ನಾಡು-ನುಡಿಯ ಬಗ್ಗೆಯೂ ಅರಿವು ಮೂಡಿಸುತ್ತಿದ್ದೇವೆ ಎಂದು ತಿಳಿಸಿದರು.

ಹಿರಿಯ ಪತ್ರಕರ್ತ ಅಂಶಿ ಪ್ರಸನ್ನ ಕುಮಾರ್ ಮಾತನಾಡಿ, ರಾಜಕೀಯ, ವಿವಿಧ ಕಲಾಸೇವೆ, ಸಾಮಾಜಿಕ ಹೋರಾಟಗಾರರಾಗಿ, ಪತ್ರಕರ್ತರಾಗಿ ಗುರುತಿಸಿಕೊಂಡವರು ಆರ್.ರಘು. ಮೊದಲು ಕಟ್ಟಿದ ಸಂಸ್ಥೆಯಿಂದ ದೂರವಾದ ನಂತರ ಅದನ್ನು ಸವಾಲಾಗಿ ಸ್ವೀಕರಿಸಿ, ಮತ್ತೊಂದು ಶಿಕ್ಷಣ ಸಂಸ್ಥೆಯನ್ನು ಕಟ್ಟಿ ಕೇವಲ ನಾಲ್ಕೇ ವರ್ಷಗಳಲ್ಲಿ ಎರಡು ಕ್ಯಾಂಪಸ್ ತೆರೆದು, ಒಂದು ಸಾವಿರ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ನೀಡುವ ಮೂಲಕ ಮಾದರಿಯಾಗಿದ್ದಾರೆ ಎಂದರು.

ಯುವ ಪೀಳಿಗೆ ಪ್ರಮುಖವಾಗಿ ಎರಡು ವಿಷಯಗಳ ಮೇಲೆ ಕೇಂದ್ರೀಕರಿಸಬೇಕು. ಒಂದು ಶಿಕ್ಷಣ, ಮತ್ತೊಂದು ಆರೋಗ್ಯ. ಈ ಎರಡು ಜೊತೆಯಾಗಿದ್ದಲ್ಲಿ ಜೀವನ ಶೈಲಿ ಉತ್ತಮವಾಗಿರಲಿದೆ ಎಂದು ಸಲಹೆ ನೀಡಿದರು. ಆದಾಯ ತೆರಿಗೆ ಆಯುಕ್ತ ಶಿವಾನಂದ ಕಲಕೇರಿ, ಹಿರಿಯ ಪತ್ರಕರ್ತರಾದ ಸಿದ್ದರಾಜು, ಪ್ರಾಂಶುಪಾಲರಾದ ಶ್ವೇತಾ, ಮಹೇಂದ್ರ ಉಪಸ್ಥಿತರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಆಂಧ್ರ ಕಿಂಗ್ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಐ ಆ್ಯಮ್ ಗಾಡ್ (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ತೇರೇ ಇಷ್ಕ್ ಮೇ (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ನಾಯಿ ಇದೆ ಎಚ್ಚರಿಕೆ (ಕ)	4 ಪ್ರದರ್ಶನಗಳು
ಗಾಯಿತ್ರಿ	
ರಾಧೇಯ (ಕ)	4 ಪ್ರದರ್ಶನಗಳು
ರಾಜಕಮಲ್	
ತೇರೇ ಇಷ್ಕ್ ಮೇ (ತ)	4 ಪ್ರದರ್ಶನಗಳು
ಸಂಗಂ	
ಓಎಲ್‌ಸಿ (ಕ)	4 ಪ್ರದರ್ಶನಗಳು
ಲಿಡೋ	
ಫ್ಲರ್ಟ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
-	-
ಪ್ರಭಾ	
ನಾಯಿ ಇದೆ ಎಚ್ಚರಿಕೆ (ಕ)	4 ಪ್ರದರ್ಶನಗಳು

ಬ್ರೇಕ್ ಫಾಸ್ಟ್ ಮೀಟಿಂಗ್ ಬೀಗತನ ಮಾಡಿದಂತಿದೆ



ಮಾಜಿ ಸಚಿವ ಕೆ.ಎನ್. ರಾಜಣ್ಣ ವ್ಯಂಗ್ಯ

ತುಮಕೂರು, ಡಿ.3- ಬ್ರೇಕ್ ಫಾಸ್ಟ್ ಮೀಟಿಂಗ್ ಬೀಗತನ ಮಾಡಿದಂತೆ. ಮೊದ್ಲು ಒಂದು ಕಡೆ ಹೆಣ್ಣು ನೋಡೋಕೆ ಬರ್ತಾರೆ. ಆ ಮೇಲೆ ಗಂಡು ನೋಡೋಕೆ ಬರ್ತಾರೆ. ಆ ರೀತಿಯಾಗಿದೆ ಈ ಬ್ರೇಕ್ ಫಾಸ್ಟ್ ಮೀಟಿಂಗ್. ಇರೋದು ಏನಿದೆಯೋ ಅದೇ ಮುಂದುವರಿದುಕೊಂಡು ಹೋಗುತ್ತೆ. ಯಾವುದೇ ರಿವರ್ಸ್ ಆಗಲ್ಲ ಎಂದು ಮಾಜಿ ಸಚಿವ ಕೆ.ಎನ್. ರಾಜಣ್ಣ ವ್ಯಂಗ್ಯವಾಡಿದ್ದಾರೆ.

ಇತ್ತೀಚೆಗೆ ರಾಜ್ಯ ರಾಜಕೀಯದಲ್ಲಿ ಸಂಚಲನ ಮೂಡಿಸಿದ್ದ ಮುಖ್ಯಮಂತ್ರಿ ಮತ್ತು ಉಪಮುಖ್ಯಮಂತ್ರಿಗಳ ಬ್ರೇಕ್ ಫಾಸ್ಟ್ ಮೀಟಿಂಗ್ ಹಾಗೂ ನಾಯಕತ್ವ ಬದಲಾವಣೆ ಬಗ್ಗೆ ಮಾಜಿ ಸಚಿವ ಕೆ.ಎನ್. ರಾಜಣ್ಣ ತುಮಕೂರಿನಲ್ಲಿ ಪ್ರತಿಕ್ರಿಯೆ ನೀಡಿದ್ದಾರೆ. ಹಳ್ಳಿಗಳಲ್ಲಿ ಶಾಂತಿಯಾಗಬೇಕೆಂದರೆ ಕುರಿ, ಕೋಳಿ ಬಲಿ ಕೊಡುತ್ತಾರೆ. ಅದೇ ರೀತಿ ಸಿಎಂ ಮತ್ತು ಡಿಸಿಎಂ ಅವರ ಮನೆಯಲ್ಲಿ ಆಗಿದೆ. ಸದ್ಯ ಇರುವ ವ್ಯವಸ್ಥೆಯೇ ಮುಂದುವರಿಯಲಿದ್ದು, ಯಾವುದೇ ರಿವರ್ಸ್ ಆಗುವುದಿಲ್ಲ. ನಾಯಕತ್ವ ಬದಲಾವಣೆ ಇಲ್ಲ ಎಂದು ನಾವು ಅಂದುಕೊಂಡಿದ್ದೇವೆ. ಒಂದು ವೇಳೆ ಬದಲಾವಣೆ ಇದ್ದರೆ ಹೈಕಮಾಂಡ್ ಹೇಳುತ್ತದೆ ಎಂದು ಕಾಂಗ್ರೆಸ್ ಶಾಸಕ ರಾಜಣ್ಣ ಸ್ಪಷ್ಟಪಡಿಸಿದರು.

ದಲಿತ ಸಿಎಂ ವಿಚಾರವಾಗಿ ಪರಮೇಶ್ವರ್ ಅವರ ಹೆಸರನ್ನು ಪ್ರಸ್ತಾಪಿಸಿದ ರಾಜಣ್ಣ, ಒಂದು ವೇಳೆ ಅನಿವಾರ್ಯವಾಗಿ ಸಿದ್ದರಾಮಯ್ಯನವರು ಪದಚ್ಯುತಿಗೊಂಡರೆ ಅಥವಾ ಕೆಳಗಿಳಿಯುವಂತಾದರೆ, ಆಗ ದಲಿತ ನಾಯಕರಾದ ಡಾ.ಜಿ.ಪರಮೇಶ್ವರ್ ಅವರೇ ಮುಖ್ಯಮಂತ್ರಿಯಾಗಬೇಕು ಎಂದರು.

ಸಚಿವ ಸಂಪುಟ ವಿಸ್ತರಣೆಯ ಬಗ್ಗೆ ಮಾಹಿತಿ ನೀಡಿದ ಅವರು, ಮುಂಬರುವ ಬೆಳಗಾವಿ ಅಧಿವೇಶನದ ನಂತರ ಸಂಪುಟ ವಿಸ್ತರಣೆ ಪ್ರಕ್ರಿಯೆ ನಡೆಯಲಿದೆ. ಇನ್ನು ದೆಹಲಿಗೆ ಹೋಗಿ ಬಂದ ಶಾಸಕರ ಪ್ರಯತ್ನ ಸಫಲವೂ ಆಗಿಲ್ಲ, ವಿಫಲವೂ ಆಗಿಲ್ಲ ಎಂದರು.

ಆಟೋ ಹರಿದು ಗಾಯಗೊಂಡ ಮುಳ್ಳುಹಂದಿ ರಕ್ಷಣೆ

ಸಿಎಂ ನಿವಾಸದ ಸಮೀಪ ಆಹಾರ ಹರಸಿಬಂದ ವಿಶೇಷ ಪ್ರಾಣಿ!

ಮೈಸೂರು, ಡಿ.3(ಎಸ್‌ಪಿಎನ್)- ಅಪರಿಚಿತ ವಾಹನ ಹರಿದು ಗಾಯಗೊಂಡಿದ್ದ ಮುಳ್ಳುಹಂದಿಯನ್ನು ಅರಣ್ಯ ಇಲಾಖೆ ಸಿಬ್ಬಂದಿ ಹಾಗೂ ಪೀಪಲ್ಸ್ ಫಾರ್ ಅನಿಮಲ್ ತಂಡದ ಸದಸ್ಯರು ಬುಧವಾರ ರಕ್ಷಿಸಿದ್ದಾರೆ.

ಮೈಸೂರು ನ್ಯೂ ಕಾಂತರಾಜ್ ಅರಸ್ ರಸ್ತೆಯ ಮೈಸೂರು ದಿಗಂತ ವೃತ್ತದ ಸಮೀಪದ ರಸ್ತೆ ಬದಿ ಬಿದ್ದಿದ್ದ ಮುಳ್ಳುಹಂದಿಯನ್ನು ಅರಣ್ಯ ಇಲಾಖೆಯ ಗಸ್ತು ಅರಣ್ಯ ಪಾಲಕ ಸಂತೋಷ್ ನಾಯಕ್ ನೇತೃತ್ವದಲ್ಲಿ ಪೀಪಲ್ಸ್ ಫಾರ್ ಅನಿಮಲ್ ಸಂಸ್ಥೆಯ ಕೋಬ್ರಾ ಕುಮಾರ್, ಸಂತೋಷ್, ಕಿರಣ್ ನೇತೃತ್ವದ ತಂಡ ರಕ್ಷಿಸುವಲ್ಲಿ ಯಶಸ್ವಿಯಾಗಿದೆ.



ಗಾಯಗೊಂಡಿರುವ ಮುಳ್ಳುಹಂದಿ

ಸುಮಾರು 7 ಗಂಟೆ ವೇಳೆಗೆ ಹೇಮಾವತಿ ವಿದ್ಯಾಸಂಸ್ಥೆ ಕಡೆಯಿಂದ ಬಂದ ಮುಳ್ಳುಹಂದಿ ನ್ಯೂ ಕಾಂತರಾಜ ಅರಸ್ ರಸ್ತೆ ದಾಟುವ ಸಂದರ್ಭದಲ್ಲಿ ವಿಜಯ ಬ್ಯಾಂಕ್ ವೃತ್ತದ ಕಡೆಯಿಂದ ವೇಗವಾಗಿ ಬರುತ್ತಿದ್ದ ಆಟೋಗೆ ಸಿಲುಕಿದೆ.

ಪರಿಣಾಮ ಮುಂದೆ ಹೋಗಲಾರದೆ ತೆವಳಿಕೊಂಡೇ ರಸ್ತೆ ದಾಟಿರುವ ಮುಳ್ಳುಹಂದಿ, ಫುಟ್‌ಪಾತ್ ಮೇಲೆ ಮಲಗಿದೆ. ಸಾರ್ವಜನಿಕರ ಕಿರಿಚಾಟ, ವಾಹನಗಳ ಓಡಾಟ ಸದ್ದಿಗೆ ಬೆದರಿ ಮೋರಿ ಕೆಳಗೆ ಆಶ್ರಯ ಪಡೆದುಕೊಂಡಿತು. ರಸ್ತೆ ಬದಿಯ ಕಾರ್ಯಾಚರಣೆ ಮುಂದುವರೆಸಿದ ಅರಣ್ಯ ಇಲಾಖೆ ಸಿಬ್ಬಂದಿ, ಮುಳ್ಳು ಹಂದಿಗೆ ಯಾವುದೇ ಅಪಾಯವಾಗದಂತೆ ಪ್ಲಾಸ್ಟಿಕ್ ಬೋನ್‌ಗೆ ಹಾಕಿ ರಕ್ಷಿಸಿದರು. ಚಾಮುಂಡಿ ಬೆಟ್ಟದ ಕಾಡಿಗೆ ಬಿಡುವುದಾಗಿ ಹೇಳಿದರು.

ಈ ಮುಳ್ಳುಹಂದಿಗೆ ಅಂದಾಜು 3 ವರ್ಷ. ಕಳೆದ ಆರೇಳು ತಿಂಗಳಿಂದ ಈ ಭಾಗದಲ್ಲಿ ಓಡಾಡಿಕೊಂಡಿತ್ತು. ಸಾಮಾನ್ಯವಾಗಿ ಮುಳ್ಳುಹಂದಿಗಳು ಬೆಳಗಿನ ವೇಳೆ ಸಂಚಾರ ಮಾಡುವುದು ಕಡಿಮೆ. ರಾತ್ರಿ ವೇಳೆಯೆ ಆಹಾರ ಹರಸಿ, ಹೊರಗೆ ಬರುತ್ತವೆ. ಸಾರ್ವಜನಿಕ ಸ್ಥಳಗಳಲ್ಲಿ ಎಲ್ಲಿ ಆಹಾರ ಸಿಗುತ್ತದೆಂಯೋ ಅಂತಹ ಸ್ಥಳಗಳಲ್ಲಿ ನಿತ್ಯ ಆಹಾರಕ್ಕಾಗಿ ಬರುವುದುಂಟು ಎಂದು ಅರಣ್ಯ ಇಲಾಖೆ ಗಸ್ತು ಅರಣ್ಯ ಪಾಲಕ ಸಂತೋಷ್ ನಾಯಕ್ 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದರು.

ಸಿಎಂ ಮನೆಗೆ ಅನತಿ ದೂರ: ಅಲ್ಲದೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಮನೆಯ ಅನತಿ ದೂರದಲ್ಲಿ ಈ ಘಟನೆ ನಡೆದಿರುವ ಹಿನ್ನಲೆಯಲ್ಲಿ ಜನರು ಗಂಭೀರತೆ ಅರಿತು, ಸೆರೆ ಹಿಡಿಯಲು ಅರಣ್ಯ ಸಿಬ್ಬಂದಿಗಳಿಗೆ ಪ್ರೋತ್ಸಾಹ ನೀಡಬೇಕು ಎನ್ನುತ್ತಾರೆ ರಾಮಕೃಷ್ಣನಗರದ ನಿವಾಸಿ ರವಿಚಂದ್ರ.

ನಗರಪಾಲಿಕೆ ಕಚೇರಿಯಲ್ಲಿ ವಿದ್ಯುತ್ ಉಳಿತಾಯ ಪ್ರಯೋಗ ಯಶಸ್ವಿ

ಎಲ್‌ಇಡಿ ಬಲ್ಬ್, ಸುಧಾರಿತ ಫ್ಯಾನ್ ಬಳಕೆಯಿಂದ ಶೇ.20ರಿಂದ 30ರಷ್ಟು ವಿದ್ಯುತ್ ಉಳಿತಾಯ

ಮೈಸೂರು, ಡಿ.3(ಎಂಕೆ)- ಎಲ್‌ಇಡಿ ಬಲ್ಬ್‌ಗಳ ಅಳವಡಿಕೆ, ಸುಧಾರಿತ ಫ್ಯಾನ್‌ಗಳ ಬಳಕೆ ಹಾಗೂ ವಿದ್ಯುತ್ ಸೋರಿಕೆಗೆ ಕಡಿವಾಣ ಹಾಕಿರುವ ಮೈಸೂರು ನಗರ ಪಾಲಿಕೆ, ಸರಾಸರಿ ಶೇ.20-30 ರಷ್ಟು ವಿದ್ಯುತ್ ಹಾಗೂ ವಿದ್ಯುತ್ ಶುಲ್ಕ ಉಳಿತಾಯದಲ್ಲಿ ಯಶಸ್ಸು ಕಂಡಿದೆ.



ಮೈಸೂರು ನಗರಪಾಲಿಕೆ ಕೇಂದ್ರ ಕಚೇರಿಗೆ ನಡೆಸಲಾದ ವಿದ್ಯುತ್ ಉಳಿತಾಯ ಮತ್ತು ಶುಲ್ಕ ಕಡಿಮೆ ಮಾಡುವ ಪ್ರಯೋಗ ಯಶಸ್ವಿಯಾಗಿದ್ದು, ವರ್ಷದ ಹಿಂದೆ ಪ್ರತೀ ತಿಂಗಳು ಸುಮಾರು 10 ರಿಂದ 11 ಸಾವಿರ ಯೂನಿಟ್ ವಿದ್ಯುತ್ ಬಳಕೆಯಾಗು ತ್ತಿದ್ದು, ಉಳಿತಾಯ ಪ್ರಯೋಗ ಅಳವಡಿಸಿದ ನಂತರ 8 ಸಾವಿರ ಯೂನಿಟ್‌ಗೆ ಇಳಿಕೆಯಾಗಿದೆ. ಅಂದರೆ ಸುಮಾರು 2 ರಿಂದ 3 ಸಾವಿರ ಯೂನಿಟ್ ವಿದ್ಯುತ್ ಬಳಕೆಗೆ ಕಡಿವಾಣ ಹಾಕಿದಂತಾಗಿದೆ. ಹಾಗೆಯೇ ತಿಂಗಳಿಗೆ ಲಕ್ಷಕ್ಕೂ ಅಧಿಕ ಬರುತ್ತಿದ್ದ ವಿದ್ಯುತ್ ಶುಲ್ಕದಲ್ಲಿ ಸಮಾರು 20 ರಿಂದ 25 ಸಾವಿರ ರೂ. ಉಳಿತಾಯ ಮಾಡಲಾಗಿದೆ.

ಕಳೆದೊಂದು ವರ್ಷದ ಅವಧಿಯಲ್ಲಿ ಪಾಲಿಕೆಯ ಪಾರಂಪರಿಕ ಕಟ್ಟಡಕ್ಕೆ ಹಾನಿಯಾಗದಂತೆ ಹಳೇ ಮಾದರಿಯ ಟ್ಯೂಬ್ ಲೈಟ್‌ಗಳನ್ನು ಬದಲಿಸಿ ಎಲ್‌ಇಡಿ ಬಲ್ಬ್‌ಗಳು ಹಾಗೂ ಹಳೇ ಫ್ಯಾನ್‌ಗಳನ್ನು ತೆಗೆದು ಸುಧಾರಿತ ಫೈವ್ ಸ್ಟಾರ್(ಕಡಿಮೆ ವಿದ್ಯುತ್ ಬಳಕೆ)ವುಳ್ಳ ಫ್ಯಾನ್‌ಗಳನ್ನು ಅಳವಡಿಸಲಾಯಿತು. ಅಲ್ಲದೆ ಹೊಸದಾಗಿ ವೈರಿಂಗ್ ಮಾಡುವ ಮೂಲಕ ವಿದ್ಯುತ್ ಸೋರಿಕೆಗೆ ಕಡಿವಾಣ ಹಾಕಿದ್ದರಿಂದ ವಿದ್ಯುತ್ ಮತ್ತು ಶುಲ್ಕ ಉಳಿತಾಯವಾಗಿದೆ ಎಂದು ನಗರಪಾಲಿಕೆ ವಿದ್ಯುತ್ ವಿಭಾಗದ ಕಾರ್ಯನಿರ್ವಾಹಕ ಇಂಜಿನಿಯರ್ ದೀಪಕ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಪಾಲಿಕೆ ಕೇಂದ್ರ ಕಚೇರಿಯಲ್ಲಿ 25ಕ್ಕೂ ಹೆಚ್ಚು ಕೊಠಡಿಗಳಿದ್ದು, ಆಯುಕ್ತರ ಕಚೇರಿ ಸೇರಿದಂತೆ ಬಹುತೇಕ ಕೊಠಡಿಗಳನ್ನು ನವೀಕರಣಗೊಳಿಸಲಾಗಿದೆ. ಸುಮಾರು 477 ಟ್ಯೂಬ್ ಲೈಟ್‌ಗಳನ್ನು ಬದಲಿಸಿ, ಕಡಿಮೆ ವಿದ್ಯುತ್ ಬಳಕೆಯ ಎಲ್‌ಇಡಿ ಬಲ್ಬ್‌ಗಳನ್ನು ಅಳವಡಿಸಲಾಗಿದೆ. ಕಾಲಕಾಲಕ್ಕೆ ಎಸಿ(ಏರ್ ಕಂಡಿಷನರ್)ಗಳನ್ನು ಬದಲಾವಣೆ ಮಾಡಲಾಗುತ್ತಿದೆ. ಒಂದು ವರ್ಷದ ಆಡಿಟ್ ಪ್ರಕಾರ ಶೇ.20-30 ರಷ್ಟು ವಿದ್ಯುತ್ ಉಳಿತಾಯವಾಗಿದ್ದು, ಮುಂದಿನ ದಿನಗಳಲ್ಲಿ ಇನ್ನಷ್ಟು ವಿದ್ಯುತ್ ಉಳಿತಾಯ ಮಾಡುವ ಪ್ರಯತ್ನ ನಡೆಯುತ್ತಿದೆ ಎಂದರು.

ಹಾಗೆಯೇ ವಲಯ ಕಚೇರಿ-3, ವಲಯ ಕಚೇರಿ-1 ಸೇರಿದಂತೆ ಬಹುತೇಕ ವಲಯ ಕಚೇರಿಗಳಲ್ಲಿಯೂ ವಿದ್ಯುತ್ ಉಳಿತಾಯ ಮಾಡುವ ಪ್ರಯತ್ನ ನಡೆಯು ತ್ತಿದೆ. ಹೊಸ ಕಟ್ಟಡಗಳಲ್ಲಿ ಈಗಾಗಲೇ ಕಡಿಮೆ ವಿದ್ಯುತ್ ನಲ್ಲೂ ಪ್ರಕಾಶಮಾನವಾಗಿ ಬೆಳಗುವ ಎಲ್‌ಇಡಿ ಬಲ್ಬ್‌ಗಳನ್ನು ಅಳವಡಿಸಲಾಗಿದೆ. ಪಾಲಿಕೆ ಕೇಂದ್ರ ಕಚೇರಿಯೊಂದರಲ್ಲೇ ಸಾಕಷ್ಟು ಬದಲಾವಣೆಯೊಂದಿಗೆ ವಿದ್ಯುತ್ ಉಳಿತಾಯ ಮಾಡಲು ಸಾಧ್ಯವಾಗಿದೆ ಎಂದು ಮಾಹಿತಿ ನೀಡಿದರು.

ಇತರೆ ಇಲಾಖೆಗೆ ಮಾದರಿ: ವಿದ್ಯುತ್ ಉಳಿತಾಯ ಮಾಡುವಲ್ಲಿ ನಗರ ಪಾಲಿಕೆ ಕೇಂದ್ರ ಕಚೇರಿಯಲ್ಲಿ ನಡೆದ ಪ್ರಯೋಗ ಇತರೆ ಇಲಾಖೆಗಳಿಗೆ ಮಾದರಿ ಯಾಗಿದೆ. ಮುಖ್ಯವಾಗಿ ವಿದ್ಯುತ್ ಸೋರಿಕೆಗೆ ಕಡಿವಾಣ ಹಾಕಿದರೆ, ವಿದ್ಯುತ್ ಬಳಕೆಯನ್ನು ಇನ್ನಷ್ಟು ಕಾಲ ವಿಸ್ತರಿಸಬಹುದಾಗಿದೆ ಎಂದರು.

ಮಹಿಳಾ ಉದ್ಯಮಿ ಮೇಲೆ ಹಲ್ಲೆ: ನಿವೃತ್ತ ಎಸ್ಪಿ ಸೇರಿ ನಾಲ್ವರ ವಿರುದ್ಧ ಎಫ್‌ಐಆರ್

ಮೈಸೂರು, ಡಿ. 3- ಮಹಿಳಾ ಉದ್ಯಮಿ ಮೇಲೆ ಹಲ್ಲೆ ನಡೆಸಿದ ಆರೋಪದ ಮೇರೆಗೆ ನಿವೃತ್ತ ಎಸ್‌ಪಿ ಸೇರಿದಂತೆ ನಾಲ್ವರ ವಿರುದ್ಧ ಮೈಸೂರಿನ ಜಯಲಕ್ಷ್ಮಿಪುರಂ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಗೋಕುಲಂ 3ನೇ ಹಂತದ ನಿವಾಸಿ ತೃಪ್ತಿ ಎನ್. ಶಾ(50) ಹಲ್ಲೆಗೊಳಗಾದವರಾಗಿದ್ದು, ಇವರು ಜಯಲಕ್ಷ್ಮಿಪುರಂ ಟೆಂಪಲ್ ರಸ್ತೆಯಲ್ಲಿ ಪಿ.ವಿ. ಚೇತನ್ ಅವರೊಡಗೂಡಿ ಅರ್ಬನ್ಸೈಟ್ ಇನ್‌ಫ್ರಾಸ್ಟ್ರಕ್ಚರ್ ಎಂಬ ಸಂಸ್ಥೆಯನ್ನು ನಡೆಸುತ್ತಿದ್ದರು. ವ್ಯವಹಾರದಲ್ಲಿ ನಷ್ಟ ಉಂಟಾದ ಹಿನ್ನೆಲೆಯಲ್ಲಿ ತಮಗೆ ಸೇರಬೇಕಾದ ಹಣ ಪಡೆಯಲು ಚೇತನ್ ಅವರನ್ನು ಸಂಪರ್ಕಿಸಲು ಪ್ರಯತ್ನಿಸಿದ್ದಾಗಿ ಅವರು ತಮ್ಮ ದೂರಿನಲ್ಲಿ ತಿಳಿಸಿದ್ದಾರೆ.

ಜುಲೈ 30ರಂದು ಸಂಜೆ 7.30ರ ಸುಮಾರಿನಲ್ಲಿ ನಿವೃತ್ತ ಎಸ್ಪಿ ಕೃಷ್ಣಪ್ಪ, ಪಿ.ವಿ. ಚೇತನ್, ಆತನ ಪತ್ನಿ ಯಶಸ್ವಿನಿ ಚೇತನ್ ಹಾಗೂ ಮತ್ತೋರ್ವ ವ್ಯಕ್ತಿ ತಮ್ಮ ಕಚೇರಿಗೆ ಬಂದು ಅವಾಚ್ಯ ಶಬ್ದಗಳಿಂದ ನಿಂದಿಸಿ, ಹಲ್ಲೆ ನಡೆಸಿದ್ದಾರೆ ಎಂದು ನೀಡಿದ ದೂರನ್ನು ದಾಖಲಿಸಿಕೊಂಡಿರುವ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ಇಂದು ದಸರಾ ಆನೆ ಅರ್ಜುನ ಸ್ಮರಣಾರ್ಥ ಕೃತಿಗಳ ಬಿಡುಗಡೆ



ಮೈಸೂರು, ಡಿ.3(ಎಂಕೆ)- ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಇಂಜಿನಿಯರ್ಸ್ ಸಂಸ್ಥೆ ಸಭಾಂಗಣದಲ್ಲಿ ಮೈಸೂರು ಕಲ್ಚರಲ್ ಅಸೋಷಿಯೇಷನ್ ಕಲಿಸು ಫೌಂಡೇಷನ್ ವತಿಯಿಂದ ನಾಳೆ(ಡಿ.4) ಬೆಳಗ್ಗೆ 10.30ಕ್ಕೆ ವಿಜಯ ಕರ್ನಾಟಕ ದಿನಪತ್ರಿಕೆಯ ಸ್ಥಾನಿಕ ಸಂಪಾದಕ ಐತಿಚಂಡ ರಮೇಶ್ ಉತ್ತಪ್ಪ ಅವರ 40ನೇ ಕೃತಿ ಅರ್ಜುನ 2ನೇ ವರ್ಷದ ನೆನಪಿನಾರ್ಥವಾಗಿ 'ಸಾವಿನ ಸತ್ಯ (ಅರ್ಜುನಾ ನಿನ್ನ ಕೊಂದದ್ದು ಮದಗಜವಲ್ಲ ಪಾಪಿ ಮನುಷ್ಯ..! ತನಿಖಾ ವರದಿ ರಹಸ್ಯ) ಹಾಗೂ 'ದಸರಾ ಆನೆಗಳು ಭೀಮ ಹಾಗೂ ಇತರರು' ಪುಸ್ತಕ ಬಿಡುಗಡೆ ಕಾರ್ಯ ಕ್ರಮ ಹಮ್ಮಿಕೊಳ್ಳಲಾಗಿದೆ.

ಮಾಜಿ ಸಂಸದ ಪ್ರತಾಪಸಿಂಹ ಕಾರ್ಯಕ್ರಮ ಉದ್ಘಾಟಿಸಲಿದ್ದು, ಮೈವಿವಿ ಸಿಂಡಿಕೇಟ್ ಮಾಜಿ ಸದಸ್ಯ ಡಾ.ಈ.ಸಿ. ನಿಂಗರಾಜುಗೌಡ, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಡಾ.ಬಿ.ಜೆ. ವಿಜಯ್‌ಕುಮಾರ್ ಕೃತಿಗಳ ಕುರಿತು ಮಾತನಾಡಲಿದ್ದಾರೆ. ಈ ವೇಳೆ ಪಶುವೈದ್ಯ ಡಾ.ಮುಜೀಬ್ ಉರ್ ರೆಹಮಾನ್, ಅರ್ಜುನ ಆನೆ ಅಭಿಮಾನಿ ಕೆ.ಆರ್.ಸತ್ಯಪ್ರಭಾ ಅವರನ್ನು ಸನ್ಮಾನಿಸಲಾಗುವುದು. ಮೈಸೂರು ಕಲ್ಚರಲ್ ಅಸೋಸಿಯೇಷನ್ ಅಧ್ಯಕ್ಷ ಎ.ಪಿ.ನಾಗೇಶ್, ಪ್ರಕಾಶಕ ಎಂ.ಎಂ. ನಿಖಿಲೇಶ್, ಲೇಖಕ ಐತಿಚಂಡ ರಮೇಶ್ ಉತ್ತಪ್ಪ ಉಪಸ್ಥಿತರಿರುವರು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಮೈಸೂರು,ಡಿ.3- ಸೌತ್ (ದಕ್ಷಿಣ) ವಿದ್ಯುತ್ ವಿತರಣಾ ಕೇಂದ್ರದ ಕಾಮಗಾರಿ ನಿಮಿತ್ತ ಡಿ.4 ಬೆಳಿಗ್ಗೆ 10 ರಿಂದ ಸಂಜೆ 6 ಗಂಟೆಯವರೆಗೆ ಕನಕಗಿರಿ, ಸುಯೇಜ್ ಫಾರಂ ರಸ್ತೆ, ಬೆಸ್ತರ ಬ್ಲಾಕ್, ಗುಂಡುರಾವ್ ನಗರ, ದತ್ತನಗರ, ಭೈರವೇಶ್ವರನಗರ, ಮುನೇಶ್ವರನಗರ, ಊಟಿ ರಸ್ತೆ ಹಾಗೂ ಸುತ್ತ-ಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.

ಗ್ರೇಟರ್ ಮೈಸೂರು, ಪೆರಿಫೆರಲ್ ರಿಂಗ್ ರಸ್ತೆ ಯೋಜನೆ ಹಿನ್ನೆಲೆಯಲ್ಲಿ ಸಾರಿಗೆ ಪರಿಣಾಮಕಾರಿ ಸಂಪರ್ಕ ಜಾಲ ರೂಪಿಸುವ ಉದ್ದೇಶ

ಮೈಸೂರು ಸುತ್ತ ನಾಲ್ಕು ಕಡೆ ಬಸ್ ಡಿಪೋ, ನಿಲ್ದಾಣ ನಿರ್ಮಾಣ ಪ್ರಸ್ತಾವನೆ

ಮೈಸೂರು, ಡಿ.3(ಆರ್‌ಕೆ)- ಮುಂದಿನ 25-30 ವರ್ಷಗಳಲ್ಲಿನ ಬೆಳವಣಿಗೆಯನ್ನು ಗಮನದಲ್ಲಿರಿಸಿಕೊಂಡು ರಾಜ್ಯ ಸರ್ಕಾರವು ಸಾಂಸ್ಕೃತಿಕ ರಾಜಧಾನಿ ಮೈಸೂರನ್ನು ಗ್ರೇಡ್-1 ಮಹಾನಗರ ಪಾಲಿಕೆಯನ್ನಾಗಿ ಮೇಲ್ದರ್ಜೆಗೆ ಏರಿಸಲು ಮುಂದಾಗಿರುವ ಹಿನ್ನೆಲೆಯಲ್ಲಿ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಮೈಸೂರು ಕೆಎಸ್‌ಆರ್‌ಟಿ ನಗರ ವಿಭಾಗವು ನಾಲ್ಕು ದಿಕ್ಕುಗಳಲ್ಲಿ ಹೊಸದಾಗಿ ಸುಧಾರಿತ ಬಸ್ ಡಿಪೋ ಮತ್ತು ನಿಲ್ದಾಣ ನಿರ್ಮಿಸಲು ಉದ್ದೇಶಿಸಿದೆ.

ಇತ್ತೀಚೆಗಷ್ಟೇ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರು ಮೈಸೂರಿಗೆ ಭೇಟಿ ನೀಡಿ ಸಭೆ ನಡೆಸಿದ್ದರು. ಈ ವೇಳೆ ಕೆಎಸ್‌ಆರ್‌ಟಿಸಿ ಮೈಸೂರು ನಗರ ವಿಭಾಗದ ಅಧಿಕಾರಿಗಳು ಈ ವಿಷಯ ಪ್ರಸ್ತಾಪಿಸಿ, ಬಸ್ ನಿಲ್ದಾಣ ಮತ್ತು ಡಿಪೋಗಳಿಗೆ ಜಾಗ ಮೀಸಲಿರಿಸುವಂತೆ ಕೋರಿದ್ದಾರೆ.

ಮೈಸೂರು ನಗರ ವಿಸ್ತಾರವಾಗುತ್ತಿದ್ದಂತೆ ಹಾಗೂ ಪ್ರಸ್ತುತ ರಿಂಗ್‌ರಸ್ತೆ ವಾಹನ ಸಂಚಾರ ದಟ್ಟಣೆ ಇರುವುದರಿಂದ, ಈ ಒತ್ತಡ ಕಡಿಮೆ ಮಾಡಲು ಮೈಸೂರಿನ ನಾಲ್ಕು ದಿಕ್ಕುಗಳಲ್ಲಿ ಬಸ್ ಡಿಪೋ ಮತ್ತು ನಿಲ್ದಾಣ ನಿರ್ಮಿಸುವುದು ಅವಶ್ಯವಾಗಿದೆ ಎಂದು ಕೆಎಸ್‌ಆರ್‌ಟಿಸಿ ನಗರ ವಿಭಾಗದ ವಿಭಾಗೀಯ ನಿಯಂತ್ರಣಾಧಿಕಾರಿ ವೀರೇಶ್ ಸಚಿವರ ಗಮನ ಸೆಳೆದಿದ್ದಾರೆ.

ಈಗಾಗಲೇ ಮೈಸೂರು ಅಭಿವೃದ್ಧಿ ಪ್ರಾಧಿಕಾರ (ಎಂಡಿಎ) ದಿಂದ ಪೆರಿಫೆರಲ್ ರಿಂಗ್ ರಸ್ತೆ ನಿರ್ಮಿಸಲು ಉದ್ದೇಶಿಸಿದ್ದು, ಜೊತೆಗೆ ಗ್ರೇಟರ್ ಮೈಸೂರು ಮಹಾನಗರ ಪಾಲಿಕೆ ಯೋಜನೆ ಅನುಷ್ಠಾನಗೊಂಡಲ್ಲಿ ಮುಂದೆ ಹಲವು ಗ್ರಾಮಗಳು ಪಾಲಿಕೆ ವ್ಯಾಪ್ತಿಗೆ ಸೇರುವುದರಿಂದ ಪ್ರಯಾಣಿಕರ ಒತ್ತಡ ಹೆಚ್ಚಾಗುವ ನಿರೀಕ್ಷೆ ಇರುವ ಕಾರಣ ಬೇಡಿಕೆಗನುಗುಣವಾಗಿ ಬಸ್‌ಗಳನ್ನು ಓಡಿಸಬೇಕಾಗುತ್ತದೆ ಎಂದೂ ಸಭೆಯಲ್ಲಿ ಪ್ರತಿಪಾದಿಸಿದ್ದಾರೆ.



ಒತ್ತಡ ಹೆಚ್ಚಳ: ವರ್ಷದಿಂದ ವರ್ಷಕ್ಕೆ ಪ್ರಯಾಣಿಕರ ಒತ್ತಡ ಅಧಿಕವಾಗುತ್ತಿರುವ ಹಿನ್ನೆಲೆಯಲ್ಲಿ ಹಾಗೂ ವಿಶೇಷವಾಗಿ ದಸರಾ ಮಹೋತ್ಸವದ ಸಂದರ್ಭ ಮೈಸೂರು ನಗರದಾದ್ಯಂತ ಸಂಚಾರ ದಟ್ಟಣೆಯನ್ನು ನಿಯಂತ್ರಿಸುವ ಸಲುವಾಗಿ, ಈಗಿರುವ ಗ್ರಾಮಾಂತರ ಬಸ್ ನಿಲ್ದಾಣದ ಒತ್ತಡ ಕಡಿಮೆ ಮಾಡಲು ಬನ್ನಿಮಂಟಪದಲ್ಲಿ 120 ಕೋಟಿ ರೂ. ವೆಚ್ಚದ ಅತ್ಯಾಧುನಿಕ ಬಸ್ ನಿಲ್ದಾಣ ನಿರ್ಮಾಣ ಯೋಜನೆ ಈಗಾಗಲೇ ಪ್ರಗತಿಯಲ್ಲಿದೆ.

ಜಾಗ ಕೊಡಿಸಲು ಮನವಿ: ಈಗಾಗಲೇ ಮೈಸೂರಿನಲ್ಲಿ ರಿಯಲ್ ಎಸ್ಟೇಟ್ ಉದ್ಯಮ ವ್ಯಾಪಿಸಿರುವುದರಿಂದ ಮುಂದೆ ಜಾಗಕ್ಕೆ ಅಭಾವ ಉಂಟಾಗಲಿದೆ. ಆದ್ದರಿಂದ, ಮೈಸೂರಿನ ನಾಲ್ಕು ದಿಕ್ಕುಗಳಲ್ಲಿ ಬಸ್ ನಿಲ್ದಾಣ ಮತ್ತು ಡಿಪೋ ನಿರ್ಮಿಸಲು ಎಂಡಿಎಯಿಂದ ಅಗತ್ಯವಿರುವ ಸಿಎ ನಿವೇಶನವನ್ನು ಕೊಡಿಸಿಕೊಡಬೇಕೆಂದು ವೀರೇಶ್ ಅವರು ಸಾರಿಗೆ ಸಚಿವರಲ್ಲಿ ಮನವಿ ಮಾಡಿದ್ದಾರೆ.

ವಿಸ್ತರಣಾ ಯೋಜನೆ: ಪ್ರಸ್ತುತ ಮೈಸೂರಿನ ವಿವಿಧ ಬಡಾವಣೆಗಳಲ್ಲಿರುವ ವಿಜಯನಗರ, ಹಿನಕಲ್, ಕುವೆಂಪುನಗರ, ಸಾತಗಳ್ಳಿ ಬಸ್ ಡಿಪೋಗಳ ಜೊತೆಗೆ ಹೊಸ ನಾಲ್ಕು ಡಿಪೋಗಳನ್ನು ಸ್ಥಾಪಿಸಲು ಕೆಎಸ್‌ಆರ್‌ಟಿಸಿ ನಗರ ವಿಭಾಗ ಪ್ರಸ್ತಾವನೆ ಸಿದ್ಧಪಡಿಸಿದೆ. ಜೊತೆಗೆ ಮೈಸೂರು ಜಿಲ್ಲೆಗೆ ಇನ್ನೂ 100 ಎಲೆಕ್ಟ್ರಿಕ್ ಬಸ್‌ಗಳನ್ನು ಕೊಡಿಸುವಂತೆಯೂ ಕೋರಿದ್ದು, ಭವಿಷ್ಯದಲ್ಲಿ ಬಸ್ ನಿಲ್ದಾಣ ಮತ್ತು ಡಿಪೋ ಅಗತ್ಯ ಬೀಳಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಈಗಿರುವ ನಗರ ಮತ್ತು ಸಬರ್ಬನ್ ಬಸ್ ನಿಲ್ದಾಣದಿಂದ ಮೈಸೂರಿನ ವಿವಿಧ ಬಡಾವಣೆಗಳು ಹಾಗೂ ಗ್ರಾಮಾಂತರ ಪ್ರದೇಶಗಳಿಗೆ ಸಾರಿಗೆ ಬಸ್‌ಗಳು ಸಂಚರಿಸುತ್ತಿದ್ದು ನಗರದಲ್ಲಿ ವಾಹನ ದಟ್ಟಣೆ ಒತ್ತಡ ಹೆಚ್ಚಾಗಿರುವುದರಿಂದ ಜನ ಹಾಗೂ ವಾಹನ ಸಂಚಾರಕ್ಕೆ ತೊಂದರೆಯಾಗಿದೆ. ಒಂದು ವೇಳೆ ಈಗಲೇ ಹೊಸ ಬಸ್ ಟರ್ಮಿನಲ್‌ಗಳು ಮತ್ತು ಡಿಪೋಗಳಿಗೆ ಜಾಗ ಮೀಸಲಿರಿಸದಿದ್ದಲ್ಲಿ ಮುಂದೆ ಸಮಸ್ಯೆ ಆಗದು ಎಂದು ವೀರೇಶ್, ಸಾರಿಗೆ ಸಚಿವರಿಗೆ ತಿಳಿಸಿದ್ದಾರೆ.

ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ನನ್ನ ಕಕ್ಷಿದಾರರು ಈ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತನ್ನು ಅದರ ಮಾಲೀಕರಾದ ಮೈಸೂರು ಸಿಟಿ–570 011, ನಜರ್‌ಬಾದ್ ಮೊಹಲ್ಲಾ, ಸಿದ್ಧಾರ್ಥ ನಗರ, ವಿಹಾರ ಮಾರ್ಗ, ಮನೆ ನಂ. 01 ರಲ್ಲಿ ವಾಸವಾಗಿರುವ (1) ಲೇಟ್ ಎ.ಎಲ್. ಚನ್ನರಾಜ್ ಅರಸ್ ರವರ ಮಗನಾದ ಶ್ರೀ. ಮಹೇಶ್ .ಎನ್. ಅರಸ್, (2) ಶ್ರೀ. ಮಹೇಶ್ .ಎನ್. ಅರಸ್ ರವರ ಧರ್ಮಪತ್ನಿ ಶ್ರೀಮತಿ ಜಯಶ್ರೀ ಎಂ. ಅರಸ್, (3) ಶ್ರೀ. ಮಹೇಶ್.ಎನ್. ಅರಸ್ ರವರ ಮಗನಾದ ಶ್ರೀ. ರಿಷಿಕೇಶ್ ಅರಸ್, ಬೆಂಗಳೂರು ಸಿಟಿ–560 102, ಬೆಂಗಳೂರು ದಕ್ಷಿಣ, ಸೆಕ್ಟರ್–6, ಹೆಚ್.ಎಸ್.ಆರ್ ಲೇಔಟ್, 3ನೇ 'ಎ' ಮೇನ್, 16ನೇ ಕ್ರಾಸ್, ಮನೆ ನಂ. 539 ರಲ್ಲಿ ವಾಸವಾಗಿರುವ (4) ಶ್ರೀ. ರಿಷಿಕೇಶ್ ಅರಸ್ ರವರ ಧರ್ಮಪತ್ನಿ ಶ್ರೀಮತಿ ಶಿಲ್ಪಶ್ರೀ ಅರಸ್, (5) ಶ್ರೀ. ರಿಷಿಕೇಶ್ ಅರಸ್ ರವರ ಮಗನಾದ ಶ್ರೀ ಅನಿರುದ್.ಆರ್. ಅರಸ್ ರವರಿಂದ ಖರೀದಿಸಲು ಉದ್ದೇಶಿಸಿರುತ್ತಾರೆ. ಷೆಡ್ಯೂಲ್ ಸ್ವತ್ತಿನ ವಿಚಾರದಲ್ಲಿ ಮೇಲೆ ಕಾಣಿಸಿದ ವ್ಯಕ್ತಿಗಳಿಗಲ್ಲದೆ ಬೇರೆ ಯಾರಿಗಾದರು, ಯಾವುದೇ ರೀತಿಯ ಹಕ್ಕಾಗಲೀ, ಹಿತಾಸಕ್ತಿಯಾಗಲೀ, ಭಾಗಾಂಶವಾಗಲೀ ಅಥವಾ ಋಣಗಳಾಗಲೀ ಇದ್ದಲ್ಲಿ ಈ ಕೆಳಕಂಡವರನ್ನು ಈ ದಿನದಿಂದ ಏಳು (7) ದಿನಗಳ ಒಳಗಾಗಿ ಸಂಬಂಧಪಟ್ಟ ದಾಖಲಾತಿಗಳೊಡನೆ ಸಂಪರ್ಕಿಸುವುದು. ಇಲ್ಲವಾದಲ್ಲಿ ಷೆಡ್ಯೂಲ್ ಸ್ವತ್ತಿಗೆ ಸಂಬಂಧಪಟ್ಟಂತೆ ಮೇಲೆ ಕಾಣಿಸಿದ ವ್ಯಕ್ತಿಗಳಿಗಲ್ಲದೆ ಬೇರೆ ಯಾರಿಗೂ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿಯಾಗಲೀ ಇಲ್ಲವೆಂದೇ ಪರಿಗಣಿಸಿ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಖರೀದಿಸುವರು.

ಷೆಡ್ಯೂಲ್ ಸ್ವತ್ತು

ಮೈಸೂರು ಸಿಟಿ–570 011, ನಜರ್‌ಬಾದ್ ಮೊಹಲ್ಲಾ, ಸಿದ್ಧಾರ್ಥ ನಗರ, ವಿಹಾರ ಮಾರ್ಗ, ಸ್ವತ್ತಿನ ಸಂಖ್ಯೆ 1381/1C1, N-1/C-1, ಮೈಸೂರು ಮಹಾನಗರ ಪಾಲಿಕೆಯಿಂದ ನೀಡಿರುವ ಫಾರಂ 2ರ ಪ್ರಕಾರ ಇ–ಸ್ವತ್ತಿನ ಸಂಖ್ಯೆ 63–2–700–1381/1C ಯನ್ನು ಹೊಂದಿರುವ ಸ್ವತ್ತಿನ ಒಟ್ಟು ವಿಸ್ತೀರ್ಣ 763.57 ಚದರ ಮೀಟರ್ ಉಳ್ಳ ಸ್ವತ್ತು ಮತ್ತು ಈ ಸ್ವತ್ತಿಗೆ ಚೆಕ್ಕುಬಂದಿ : ಪೂರ್ವಕ್ಕೆ : ಸನ್ಮಾರ್ಗ ಅಡ್ಡ ರಸ್ತೆ, ಪಶ್ಚಿಮಕ್ಕೆ ಖಾಸಗಿ ಸ್ವತ್ತು, ಉತ್ತರಕ್ಕೆ : ಖಾಸಗಿ ಸ್ವತ್ತು, ದಕ್ಷಿಣಕ್ಕೆ : ಸ್ವತ್ತಿನ ಸಂಖ್ಯೆ 1381/1C N-1/C ರ ಉಳಿಕೆ ಸ್ವತ್ತು.

ಸಹಿ/– **ಕೆ.ಎನ್. ಮಹಾದೇವಸ್ವಾಮಿ,** ಬಿ.ಎಸ್.ಸಿ., ಎಲ್.ಎಲ್.ಬಿ., ವಕೀಲರು ಮತ್ತು ನೋಟರಿ, ನಂ. 725, 727, ರೂಂ ನಂ. ಎಫ್–1 ಮತ್ತು 2, ಒಂದನೇ ಮಹಡಿ, 5ನೇ ಕ್ರಾಸ್, ಅಲ್ಲಮ್ಮ ಪ್ರಭು ಕಾಂಪ್ಲೆಕ್ಸ್, ರಾಮಾನುಜ ರಸ್ತೆ, ಮೈಸೂರು–570 004. Mob: 94482-22522,
ದಿನಾಂಕ: 02–12–2025 Office: 0821-4287998.

ಕರ್ನಾಟಕ ಸರ್ಕಾರ

ಉಪನಿರ್ದೇಶಕರವರ ಕಛೇರಿ ಶಾಲಾ ಶಿಕ್ಷಣ ಇಲಾಖೆ,

ಡಿ.ಸುಬ್ಬಯ್ಯ ರಸ್ತೆ, ಮೈಸೂರು–04
E-mail Id:ddpimys@gmail.com & ddpi.edu.karmys@kar.nic.in ದೂ.ಸಂ.:0821–2490025
ಸಂಖ್ಯೆ:ಎ8/ಸಿ4/ಕೆ.ಪಿ.ಎಸ್ ಕಲಿಕಾ ಸಾಮಾಗ್ರಿ/01/2024–25 ದಿ: 28.11.2025

ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ

(Notice Inviting Short term Tender through E-Procurement)

2025–26ನೇ ಸಾಲಿನಲ್ಲಿ ಮೈಸೂರು ಜಿಲ್ಲೆಯ ಶಾಲಾ ಶಿಕ್ಷಣ ಇಲಾಖೆಯ ವಿವಿಧ ಸರ್ಕಾರಿ ಶಾಲೆಗಳಿಗೆ ಕೆ.ಪಿ.ಎಸ್ ಶಾಲೆಗಳಲ್ಲಿ ಕಂಪ್ಯೂಟರ್ ಲ್ಯಾಬ್ ಸ್ಥಾಪಿಸುವ ಸಲುವಾಗಿ ಪರಿಕರಗಳನ್ನು ಖರೀದಿ ಮಾಡಲು ದ್ವಿ–ಲಕೋಟೆ ಪದ್ಧತಿಯಲ್ಲಿ ಇಚ್ಚೆಯುಳ್ಳ ಟೆಂಡರ್‌ದಾರರಿಗೆ ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ 1999 ಮತ್ತು ನಿಯಮಗಳು 2000ರ ಅಡಿಯಲ್ಲಿ ಸ್ಪರ್ಧಾತ್ಮಕ ದರಗಳಿಗೆ "ಇ" ಟೆಂಡರ್ ಆಹ್ವಾನಿಸಲಾಗಿದೆ. ಅರ್ಹ ಸಂಸ್ಥೆಯವರು ಇ ಪ್ರಕ್ಯೂರಮೆಂಟ್ ಪೋರ್ಟಲ್ www.eproc.karnataka.gov.in ಮುಖಾಂತರ ಭಾಗವಹಿಸುವುದು. **1)** ಟೆಂಡರ್ ಪ್ರಕಟಣೆ ದಿ: 25.11.2025 **2)** ಟೆಂಡರ್‌ಗಿಟ್ಟ ಮೊತ್ತ 41.60 ಲಕ್ಷ **3)** ಟೆಂಡರ್ ಫಾರಂ ಡೌನ್ ಲೋಡ್ ಮಾಡಲು ಪ್ರಾರಂಭಿಸಲು ದಿ: 25.11.2025 **4)** ಟೆಂಡರ್ ಫಾರಂ ಅಪ್‌ಲೋಡ್ ಮಾಡಲು ಕೊನೆಯ ದಿ: 25.11.2025 ರಿಂದ 08.12.2025 **5)** Technical Bid ನ್ನು ತೆರೆಯುವ ಸ್ಥಳ, ವೇಳೆ ಮತ್ತು ದಿನಾಂಕ ಡಿಡಿಪಿಐ ಕಛೇರಿ, ಮೈಸೂರು **6)** Financial Bid ನ್ನು ತೆರೆಯುವ ಸ್ಥಳ ಮತ್ತು ದಿನಾಂಕ ಡಿಡಿಪಿಐ ಕಛೇರಿ, ಮೈಸೂರು **7)** ಟೆಂಡರ್‌ನೊಂದಿಗೆ ಪಾತಿಸಬೇಕಾದ ಇ.ಎಂ.ಡಿ ಮೊತ್ತ 83200 **8)** ವ್ಯವಹರಿಸಬೇಕಾದ ಅಧಿಕಾರಿ ಹಾಗೂ ವಿಳಾಸ, ದೂರವಾಣಿ ಸಂಖ್ಯೆ ಉಪನಿರ್ದೇಶಕರವರ ಕಛೇರಿ ಶಾಲಾ ಶಿಕ್ಷಣ ಇಲಾಖೆ, ಡಿ.ಸುಬ್ಬಯ್ಯ ರಸ್ತೆ, ಮೈಸೂರು–04 E-mail Id:ddpimys@gmail.com & ddpi.edu.karmys@kar.nic.in ದೂ.ಸಂ.:0821–2490025 **9)** ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ ವಿಳಾಸ www.eproc.karnataka.gov.in ಟೆಂಡರ್ ತಪಶೀಲುಗಳಿಗೆ NEFT (ONLINE) ನಲ್ಲಿ ಅರ್ಜಿ ಸಲ್ಲಿಸುವ ಆಸಕ್ತರು ನಿಗಧಿಪಡಿಸಿದ ದಿನಾಂಕಕ್ಕೆ ಸಲ್ಲಿಸಬೇಕಾಗುತ್ತದೆ.

DIPR/DDMYS/1300/KSMCA/737/2025-26 ಸಹಿ/– ಉಪನಿರ್ದೇಶಕರು(ಆಡಳಿತ)

ಮೈಸೂರು ಅರಮನೆ ಮಂಡಳಿ, ಮೈಸೂರು

ಟೆಂಡರ್ ಅಧಿಸೂಚನೆ ಸಂಖ್ಯೆ: ಕಾನಿಅ/ಅಮಂ/ಉನಿ/ಸಕಾಇಂ/ಸಇಂ/ಟೆಂಡರ್ ಸಂಖ್ಯೆ: 11/2025–26 ದಿನಾಂಕ: 01.12.2025

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಉಪ ನಿರ್ದೇಶಕರು, ಅರಮನೆ ಮಂಡಳಿ, ಮೈಸೂರು ಇವರಿಂದ ಮೈಸೂರು ಅರಮನೆಯ ಆವರಣದಲ್ಲಿ ಒಟ್ಟು ಅಂದಾಜು ಮೊತ್ತ ರೂ.19.00 ಲಕ್ಷಗಳ ಅರಮನೆ ವಿದ್ಯುತ್ ಉಪ–ವಿಭಾಗಕ್ಕೆ ಸಂಬಂಧಿಸಿದ ಒಟ್ಟು 02 ಸಂಖ್ಯೆ ವಾರ್ಷಿಕ ನಿರ್ವಹಣೆ ಹಾಗೂ 01 ಸಂಖ್ಯೆ ದುರಸ್ಥಿ ಕಾಮಗಾರಿ ಹಾಗೂ 01 ಸಂಖ್ಯೆ ಖರೀದಿಗೆ ಸಂಬಂಧಿಸಿದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ನೊಂದಾಯಿತ ಅರ್ಹ ವಿದ್ಯುತ್ ಗುತ್ತಿಗೆದಾರರಿಂದ/ನೋಂದಾಯಿತ ಏಜೆನ್ಸಿ ಯವರಿಂದ ದ್ವಿಪ್ರತಿಯಲ್ಲಿ ಮೊಹರಾದ ಲಕೋಟೆಯಲ್ಲಿ ಐಟಂವಾರು ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. **1)** ಖಾಲಿ ಟೆಂಡರ್ ಫಾರಂ ಕೋರಿ ಅರ್ಜಿ ಸಲ್ಲಿಸಲು ಕೊನೆಯ ದಿ: 15.12.2025 ಮಧ್ಯಾಹ್ನ 4:00 ಗಂಟೆಯ ವರೆಗೆ. **2)** ಖಾಲಿ ಟೆಂಡರ್ ಫಾರಂಗಳನ್ನು ಗುತ್ತಿಗೆದಾರರಿಗೆ ನೀಡುವ ದಿ:16.12.2025 ಸಂಜೆ 4:00 ಗಂಟೆಯವರೆಗೆ. **3)** ಭರ್ತಿ ಮಾಡಿದ ಟೆಂಡರ್ ಸ್ವೀಕರಿಸುವ ದಿ: 17.12.2025 ಬೆಳ್ಳಿಗ್ಗೆ 4.00 ಗಂಟೆಯವರೆಗೆ. **4)** ಟೆಂಡರ್‌ಗಳನ್ನು ತೆರೆಯುವ ದಿ:17.12.2025ರ ಬೆಳ್ಳಿಗ್ಗೆ 4.30 ಗಂಟೆಗೆ. **5)** ಟೆಂಡರ್‌ಗಿಟ್ಟಿರುವ ಗರಿಷ್ಠ ಮೊತ್ತ ರೂ.5.00 ಲಕ್ಷಗಳು ಹಾಗೂ ಕನಿಷ್ಠ ಮೊತ್ತ ರೂ.4.00 ಲಕ್ಷಗಳು. ಯಾವುದಾದರೂ ಅಥವಾ ಎಲ್ಲಾ ಟೆಂಡರ್‌ಗಳನ್ನು ಯಾವ ಕಾರಣಗಳನ್ನೂ ನೀಡದೆ ಸ್ವೀಕರಿಸುವ/ತಿರಸ್ಕರಿಸುವ ಹಕ್ಕು ಉಪ–ನಿರ್ದೇಶಕರು, ಮೈಸೂರು ಅರಮನೆ ಮಂಡಳಿ, ಮೈಸೂರು ರವರಿಗೆ ಸೇರಿರುತ್ತದೆ. ಇಷ್ಟಲ್ಲದೆ ಇನ್ನುಳಿದ ಯಾವುದಾದರೂ ಮಾಹಿತಿಗಳನ್ನು ಗುತ್ತಿಗೆದಾರರು ಬಯಸಿದ್ದಲ್ಲಿ ಅವುಗಳನ್ನು ಈ ಕಛೇರಿಯ ಕೆಲಸದ ಎಲ್ಲಾ ದಿನಗಳಂದು ಮತ್ತು ಕಛೇರಿಯ ವೇಳೆಯಲ್ಲಿ ಪಡೆಯಬಹುದು. ಒಂದು ವೇಳೆ ಮೇಲೆ ನೀಡಲಾಗಿರುವ ದಿನಗಳು ಸಾರ್ವಜನಿಕ ರಜಾ ದಿನಗಳಾಗಿದ್ದಲ್ಲಿ ಅನಂತರದ ದಿನಗಳನ್ನು ಪರಿಗಣಿಸಲಾಗುವುದು.

ಸಹಿ/– ಉಪ–ನಿರ್ದೇಶಕರು, ಮೈಸೂರು ಅರಮನೆ ಮಂಡಳಿ, ಮೈಸೂರು
DIPR/DDMYS/1311/KSMCA/736/2025-26

ಹಾಸನ ಮಹಾನಗರ ಪಾಲಿಕೆ, ಹಾಸನ. ಬಿ.ಎಂ.ರಸ್ತೆ, ಸಂತೇಪೇಟೆ ವೃತ್ತ, ಹಾಸನ–573201.

web:http://www.hassancity.gov.in Email: ka.hassancmc@gmail.com ದೂರವಾಣಿ: 08172– 268276 ಸಹಾಯವಾಣಿ: 08172–233702 ಫ್ಯಾಕ್ಸ್: 08172–234792
ನಂ:ಪೌಆ/ಹಾಮನಪಾ/ತಾಂತ್ರಿಕ ಶಾಖೆ/10/2025–26
ದಿನಾಂಕ:02/12/2025

ಟೆಂಡರ್ ಪ್ರಕಟಣೆ : ಇ ಪ್ರೊಕ್ಯೂರ್‌ಮೆಂಟ್ ಮೂಲಕ :

2025–26ನೇ ಸಾಲಿನ ಸ್ಥಳೀಯ ಸಂಸ್ಥೆಯ ಅನುದಾನದಡಿಯಲ್ಲಿ, ವಿವಿಧ ವಾರ್ಷಿಕ ನಿರ್ವಹಣೆ ಕಾಮಗಾರಿ/ಕೆಲಸಗಳ ಅನುಷ್ಠಾನಕ್ಕಾಗಿ ಅರ್ಹ ಗುತ್ತಿಗೆದಾರರುಗಳಿಂದ ಪಾರದರ್ಶಕತೆ ಅಧ್ಯಾದೇಶ 2000ದ ಅನ್ವಯ ಐಟಂವಾರು ದರಗಳ ಟೆಂಡರನ್ನು ಇ–ಪ್ರೊಕ್ಯೂರ್‌ಮೆಂಟ್ ಕೆ.ಪಿ.ಪಿ.ಪಿ ಪೋರ್ಟಲ್(http://www.kppp.karnataka.gov.in) ಮೂಲಕ ಟೆಂಡರ್ ಕರೆಯಲಾಗಿದ್ದು, ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತರಾದ ಅರ್ಹ ದರ್ಜೆ ಗುತ್ತಿಗೆದಾರರಿಂದ ಸದರಿ ಟೆಂಡರ್‌ನಲ್ಲಿ ಕನಿಷ್ಠ ಟೆಂಡರ್ ಮೊತ್ತ ರೂ.5.00ಲಕ್ಷ ಹಾಗೂ ಗರಿಷ್ಠ ಮೊತ್ತ ರೂ.50.00ಲಕ್ಷಗಳ ಟೆಂಡರ್‌ಗಳನ್ನು ಸಲ್ಲಿಸಲು ಕಡೆಯ ದಿನಾಂಕ:17/12/2025ರ ಸಂಜೆ 5.30 ಗಂಟೆಯೊಳಗೆ ಟೆಂಡರ್ ಸಲ್ಲಿಸಬಹುದಾಗಿದೆ. ಹೆಚ್ಚಿನ ವಿವರಕ್ಕಾಗಿ ಹಾಸನ ಮಹಾನಗರ ಪಾಲಿಕೆಯ ಟೆಂಡರ್ ಶಾಖೆ ಹಾಗೂ ಸಹಾಯಕ ಕಾರ್ಯಪಾಲಕ ಅಭಿಯಂತರರು, ಹಾಸನ ಮಹಾನಗರ ಪಾಲಿಕೆ, ಹಾಸನ ಇವರಿಂದ ಕಛೇರಿಯ ವೇಳೆಯಲ್ಲಿ ಪಡೆಯಬಹುದು ದೂರವಾಣಿ:08172–268276. ಸೂಚನೆ: ಮೇಲ್ಕಾಣಿಸಿದ ದಿನಾಂಕಗಳಲ್ಲಿ ಸಾರ್ವಜನಿಕ ರಜೆ ಎಂದು ಘೋಷಣೆ ಮಾಡಿದ್ದಲ್ಲಿ ರಜಾ ದಿನದ ಕೆಲಸದ ಮುಂದಿನ ಕೆಲಸದ ದಿನಾಂಕವನ್ನು ಪರಿಗಣಿಸಿಕೊಳ್ಳತಕ್ಕದ್ದು.

ಸಹಿ/–ಆಯುಕ್ತರು, ಮಹಾನಗರ ಪಾಲಿಕೆ, ಹಾಸನ.
ವಾಸಾಸಂಇ/ಹಿಸನಿ/ಹಾಸನ/818/ಕೆಎಸ್‌ಎಂಸಿಎ/2025–26

ಉತ್ತರ ಕ್ರಿಯಾದಿ ಭೂಶಾಂತಿ ಆಹ್ವಾನ ಪತ್ರಿಕೆ

ಭಾವಪೂರ್ಣ ಶ್ರದ್ಧಾಂಜಲಿ



ಶ್ರೀಮಾನ್ ರವಿಕುಮಾರ್

(ನೀರು ಬಳಕೆದಾರರ ಸಹಕಾರ ಸಂಘದ ಅಧ್ಯಕ್ಷರು)

ಮೈಸೂರು ಜಿಲ್ಲೆ, ತಿ.ನರಸೀಪುರ ತಾಲೂಕು, ಕಸಬಾ ಹೋಬಳಿ, ಹಳೇ ಕೆಂಪಯ್ಯನಹುಂಡಿ ಗ್ರಾಮದಲ್ಲಿ ವಾಸವಾಗಿರುವ ಶ್ರೀಮತಿ ಲೇ|| ತುಳಸಮ್ಮ ಮತ್ತು ಶ್ರೀ ಲೇ|| ಜವರೇಗೌಡ ಇವರ ಸೊಸೆಯಾದ ಶ್ರೀಮತಿ ಸವಿತ ರವರು ಮಾಡುವ ವಿಜ್ಞಾಪನೆಗಳು ದಿನಾಂಕ 24–11–2025ನೇ ಸೋಮವಾರ ನನ್ನ ಪೂಜ್ಯ ಪತಿಯವರಾದ **ಶ್ರೀಮಾನ್ ರವಿಕುಮಾರ್** ರವರು ದೈವಾದೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧವಾಗಿ ದಿನಾಂಕ 04–12–2025 ಗುರುವಾರ ಬೆಳಿಗ್ಗೆ 11–00 ಗಂಟೆಗೆ ನಮ್ಮ ಸ್ವಗೃಹ, ಹಳೇ ಕೆಂಪಯ್ಯನಹುಂಡಿ ಗ್ರಾಮ, ತಿ.ನರಸೀಪುರ ತಾಲೂಕು ಇಲ್ಲಿ ಹಾಲು–ತುಪ್ಪ ಕಾರ್ಯ ಮತ್ತು ಉತ್ತರ ಕ್ರಿಯಾದಿ ಕಾರ್ಯವನ್ನು ಏರ್ಪಡಿಸಿರುವುದರಿಂದ ಆಹ್ವಾನ ಪತ್ರಿಕೆ ತಲುಪದೇ ಇದ್ದವರು ಇದನ್ನೇ ಆಹ್ವಾನ ಪತ್ರಿಕೆ ಎಂದು ಪರಿಗಣಿಸಿ ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಶಾಂತಿ ಕೋರಬೇಕಾಗಿ ವಿನಂತಿ.

ದುಃಖತಪ್ತರು : ಮೃತರ ಪತ್ನಿ ಶ್ರೀಮತಿ ಸವಿತ ಮತ್ತು ಮಕ್ಕಳು, ಅಳಿಯಂದಿರು, ಸಹೋದರ–ಸಹೋದರಿಯರು, ಮೊಮ್ಮಕ್ಕಳು ಹಾಗೂ ಕುಟುಂಬವರ್ಗದವರು ಮತ್ತು ಬಂಧು ಮಿತ್ರರು ಹಾಗೂ ಗ್ರಾಮಸ್ಥರು

ಭೋಜನ ಮಧ್ಯಾಹ್ನ 1 ಗಂಟೆಗೆ